ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ


Swabhimani Sahakari

Pages : 44 / 12₹


# ಸ್ವಾಭಿಮಾನಿ ಸಹಕಾರಿ


ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 16
Issue - 9
September - 2019


## ದಸರಾ ಸಂಭ್ರಮ ವಿವಿಧೆಡೆ ವಿವಿಧ ಬಗೆ




















ಸೌಹಾರ್ದ ಸಹಕಾರಿಗಳ
ಸಂಖ್ಯೆ : 4762

ಇ–ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1282

ಸಂಯುಕ್ತ ಸಹಕಾರಿಯ
**18ನೇ**
**ವಾರ್ಷಿಕ ಸಾಮಾನ್ಯ ಸಭೆ**

ದಿನಾಂಕ: 18ನೇ ಸೆಪ್ಟೆಂಬರ್ 2019, ಬುಧವಾರ

ಸ್ಥಳ: ಶ್ರೀ ಬಸವೇಶ್ವರ ಸುಜ್ಞಾನ ಮಂಟಪ,
ನಂ 2/ಎ, 17ನೇ ಮುಖ್ಯರಸ್ತೆ,
ಎಂಆರ್‌ಸಿಆರ್ ಲೇಔಟ್, ಬಿಎಸ್‌ಎನ್‌ಎಲ್
ಟೆಲಿಫೋನ್ ಎಕ್ಸ್‌ಚೇಂಜ್ ಹಾಗೂ ಹೊಸಹಳ್ಳಿ
ಮೆಟ್ರೊ ಸ್ಟೇಷನ್ ಹತ್ತಿರ, ವಿಜಯನಗರ,
ಬೆಂಗಳೂರು-560040

SCAN FOR VENUE
ADDRESS

# ನೆರೆ ಸಂತ್ರಸ್ತರಿಗೆ ಸೌಹಾರ್ದ ಸಹಕಾರಿಗಳ ಉದಾರ ನೆರವು



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

"ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಹಾಗೂ ಸಂಘಗಳು ತಮ್ಮ ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸುತ್ತಿರುವ ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯು ತಮ್ಮಲ್ಲಿ ವಿನಂತಿಸುವುದೇನೆಂದರೆ ತಮಗೆ ತಿಳಿದಂತೆ ರಾಜ್ಯದ ಬೆಳಗಾವಿ ವಿಭಾಗದ ಬಹುತೇಕ ಜಿಲ್ಲೆಗಳಲ್ಲಿ ವಿಶೇಷವಾಗಿ ಬೆಳಗಾವಿ ಜಿಲ್ಲೆಯಲ್ಲಿ ಮತ್ತು ಮೈಸೂರು ವಿಭಾಗದ ವಿಶೇಷವಾಗಿ ಕೊಡಗು ಜಿಲ್ಲೆಯಲ್ಲಿ ಹೀಗೆ ಒಟ್ಟಾರೆ ರಾಜ್ಯದ 12-15 ಜಿಲ್ಲೆಗಳಲ್ಲಿ ಮಳೆ ಹಾಗೂ ನೆರೆ ಹಾವಳಿಯಿಂದ ಜನಜೀವನ ಅಸ್ತವ್ಯಸ್ತವಾಗಿದೆ."

ಆತ್ಮೀಯ ಸಹಕಾರಿ ಬಂಧುಗಳಿಗೆ ಗೌರಿ ಗಣೇಶ ಹಬ್ಬದ ಶುಭಾಶಯಗಳು. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಗೌರಿ ಗಣೇಶ ಹಬ್ಬವು ಹೊಸ ಉತ್ಸಾಹ ಹಾಗೂ ಚೈತನ್ಯವನ್ನು ನೀಡಿ ಸಹಕಾರಿಗಳು ಅಭಿವೃದ್ಧಿ ಪಥದತ್ತ ಸಾಗುವಂತಾಗಲಿ ಎಂದು ಸಂಯುಕ್ತ ಸಹಕಾರಿಯು ಹಾರೈಸುತ್ತದೆ.

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಹಾಗೂ ಸಂಘಗಳು ತಮ್ಮ ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸುತ್ತಿರುವ ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯು ತಮ್ಮಲ್ಲಿ ವಿನಂತಿಸುವುದೇನೆಂದರೆ ತಮಗೆ ತಿಳಿದಂತೆ ರಾಜ್ಯದ ಬೆಳಗಾವಿ ವಿಭಾಗದ ಬಹುತೇಕ ಜಿಲ್ಲೆಗಳಲ್ಲಿ ವಿಶೇಷವಾಗಿ ಬೆಳಗಾವಿ ಜಿಲ್ಲೆಯಲ್ಲಿ ಮತ್ತು ಮೈಸೂರು ವಿಭಾಗದ ವಿಶೇಷವಾಗಿ ಕೊಡಗು ಜಿಲ್ಲೆಯಲ್ಲಿ ಹೀಗೆ ಒಟ್ಟಾರೆ ರಾಜ್ಯದ 12–15 ಜಿಲ್ಲೆಗಳಲ್ಲಿ ಮಳೆ ಹಾಗೂ ನೆರೆ ಹಾವಳಿಯಿಂದ ಜನಜೀವನ ಅಸ್ತವ್ಯಸ್ತವಾಗಿದೆ. ಕೆಲವು ಜನರ ಹಾಗೂ ಅನೇಕ ಜಾನುವಾರುಗಳು ಪ್ರಾಣಹಾನಿಯಾಗಿದೆ. ಲಕ್ಷಾಂತರ ಎಕರೆ ಭೂಮಿ ಜಲಾವೃತವಾಗಿ ಬೆಳೆನಾಶವಾಗಿದೆ. ಲಕ್ಷಾಂತರ ಮನೆಗಳು ಕುಸಿದಿವೆ, ಕೊಚ್ಚಿಹೋಗಿವೆ ಜನರು ನಿರಾಶ್ರಿತರಾಗಿದ್ದಾರೆ ಲಕ್ಷಾಂತರ ಜನರು ನಿರಾಶ್ರಿತರಾಗಿ ಪ್ರತಿದಿನದ ಅನ್ನ, ಆಹಾರ, ವಸತಿ, ಆರೋಗ್ಯ ಹಾಗೂ ಬಟ್ಟೆಗಳಿಗೆ ಪರದಾಡುವಂತಾಗಿದೆ. ಅವರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಸರಕಾರಗಳು, ಸ್ವಯಂ ಸೇವಾ ಸಂಸ್ಥೆಗಳು, ವ್ಯಕ್ತಿಗಳು ಕಂಪನಿಗಳು ಅವರವರ ಶ್ಯಕ್ತಾನುಸಾರ ಉದಾರವಾಗಿ ಅವರ ವ್ಯಾಪ್ತಿಯಲ್ಲಿ ನೆರವು ನೀಡುತ್ತಿದ್ದಾರೆ. ಇದು ಸ್ವಾಗತಾರ್ಹ.

ಅದರಂತೆ ರಾಜ್ಯದ 4750 ಸೌಹಾರ್ದ ಸಹಕಾರಿಗಳು ಈ ಬಗ್ಗೆ ಸೂಕ್ತ ಹಾಗೂ ತ್ವರಿತ ಕ್ರಮವಿಡಲು ಮುಂದಾಗಬೇಕಿದೆ. ಸಂಯುಕ್ತ ಸಹಕಾರಿಯು ಈಗಾಗಲೇ ಈ ಬಗ್ಗೆ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಸುತ್ತೋಲೆ ನೀಡಿದೆ. ಮತ್ತು ನಾನು ಹಲವಾರು ಜಿಲ್ಲೆಗಳಲ್ಲಿ ನಡೆಸಿದ ಸಂಪರ್ಕ ಸಭೆಗಳಲ್ಲಿ ಹಾಗೂ ಪತ್ರಿಕಾಗೋಷ್ಠಿಗಳಲ್ಲಿ ಎಲ್ಲ ಸೌಹಾರ್ದ ಸಹಕಾರಿಗಳಲ್ಲಿ ಮನವಿ ಮಾಡಿದ್ದೇನೆ. ಹಲವಾರು ಸೌಹಾರ್ದ ಸಹಕಾರಿಗಳು ತಮ್ಮ ಸೌಹಾರ್ದ ಸಹಕಾರಿಯ ವತಿಯಿಂದ ಸಂಯುಕ್ತ ಸಹಕಾರಿಗೆ ಚೆಕ್ ನೀಡುವ ಮೂಲಕ ಸಂತ್ರಸ್ತರಿಗೆ ನೆರವಿನ ಹಸ್ತವನ್ನು ನೀಡುತ್ತಿದ್ದಾರೆ. ನೇರವು ನೀಡಿದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯು ಕೃತಜ್ಞತೆಯನ್ನು ಸಲ್ಲಿಸುತ್ತದೆ.

ನೆರೆ ಸಂತ್ರಸ್ತರಿಗೆ ನೆರವು ನೀಡದಿರುವವರು ಕೂಡಲೇ ತಮ್ಮ ಸಹಕಾರಿಯ ವತಿಯಿಂದ ಧನಸಹಾಯವನ್ನು ಸಂಯುಕ್ತ ಸಹಕಾರಿಗೆ ಕಳುಹಿಸಲು ಕ್ರಮವಿಡಲು ಕೋರುತ್ತೇನೆ. ತಾವು ನೀಡುವ ಸಹಾಯ ಹಸ್ತ ನೆರೆ ಸಂತ್ರಸ್ತರಿಗೆ ನೆರೆ ತೊಂದರೆಗಳಿಂದ ಬೇಗ ಮುಕ್ತವಾಗಿಸಲು ಬಹಳ ಸಹಕಾರಿಯಾಗುತ್ತದೆ ಎಂಬುದನ್ನು ತಾವು ಗಮನಿಸಿ ಉದಾರವಾಗಿ ಶೀಘ್ರವಾಗಿ ತಮ್ಮ ಸಹಾಯಹಸ್ತ ನೀಡುವಿರಾಗಿ ಆಶಿಸುತ್ತೇನೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್: souharda@souharda.coop
swabhimani@souharda.coop
ವೆಬ್‌ಸೈಟ್: www.souharda.coop

ಒಳಪುಟಗಳಲ್ಲಿ. . .

ಜ್ಞಾನ ಜ್ಯೋತಿ ................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು ... .................................................. 5–20
ಸೌಹಾರ್ದ ಸಹಕಾರಿಗಳ ಸಮಾಚಾರಗಳು ... .................................................... 21–36
ಲೇಖನ........................................ 37–41
ಆರ್‌ಬಿ.ಐ. ನ್ಯೂಸ್..................... 42–44

# ಸಂಪಾದಕೀಯ

## ಹೊಸ ಅವಕಾಶಗಳ ಹಾಗೂ ಆಯಾಮಗಳ ಅನ್ವೇಷಣೆಗೆ ಪ್ರಾಧಾನ್ಯತೆ

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಹಾಗೂ ಸಂಘಗಳು ತಮ್ಮ ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸುತ್ತಿವೆ. ಈ ಸಂದರ್ಭದಲ್ಲಿ ಸಹಕಾರಿಗಳ ಪ್ರಮುಖ ಆಲೋಚನೆ ಸಹಕಾರಿಯ ಪ್ರಗತಿಯತ್ತ ಗಮನ ಹರಿಸಬೇಕಾಗಿರುವುದು ಅವಶ್ಯಕ. ವಾರ್ಷಿಕ ಸಾಮಾನ್ಯ ಸಭೆಗಳು ಪ್ರತಿವರ್ಷ ಮಾಡಲೇಬೇಕಾದ ಶಾಸನಬದ್ಧ ಕರ್ತವ್ಯ ಎಂಬ ಭಾವನೆಯ ಜೊತೆಗೆ ಇದು ಸಹಕಾರಿಗಳ ಸದಸ್ಯರ ವಾರ್ಷಿಕ ಹಬ್ಬದಂತೆ ಎಂದು ಪರಿಗಣಿಸುವುದು ಅವಶ್ಯಕ. ಬದಲಾವಣೆ ಜಗದ ನಿಯಮ. ಬದಲಾವಣೆಯು ಸೌಹಾರ್ದ ಸಹಕಾರಿಗಳಿಗೆ ಧನಾತ್ಮಕ ಪರಿಣಾಮಗಳನ್ನು ನೀಡುವಂತಿರಬೇಕು. ಸಮಾಜ ಗುರುತಿಸುವಂತಿರಬೇಕು.

ಪ್ರಗತಿ ಕೇವಲ ಸಾಂಪ್ರದಾಯಿಕ ಲೇವಾದೇವಿ (ಠೇವಣಿ ಸಂಗ್ರಹಿಸುವುದು ಸಾಲ ಕೊಡುವುದು ಸಾಲ ವಸೂಲು ಮಾಡುವುದು) ವ್ಯವಹಾರಗಳಿಂದ ಲಾಭಾಂಶಗಳನ್ನು ಹೆಚ್ಚಿಸುವುದರಿಂದ ಅಥವಾ ಸದಸ್ಯರಿಗೆ ಹೆಚ್ಚಿನ ಲಾಭಾಂಶಗಳನ್ನು ಘೋಷಿಸುವುದರಿಂದ ಸಾಧ್ಯವಾಗುವುದಿಲ್ಲ. ಸದಸ್ಯರ ದಿನನಿತ್ಯದ ಬೇಡಿಕೆಗಳಿಗೆ ಅನುಗುಣವಾಗಿ ಮತ್ತು ಸದಸ್ಯರಿಗೆ ಸಹಕಾರಿಯತ್ತ ಗಮನ ಸೆಳೆಯುವ ಅವರಿಂದ ಪ್ರೋತ್ಸಾಹ ಹಾಗೂ ಅವರಿಗೆ ಸಹಕಾರಿಯ ಚಟುವಟಿಕೆಗಳಲ್ಲಿ ಉತ್ಸಾಹ ಬರುವಂತೆ ಮಾಡುವ ಕಾರ್ಯಗಳನ್ನು ಹಮ್ಮಿಕೊಳ್ಳುವುದರಿಂದ ಸಾಧ್ಯವಾಗುತ್ತದೆ ಎಂದು ತಿಳಿಯಬೇಕಾದುದು ಅಗತ್ಯ.

ಸೌಹಾರ್ದ ಸಹಕಾರಿಗಳು ಪ್ರಸ್ತುತ ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳು, ಹೆಚ್ಚಿನ ಕೆಲಸಕಾರ್ಯಗಳನ್ನು ಹಮ್ಮಿಕೊಳ್ಳಬಹುದಾದ ಅವಕಾಶಗಳು, ವ್ಯಾಪ್ತಿಯಲ್ಲಿ ಸ್ವಾಭಾವಿಕ ಸಂಪನ್ಮೂಲಗಳ ಬಳಕೆಯಿಂದ ಒದಗಿಸಬಹುದಾದ ಸೌಲಭ್ಯಗಳು ವಿಶೇಷವಾಗಿ ಮಾನವ ಸಂಪನ್ಮೂಲಗಳ ಸದ್ಬಳಕೆ, ಶಿಕ್ಷಣ, ಆರೋಗ್ಯ ಹಣಕಾಸು ಮೂಲಗಳ ಸದ್ಬಳಕೆ ಹಾಗೂ ವ್ಯವಸ್ಥಿತ ನಿರ್ವಹಣೆ, ಸ್ಥಳೀಯ ಮಹತ್ವದ ಚಟುವಟಿಕೆಗಳ ವಿಷಯಗಳಲ್ಲಿ ಪ್ರವಾಸಿ ಆಕರ್ಷಣೆ, ಕೃಷಿ ವಸ್ತುಗಳ ಸಾಗಾಣಿಕೆ ಹಾಗೂ ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳ ನಿರ್ವಹಣೆ, ಕೃಷಿ ಪೂರಕ ಚಟುವಟಿಕೆಗಳಿಗೆ ಪ್ರೋತ್ಸಾಹ, ಸಾಂಕ್ರಮಿಕ ರೋಗಗಳ ಹಾಗೂ ಸಾಮಾಜಿಕ ಪಿಡುಗುಗಳ ನಿವಾರಣೆ, ಆಧುನಿಕ ತಾಂತ್ರಿಕತೆಯ ಅಳವಡಿಕೆ ಅದರ ಬಗ್ಗೆ ಶಿಕ್ಷಣ ನೀಡುವ ವ್ಯವಸ್ಥೆ, ಸಹಕಾರ ಸಂಸ್ಕಾರ ನೀಡುವ ಚಟುವಟಿಕೆಗಳು ಹಾಗೂ ವ್ಯಾಪ್ತಿಯ ಸಾಂಸ್ಕೃತಿಕ ಮತ್ತು ದೇಶದ ಅಭಿಮಾನ ಹೆಚ್ಚಿಸುವ ರಾಷ್ಟ್ರೀಯ ದಿನಗಳ ಆಚರಣೆ ಮುಂತಾದವುಗಳ ಬಗ್ಗೆ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಚಿಂತನೆಯಾಗುವುದರಿಂದ ಹೊಸ ಅವಕಾಶಗಳ ಅನ್ವೇಷಣೆಯಾಗುತ್ತದೆ. ಸೌಹಾರ್ದ ಸಹಕಾರಿಗಳಿಗೆ ಹಾಗೂ ಸದಸ್ಯರಿಗೆ ಹೊಸ ಆಯಾಮಗಳ ಪರಿಚಯವಾಗುತ್ತದೆ. ಇದರ ಜೊತೆಗೆ ಸೌಹಾರ್ದ ಸಹಕಾರಿಗಳ 50 ಲಕ್ಷ ಸದಸ್ಯರಿಗೆ ಆಯಾ ಸಹಕಾರಿಗಳ ಮೂಲಕ ವಿಮೆ ಮಾಡಿಸುವುದು, ಸಿಬ್ಬಂದಿಯವರಿಗೆ ಪಿಂಚಣಿ ಯೋಜನೆಯನ್ನು ಹಾಗೂ ನಿರ್ದೇಶಕರುಗಳಿಗೆ ಆರೋಗ್ಯ ವಿಮೆಯನ್ನು ಜಾರಿಗೊಳಿಸುವುದು ಕೂಡ ಸೌಹಾರ್ದ ಸಹಕಾರಿಗಳ ನೂತನ ಆಯಾಮಗಳಲ್ಲಿ ಒಂದಾಗಿದೆ. ಸೌಹಾರ್ದ ಸಹಕಾರಿಗಳ ಅಸ್ತಿತ್ವಕ್ಕೆ ಮೆರಗು ಬರುತ್ತದೆ. ಸಾರ್ವಜನಿಕರಿಗೆ ಸೌಹಾರ್ದ ಸಹಕಾರಿಗಳ ವೈಶಿಷ್ಠತೆಯ ಪರಿಚಯವಾಗುತ್ತದೆ. ರಾಜ್ಯ ಹಾಗೂ ದೇಶದಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳಲ್ಲಿ ವಿಭಿನ್ನತೆ ಅರಿವು ಪ್ರಚಾರವಾಗಲು ಹೆಚ್ಚು ಅವಕಾಶವಾಗುತ್ತದೆ.

## ಜ್ಞಾನ ಜ್ಯೋತಿ



ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

## "ತಾನು ಬಯಸುವುದು ಒಂದು ಆಗುವುದು ಮತ್ತೊಂದು"

ಭಕ್ತ ಭಗವಂತನ ಸಂಬಂಧ ಇಂದು ನಿನ್ನೆಯದಲ್ಲ. ಇದು ಶತಶತಮಾನಗಳಿಂದ ಬೆಳೆದು ಬಂದಿದ್ದು, ಇಂಥಹ ಸಂಬಂಧದಡಿ ನೆರವು ಪಡೆದ ಭಕ್ತರುಗಳಾಗಿ ಬೇಡರ ಕಣ್ಣಪ್ಪ, ಧೃವ, ಪ್ರಹ್ಲಾದ, ನಚಿಕೇತ, ಮಹಾಕವಿ ಕಾಳಿದಾಸ, ಇತ್ಯಾದಿಯವರುಗಳ ಮನಸ್ಸಿನ ಕೆಲವು ಶುದ್ಧ ಪ್ರಾರ್ಥನೆಗಳನ್ನು ಈಡೇರಿಸಿದ ಉದಾಹರಣೆಗಳು ನಮಗೆ ಕಾಣಸಿಗುತ್ತವೆ. ಆದರೆ ಭಕ್ತನ ಎಲ್ಲಾ ಆಸೆಗಳು ಅಥವಾ ಪ್ರಾರ್ಥನೆಗಳು ಈಡೇರಿವೆಯೆಂಬ ನಿದರ್ಶನ ತೀರಾ ಕಡಿಮೆಯೇನೂ ಇಲ್ಲವೇ ಇಲ್ಲವೆನ್ನಬಹುದು. ಹೀಗೆ ತನ್ನೆಲ್ಲಾ ಪ್ರಾರ್ಥನೆಗಳು ಈಡೇರದಿದ್ದಾಗ ಭಕ್ತನಾದವನು ಭಗವಂತನನ್ನು ತಾನೇಕೆ ಬೇರೆಯಿರಬೇಕು ನಮ್ಮೊಂದಿಗೇ ಇದ್ದು ನಮ್ಮೆಲ್ಲಾ ದಿನನಿತ್ಯದ ಪ್ರಾರ್ಥನೆಗಳನ್ನು ಈಡೇರಿಸುತ್ತಾ, "ಎಸಗಬಹುದಾದ ತಪ್ಪುಗಳನ್ನು ನಿರ್ಮೂಲನಗೊಳಿಸಬಹುದಿತ್ತಲ್ಲ", ಎಂಬ ಜಿಜ್ಞಾಸುಗಳ ಮನದಾಳದ ಪ್ರಶ್ನೆಗಳನ್ನು ಕುರಿತು ಆಧ್ಯಾತ್ಮಕವಿ ಡಿ.ವಿ.ಜಿ.ಯವರು ಈ ಕೆಳಗಿನ ಪದ್ಯವನ್ನು ನೀಡಿದ್ದಾರೆ.

"ಏಕವಾಗವೆ ದೈವ ಚಿತ್ತ ನರಚಿತ್ತಗಳು? ।
ಏಕೆನ್ನ ಮನವನಾಳನು ಲೋಕದೊಡೆಯಂ ॥
ಬೇಕೆನಿಪುದೊಂದೆನಗೆ ವಿಧಿಗೈಯ್ವುದಿನ್ನೊಂದು ।
ಈ ಕುಟಿಲಕೇಂ ಮದ್ದು" ॥ಮಂಕುತಿಮ್ಮ॥

ವ್ಯಕ್ತಿಗಳು ಸಹಜವಾಗಿ ಏಕಾಂಗಿಯಾಗಿದ್ದಾಗ ತಪ್ಪನ್ನೆಸಗುವುದು ಅಥವಾ ದುರಾಸೆಗಳ ಸೆಳವಿಗೆ ಸಿಕ್ಕಿಹಾಕಿಕೊಳ್ಳುವುದು ಸಹಜ ಪ್ರಕ್ರಿಯೆ. ಸದ್ಯಕ್ಕೆ ಯಾರೂ ಇಲ್ಲದಿದ್ದಾಗ ಕದಿಯುವ ಕಾರ್ಯವನ್ನೆಸಗುವ, ಲೈಂಗಿಕ ಅಕೃತ್ಯವನ್ನೆಸಗುವ, ಹಣದ ಪ್ರಭಾವಕ್ಕೊಳಗಾಗಿ ಪಾಪಬೀರುವಾಗುವ ಪ್ರಸಂಗಗಳನ್ನೆಸಗಿಯೂ, ಎಲ್ಲರ ಮಧ್ಯೆ ತಾನೊಬ್ಬ ಸಂಭಾವಿತನೆಂಬಂತೆ, ಈ ಕೃತ್ಯಗಳ ಬಗ್ಗೆ ಖಂಡತುಂಡವಾಗಿ ಮಾತಾಡುವ ಧೀರರೂ ಇಲ್ಲದಿಲ್ಲ.

ಏಕಾಂಗಿಯಾಗಿದ್ದಾಗ ಮಾರ್ಗದರ್ಶನದ ಕೊರತೆ, ಬೆಂಬಲದ ಕೊರತೆ ಹಾಗೂ ದುಷ್ಕೃತ್ಯಗಳ ಎಸಗುವಿಕೆ ಸಂಬಂಧ ಪ್ರತಿಬಂಧಕ ಪ್ರಕ್ರಿಯೆಗಳು ಇಲ್ಲವಾದಾಗ ವ್ಯಕ್ತಿಯು ಅಕೃತ್ಯಗಳಲ್ಲಿ ತೊಡಗಿಕೊಳ್ಳುವುದು ಸಹಜವೆಂಬಂಥಹ.

ಸೇನಾದಂಡನಾಯಕ ಯಾವಾಗಲೂ ಸೈನಿಕರೊಡನಿರಲು ಸಾಧ್ಯವಿಲ್ಲ ಹಾಗೂ ನಿರೂಪಿತ ಪದ್ಧತಿಯೂ ಅಲ್ಲ. ದಂಡನಾಯಕನೆಲ್ಲಿರುತ್ತಾನೋ ಅಲ್ಲಿಂದಲೇ ಆದೇಶಗಳನ್ನು ಕಳುಹಿಸುತ್ತಿರುತ್ತಾನೆ. ಅಂಥಹ ಆದೇಶಗಳನ್ನು ಜಾಣತನದಿಂದ ಅರ್ಥಮಾಡಿಕೊಂಡು ಜಾರಿಗೊಳಿಸಿ ಕದನದಲ್ಲಿ ಜಯಗಳಿಸುವುದು ಸೈನಿಕನ ಗುರಿ ಮತ್ತು ಧರ್ಮ. ಬದಲಿಗೆ ದಂಡನಾಯಕನೇ ನಮ್ಮೊಡನಿರಲಿ ಎಂಬುದು ಯುಕ್ತ ಮತ್ತು ಸಹಜ ಬೇಡಿಕೆಯಾಗುವುದಿಲ್ಲ.

ಪಶುಪ್ರಾಣಿ ಮೃಗಪಕ್ಷಿಗಳಿಗಿಂತ ಉತ್ಕೃಷ್ಟ ಜೀವಿಯಾದ ಮಾನವನು ಇಡೀ ಸೃಷ್ಟಿಯ ಸಮಸ್ತ ಜೀವಿಗಳನ್ನು ಪರಮಾತ್ಮನ ಮಕ್ಕಳೆಂದು ಅವರುಗಳ ಅಭ್ಯುದಯವನ್ನು ಸಾಧಿಸುವ ಕ್ಷೇತ್ರವಾದ ಸಹಕಾರ ಕ್ಷೇತ್ರದಲ್ಲಿ ತನ್ನನ್ನು ತೊಡಗಿಸಿಕೊಂಡು ಭಗವಂತನು ನಮ್ಮೆಲ್ಲ ಚಟುವಟಿಕೆಗಳನ್ನು ವೀಕ್ಷಿಸುತ್ತಿದ್ದಾನೆಂಬ ಭಾವದಿಂದ ಕಾರ್ಯಪ್ರವೃತ್ತವಾದಲ್ಲಿ ಸರ್ವರ ಅಭಿವೃದ್ಧಿಯಾಗಿ ತನ್ಮೂಲಕ ಸಮಾಜದ ಏಳಿಗೆಯಾಗಲಿದೆಯೆಂಬುದೇ ಡಿ.ವಿ.ಜಿ.ಯವರ ಈ ಪದ್ಯದ ಆಶಯವಾಗಿದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ:–6,721, ಬೆಂಗಳೂರು:–1,477, ಮೈಸೂರು:–750 ಹಾಗೂ ಕಲಬುರಗಿ :–1733 ವಿಭಾಗಗಳಿಂದ ದಾಖಲಾದ ದಾವಾ ಪ್ರಕರಣಗಳ ಒಟ್ಟು 10,681 ಆಗಿರುತ್ತದೆ. ಇವುಗಳ ಪೈಕಿ 5,283 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 5,398.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 1,974 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 201 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 141 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 1632 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 977 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 80 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 82 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 815 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

## ಕರ್ನಾಟಕ ಸರಕಾರದ ನೂತನ ಮಂತ್ರಿಗಳು ಹಾಗೂ ಖಾತೆಗಳು

| | | |
|---|---|---|
| 1 | ಶ್ರೀ ಬಿ.ಎಸ್.ಯಡಿಯೂರಪ್ಪ, ಮಾನ್ಯ ಮುಖ್ಯ ಮಂತ್ರಿಗಳು. | ಹಣಕಾಸು, ಕೃಷಿ, ತೋಟಗಾರಿಕೆ, ಜಲಸಂಪನ್ಮೂಲ, ಅರಣ್ಯ, ಆಹಾರ ಮತ್ತು ನಾಗರಿಕ ಪೂರೈಕೆ, ಜವಳಿ, ವೈದ್ಯಕೀಯ ಶಿಕ್ಷಣ, ರೇಷ್ಮೆ, ಸಹಕಾರ ಸಕ್ಕರೆ ಇಂಧನ, ಬೆಂಗಳೂರು ಅಭಿವೃದ್ಧಿ, ಬಂಧೀಖಾನೆ ಅಲ್ಪ ಸಂಖ್ಯಾತರ ಕಲ್ಯಾಣ. ಇತ್ಯಾದಿ |
| 2 | ಶ್ರೀ ಜಗದೀಶ ಶೆಟ್ಟರ್ | ಬೃಹತ್ ಕೈಗಾರಿಕೆ, ಮಾಧ್ಯಮ ಕೈಗಾರಿಕೆ ಹಾಗೂ ಸಣ್ಣಕೈಗಾರಿಕೆ ಸಚಿವರು. |
| 3 | ಶ್ರೀ ಬಸವರಾಜ ಬೊಮ್ಮಾಯಿ. | ಗೃಹ ಸಚಿವರು. |
| 4 | ಶ್ರೀ ಆರ್. ಅಶೋಕ | ಕಂದಾಯ ಸಚಿವರು |
| 5 | ಶ್ರೀ ಲಕ್ಷ್ಮಣ ಸವದಿ | ಸಾರಿಗೆ ಸಚಿವರು |
| 6 | ಶ್ರೀ ಕೆ.ಎಸ್.ಈಶ್ವರಪ್ಪ | ಗ್ರಾಮೀಣಾಭಿವೃದ್ಧಿ ಪಂಚಾಯತರಾಜ್ ಸಚಿವರು |
| 7 | ಶ್ರೀ ಶ್ರೀರಾಮುಲು | ಆರೋಗ್ಯ ಸಚಿವರು |
| 8 | ಶ್ರೀ ಸಿ.ಟಿ.ರವಿ | ಪ್ರವಾಸೋದ್ಯಮ, ಕನ್ನಡ ಸಂಸ್ಕೃತಿ ಸಚಿವರು |
| 9 | ಶ್ರೀ ಅಶ್ವತ್ಥನಾರಾಯಣ | ಉನ್ನತ ಶಿಕ್ಷಣ, ಐಟಿಬಿಟಿ ಸಚಿವರು |
| 10 | ಶ್ರೀ ವಿ. ಸೋಮಣ್ಣ | ವಸತಿ ಸಚಿವರು |
| 11 | ಶ್ರೀ ಪ್ರಭು ಚಬ್ಹಾಣ | ಪಶು ಸಂಗೋಪನೆ ಸಚಿವರು |
| 12 | ಶ್ರೀ ಜೆ. ಮಾಧುಸ್ವಾಮಿ | ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು. |
| 13 | ಶ್ರೀ ಸುರೇಶಕುಮಾರ | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು |
| 14 | ಶ್ರೀ ಗೋವಿಂದ ಕಾರಜೋಳ | ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಸಚಿವರು |
| 15 | ಶ್ರೀ ನಾಗೇಶ | ಅಬಕಾರಿ ಸಚಿವರು |
| 16 | ಶ್ರೀ ಸಿ.ಸಿ.ಪಾಟೀಲ್ | ಗಣಿ ಮತ್ತು ಭೂ ವಿಜ್ಞಾನ ಸಚಿವರು |
| 17 | ಶ್ರೀ ಕೋಟ ಶ್ರೀನಿವಾಸ ಪುಜಾರಿ | ಮುಜರಾಯಿ ಹಾಗು ಮೀನುಗಾರಿಕೆ ಸಚಿವರು |
| 18 | ಶ್ರೀಮತಿ ಶಶಿಕಲಾ ಜೊಲ್ಲೆ | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು |

## ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಒಂದು ವಿನಮ್ರ ಮನವಿ.

## ಜಲಾವೃತ ಗ್ರಾಮಗಳ ಸಂತ್ರಸ್ತರಿಗೆ ಉದಾರ ದೇಣಿಗೆ ನೀಡುವ ಕುರಿತು.

ಉತ್ತರ ಕರ್ನಾಟಕದ ಹಲವು ಸ್ಥಳಗಳಲ್ಲಿ ಪ್ರಕೃತಿ ವಿಕೋಪದಿಂದ ಜಲಾವೃತವಾಗಿ ಜನರು ಸಂಕಷ್ಟದಲ್ಲಿದ್ದು, ಜೀವಹಾನಿ, ಮನೆ-ಮಠ ಆಸ್ತಿ-ಪಾಸ್ತಿಗಳನ್ನು ಕಳೆದುಕೊಂಡಿದ್ದಾರೆ. ಅನ್ನ ಆಹಾರಗಳು ಸಿಗದಂತಾಗಿದೆ ಹಾಗೂ ರಾಜ್ಯದ ಕೆಲವು ಪ್ರದೇಶಗಳಲ್ಲಿ ಭಾರಿ ಮಳೆ ಸುರಿಯುತ್ತಿರುವುದು ತಮಗೆಲ್ಲ ತಿಳಿದ ವಿಷಯವಾಗಿದೆ. ಸಂತ್ರಸ್ತರ ಪುನರ್‌ವಸತಿಗಾಗಿ ಕೇಂದ್ರ ಸರಕಾರ, ರಾಜ್ಯ ಸರಕಾರ ಹಾಗೂ ಸಂಘ ಸಂಸ್ಥೆಗಳು ನೆರವು ನೀಡುವಲ್ಲಿ ಮುಂದಾಗಿವೆ ಹಾಗೂ ಮನವಿ ಸಹ ಮಾಡಿದ್ದಾರೆ. ಸೌಹಾರ್ದ ಸಹಕಾರಿಗಳು ಸಹ ಈ ಸಂದರ್ಭದಲ್ಲಿ ನೆರವು ನೀಡಲು ಮುಂದಾಗುವುದು ಅವಶ್ಯವಾಗಿದೆ. ಕಳೆದ ವರ್ಷ ಕೇರಳ ಮತ್ತು ಮಡಿಕೇರಿಗಳಲ್ಲಿ ನೆರೆ ಹಾವಳಿಯಾದಾಗ ಸಂಯುಕ್ತ ಸಹಕಾರಿಯ 17 ನೇ ಸಾಮಾನ್ಯ ಸಭೆಯ ಸಂದರ್ಭದಲ್ಲಿ ಅಂದಿನ ಮಾನ್ಯ ಸಹಕಾರ ಸಚಿವರಿಗೆ ಎಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ರೂ. 25 ಲಕ್ಷಗಳನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಲಾಗಿದೆ. ಅದೇ ರೀತಿ ನೇಪಾಳ, ಹಾಗೂ ಜಮ್ಮು ಕಾಶ್ಮೀರಗಳಲ್ಲಿ ನೆರೆ ಹಾವಳಿ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳ ನೆರೆ ಪರಿಹಾರ ನಿಧಿಗೆ ರೂ, 10 ಲಕ್ಷಗಳನ್ನು ದೇಣಿಗೆಯಾಗಿ ನೀಡಿದೆ. ನೆರೆ ಸಂತ್ರಸ್ತರಿಗೆ ತಾವುಗಳೆಲ್ಲ ಉದಾರವಾಗಿ ದೇಣಿಗೆ ನೀಡಿರುವುದಕ್ಕೆ ಸಂಯುಕ್ತ ಸಹಕಾರಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಅದರಂತೆ ಈ ಬಾರಿಯೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಜಲಾವೃತ ಗ್ರಾಮಗಳ ನೆರೆ ಸಂತ್ರಸ್ತರಿಗೆ ಸಾಂತ್ವನವನ್ನು ಹೇಳುವುದರ ಜೊತೆಗೆ ಅವರಿಗೆ ನೆರವನ್ನು ನೀಡುವ ದೃಷ್ಟಿಯಿಂದ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಂದ ದೇಣಿಗೆಯನ್ನು ಸಂಗ್ರಹಿಸಿ, ಸಂಕಷ್ಟದಲ್ಲಿರುವ ಜನರಿಗೆ ತಲುಪಿಸಲು ಉದ್ದೇಶಿಸಿದೆ. ಆದ್ದರಿಂದ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಉದಾರವಾಗಿ ದೇಣಿಗೆಯನ್ನು ಕಳುಹಿಸಿ ಈ ವಿಪತ್ತಿನ ಪರಿಹಾರ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಅಪೇಕ್ಷಿಸುತ್ತದೆ. ಅಲ್ಲದೇ ಸ-ಶಕ್ತ ಸೌಹಾರ್ದ ಸಹಕಾರಿಗಳು ಹಾಗೂ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರುಗಳು ಸಹ ವೈಯಕ್ತಿಕವಾಗಿ ಹೆಚ್ಚಿನ ಪ್ರಮಾಣದಲ್ಲಿ ದೇಣಿಗೆಯನ್ನು ನೀಡಲು ವಿನಂತಿಸಿದೆ.

ದೇಣಿಗೆ ಕಳುಹಿಸುವ ಸೌಹಾರ್ದ ಸಹಕಾರಿಗಳು "KARNATAKA STATE SOUHARDA FEDERAL COOPERATIVE Ltd.," ಎಂಬ ಹೆಸರಿನಲ್ಲಿ ಚೆಕ್/ಡಿಡಿ ಕಳುಹಿಸಲು ಕೋರಿದೆ. ಅಥವಾ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ A/C NO. 0243102000013873, IFSC CODE : IBKL0000243, BRANCH : MARGOSA ROAD,MALLESHWARAM IDBI ಬ್ಯಾಂಕ್‌ಗೆ NEFT/RTGS" ಮೂಲಕ ಕಳುಹಿಸಲು ಕೋರಿದೆ. RTGS / NEFT ಮೂಲಕ ಹಣ ವರ್ಗಾಯಿಸಿದ್ದಲ್ಲಿ, ಸದರಿ ವಿವರಗಳನ್ನು ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ಸಂತ್ರಸ್ಥರಿಗೆ ಧನಸಹಾಯ ನೀಡುವ ಸಂಸ್ಥೆಗಳ ಹೆಸರುಗಳನ್ನು ಹಾಗೂ ಮೊತ್ತವನ್ನು ಮುಂದಿನ ತಿಂಗಳ ಸ್ವಾಭಿಮಾನಿ ಸಹಕಾರಿ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

**ಬನ್ನಿ, ನಾವುಗಳೆಲ್ಲ ಈ ವಿಪತ್ತಿನ ಪರಿಹಾರ ಕಾರ್ಯದಲ್ಲಿ ಭಾಗಿಗಳಾಗೋಣ, ಮಾನವೀಯತೆಯನ್ನು ಮೆರೆಯೋಣ.**

**ಧನ್ಯವಾದಗಳೊಂದಿಗೆ,**

| ಸಹಿ/- | ಸಹಿ/- | ಸಹಿ/- |
|---|---|---|
| **ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ** | **ಶ್ರೀ ಜಗದೀಶ ಕವಟಗಿಮಠ** | **ಶರಣಗೌಡ ಜಿ. ಪಾಟೀಲ್** |
| ಅಧ್ಯಕ್ಷರು | ಉಪಾಧ್ಯಕ್ಷರು | ವ್ಯವಸ್ಥಾಪಕ ನಿರ್ದೇಶಕರು |

## ಸಹಕಾರ ಶಿಕ್ಷಣ ಹಾಗೂ ಸಹಕಾರಿ ಅಭಿವೃದ್ಧಿ ಸಂಶೋಧನಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಹಾಗೂ ಕರ್ನಾಟಕ ರಾಜ್ಯ ಕಾನೂನು ವಿಶ್ವ ವಿದ್ಯಾಲಯ ಹುಬ್ಬಳ್ಳಿ ಇವರ ಮಧ್ಯ ಒಡಂಬಡಿಕೆ



**ಹುಬ್ಬಳ್ಳಿ:** ಸಹಕಾರ ಶಿಕ್ಷಣ ಅಭಿವೃದ್ಧಿ ಹಾಗೂ ಸಂಶೋಧನೆ ವಿಷಯಗಳಲ್ಲಿ ನಿರಂತರ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಕ್ಕಾಗಿ ಸಂಯುಕ್ತ ಸಹಕಾರಿ ಹಾಗೂ ಕರ್ನಾಟಕ ರಾಜ್ಯ ಕಾನೂನು ವಿಶ್ವ ವಿದ್ಯಾಲಯಗಳ ಒಡಂಬಡಿಕೆಗೆ ವಿಶ್ವ ವಿದ್ಯಾಲಯದ ಕುಲಪತಿಗಳಾದ ಪ್ರೋ ಡಾ. ಪಿ.ಈಶ್ವರಭಟ್ ಹಾಗೂ ಸಂಯುಕ್ತ ಸಹಕಾರಿಯ ಪರವಾಗಿ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ ಪಾಟೀಲ್ ರವರು ಸಹಿ ಹಾಕಿದರು.

ದಿನಾಂಕ 30.08.2019 ರಂದು ಕಾನೂನು ವಿಶ್ವ ವಿದ್ಯಾಲಯ ಹುಬ್ಬಳ್ಳಿಯ ಸಭಾಂಗಣದಲ್ಲಿ ಎರಡು ಸಂಸ್ಥೆಗಳು ಜಂಟಿಯಾಗಿ ಏರ್ಪಡಿಸಿದ ಯುವಕರು ಹಾಗೂ ಸಹಕಾರ ಕುರಿತಾದ ಜಾಗೃತಿ ಕಾರ್ಯಕ್ರಮದ ಉದ್ಘಾಟನೆಯನ್ನು ಕುಲಪತಿಗಳಾದ ಡಾ. ಪಿ.ಈಶ್ವರಭಟ್ ಇವರು ಉದ್ಘಾಟನೆ ಮಾಡಿದ ನಂತರ ಈ ಒಡಂಬಡಿಕೆಗೆ ಸಹಿ ಹಾಕಲಾಯಿತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರು ವಹಿಸಿದ್ದರು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಸಚಿವ ಶ್ರೀ ಆರ್. ರವಿಶಂಕರ ಇವರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ ಶ್ರೀ ಬಾಪುಗೌಡ. ಪಾಟೀಲ್, ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಚಂದ್ರಕಾಂತ ಪಡಚಣ್ಣವರ, ಇನ್ನೂಬ್ಬ ಕುಲಸಚಿವ ಶ್ರೀ ಜಿ.ಬಿ.ಪಾಟೀಲ್, ಧಾರವಾಡದ ವಕೀಲ ಶ್ರೀ ಅನೋಪ ದೇಶಪಾಂಡೆ, ಪ್ರೋ ಯಶವಂತ ಡೋಂಗ್ರೆ ಹಾಗೂ ವಿಶ್ವ ವಿದ್ಯಾಲಯದ ಡೀನ ಶ್ರೀ ಸಿ.ಎಸ್.ಪಾಟೀಲ್ ಇವರುಗಳು ಸಾಕ್ಷಿಯಾದರು.

ಈ ಒಡಂಬಡಿಕೆಯಿಂದಾಗಿ ಸಂಯುಕ್ತ ಸಹಕಾರಿಯು ನಡೆಸುವ ವಿವಿಧ ಸರ್ಟಿಫಿಕೆಟ್ ಕೋರ್ಸಗಳಿಗೆ ಹಾಗೂ ಸಹಕಾರ ಹಾಗು ಬ್ಯಾಂಕಿಂಗ್ ಮೆನೆಜಮೆಂಟ ಡಿಪ್ಲೋಮಾ ಕೋರ್ಸಗಳಿಗೆ ಕಾನೂನು ವಿಶ್ವ ವಿದ್ಯಾಲಯವು ಮಾನ್ಯತೆ ನೀಡುವ ಅವಕಾಶ ಕಲ್ಪಿಸಲಾಗಿದೆ.

## ಯುವಕರು ಹಾಗೂ ಸಹಕಾರ ಕುರಿತು ಜಾಗೃತಿ ಕಾರ್ಯಕ್ರಮ



ಯುವಕರು ಹಾಗೂ ಸಹಕಾರ ಕುರಿತಾದ ಜಾಗೃತಿ ಕಾರ್ಯಕ್ರಮವನ್ನು ಕುಮಾರಿ ಲಾವಣ್ಯರವರ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು. ವಿಶ್ವ ವಿದ್ಯಾಲಯದ ಡೀನ ಶ್ರೀ ಸಿ.ಎಸ್.ಪಾಟೀಲ್‌ರವರು ಸ್ವಾಗತಿಸಿದರು. ಶ್ರೀ ಶರಣಗೌಡ.ಜಿ ಪಾಟೀಲ ಇವರು ಪ್ರಾಸ್ತಾವಿಕ ನುಡಿಗಳು ಹೇಳಿದರು. ನಂತರ ಮೈಸೂರು ವಿಶ್ವ ವಿದ್ಯಾಲಯದ ನಿವೃತ್ತ ಕುಲಸಚಿವ ಶ್ರೀ ಯಶವಂತ ಡೋಂಗ್ರೆಯವರು ಸಹಕಾರ ಕ್ಷೇತ್ರದಲ್ಲಿ ಯುವಕರು ಪಾಲ್ಗೋಳ್ಳಬೇಕಾದ ಅವಶ್ಯಕತೆ ಬಗ್ಗೆ ಉಪನ್ಯಾಸ ನೀಡಿದರು.

### ಯುವಕರು ಸಹಕಾರ ಸಮಾಜದ ಪೂರ್ಣ ಪ್ರಯೋಜನ ಪಡೆಯಲು ಸಾಧ್ಯ. ಕುಲಪತಿ ಶ್ರೀ ಪಿ.ಈಶ್ವರಭಟ್

ಉದ್ಘಾಟನೆ ನೆರವೇರಿಸಿ ಮಾತನಾಡಿದ ಕುಲಪತಿ ಶ್ರೀ ಪಿ.ಈಶ್ವರಭಟ್ ರವರು ಇದೊಂದು ಒಳ್ಳೆಯ ಬೆಳವಣಿಗೆ. ಸಹಕಾರ ಕ್ಷೇತ್ರದಲ್ಲಿ ಯುವಕರು ಪಾಲ್ಗೋಳ್ಳುವುದು ಅವಶ್ಯಕ. ಆದ್ದರಿಂದ ಸಂಯುಕ್ತ ಸಹಕಾರಿಯವರು ಈ ವಿಷಯದ ಬಗ್ಗೆ ಪ್ರಸ್ತಾವ ಮಾಡಿದಾಗ ಕೂಡಲೇ ಒಪ್ಪಿಗೆ ನೀಡಿ ಯುವಕರನ್ನು ಜಾಗೃತರನ್ನಾಗಿ ಮಾಡಲು ಅವಶ್ಯಕ ಕ್ರಮವಿಡಲು ಸೂಚಿಸಲಾಯಿತು. ಯುವಕರಿಗೆ ಸಹಕಾರ, ಸಹಕಾರ ತತ್ವಗಳು, ಸಹಕಾರ ಕಾನೂನುಗಳು, ಸಹಕಾರ ಆಡಳಿತ ವ್ಯವಸ್ಥೆ ಮತ್ತು ಸಹಕಾರ ಕ್ಷೇತ್ರದ ಸಾಧನೆಗಳು ಮತ್ತು ಸವಾಲುಗಳ ಬಗ್ಗೆ ಪರಿಚಯಿಸುವುದು ಅಗತ್ಯ ಇದೊಂದು ಉತ್ತಮ ಕಾರ್ಯವನ್ನು ಸಂಯುಕ್ತ ಸಹಕಾರಿಯವರು ಮಾಡಿದ್ದಾರೆ .ಸಂಯುಕ್ತ ಸಹಕಾರಿಯ ಅಧ್ಯಕ್ಷರಿಗೆ ಹಾಗೂ ಆಡಳಿತ ಮಂಡಳಿಯವರಿಗೆ ಮತ್ತು ಅಧಿಕಾರಿಗಳಿಗೆ ಅಭಿನಂದಿಸುತ್ತೇನೆ ಎಂದು ತಿಳಿಸಿದರು.

### ಯುವಕರು ಸಹಕಾರ ಕ್ಷೇತ್ರದಿಂದ ಹೆಚ್ಚಿನ ಪ್ರಯೋಜನ ಪಡೆಯಲು ಅವಕಾಶಗಳಿವೆ - ಬಿ.ಹೆಚ್. ಕೃಷ್ಣಾರೆಡ್ಡಿ

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಕರ್ನಾಟಕ ರಾಜ್ಯ ಲಾ ಯೂನಿವರ್ಸಿಟಿಯವರು ಯುವಕರಿಗೆ ಸಹಕಾರಿ ಕ್ಷೇತ್ರದ ಬಗ್ಗೆ

ಜ್ಞಾನಾರ್ಜನೆಯನ್ನು ಒದಗಿಸುವ ಇಂತಹ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಅವಕಾಶ ನೀಡಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತ ಈ ದೇಶದ ಭವಿಷ್ಯ ಯುವಕರ ಕೈಯಲ್ಲಿದೆ. ಯುವಕರು ವಿದ್ಯಾವಂತರಾಗುವುದರ ಜೊತೆಗೆ ತಮಗಾಗಿ ಸರಕಾರ ಖಾಸಗಿ ಕ್ಷೇತ್ರದ ಅವಕಾಶಗಳ ಜೊತೆಗೆ ಸಹಕಾರ ಕ್ಷೇತ್ರದಲ್ಲಿ ತಾವು ಬೆಳೆಯುವ ಬಗ್ಗೆ ಇರುವ ಅವಕಾಶಗಳ ಬಗ್ಗೆ ತಿಳಿಸಿಕೊಡುವ ಉದ್ದೇಶದಿಂದ ಇಂತಹ ಜಾಗೃತಿ ಕಾರ್ಯಕ್ರಮವನ್ನು ರಾಜ್ಯದ ಎಲ್ಲ ವಿಶ್ವ ವಿದ್ಯಾಲಯಗಳಲ್ಲೂ ಹಮ್ಮಿಕೊಳ್ಳಲಾಗುತ್ತಿದೆ. ಯುವಕರು ಹೆಚ್ಚಿನ ಆಸಕ್ತಿ ತೋರಿ ಭಾಗವಹಿಸುತ್ತಿರುವುದು ಅತ್ಯಂತ ಸಂತೋಷದ ವಿಷಯ. ಯುವಕರು ಸಹಕಾರಿ ಸಂಸ್ಥೆಗಳನ್ನು ಪ್ರಾರಂಭಿಸಿ ಅವುಗಳಲ್ಲಿ ಉದ್ಯೋಗ ಸೃಷ್ಟಿಮಾಡುವುದರ ಜೊತೆಗೆ ಅದರ ಆಡಳಿತ ವ್ಯವಸ್ಥೆಯನ್ನು ತಿಳಿದುಕೊಂಡು ಸದಸ್ಯರಿಗೆ ಹೆಚ್ಚಿನ ಲಾಭಗಳನ್ನು ತಲುಪಿಸುವ ಮಹತ್ವದ ಕಾರ್ಯವನ್ನು ಮಾಡಲು ಅವಕಾಶವಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ ಶ್ರೀ ಬಾಪುಗೌಡ ಪಾಟೀಲ್ ರವರು ಮಾತನಾಡಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಮಹಾಮಂಡಳ ಶಿಕ್ಷಣ ಹಾಗು ತರಬೇತಿ ವಿಭಾಗದಲ್ಲಿ ಅತ್ಯಂತ ಉತ್ತಮ ಕಾರ್ಯವನ್ನು ಮಾಡುತ್ತಿದೆ. ರಾಜ್ಯದ ಸಹಕಾರ ಮಹಾಮಂಡಳ ಹಾಗೂ ಜಿಲ್ಲಾ ಸಹಕಾರ ಯೂನಿಯನ್‌ಗಳು ಸಹ ಇದೇ ರೀತಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ತಿಳಿಸಿದರು. ಧಾರವಾಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವತಿಯಿಂದ ರೈತರಿಗೆ, ಗ್ರಾಮೀಣ ಜನರಿಗೆ ಹಿಂದುಳಿದವರಿಗೆ ಅನೇಕ ಕಾರ್ಯಕ್ರಮಗಳಿವೆ. ಯುವಕರು ಅವೆಲ್ಲವುಗಳ ಬಗ್ಗೆ ಅಧ್ಯಯನಮಾಡಿ ಪ್ರಯೋಜನ ಪಡೆಯಬೇಕು ಎಂದು ತಿಳಿಸಿದರು.

ಬೆಳಗಾವಿ ಪ್ರಾಂತೀಯ ಅಧಿಕಾರಿ ಶ್ರೀ ಶ್ರೀಕಾಂತ ಬರುವೆ ಇವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ನಂತರದಲ್ಲಿ ನಡೆದ ಪ್ರಶ್ನೋತ್ತರ ಅವಧಿಯಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಕೆ.ಮುನಿಯಪ್ಪ, ವಕೀಲ ಶ್ರೀ ಅನೂಪ ದೇಶಪಾಂಡೆ, ವಿಜಯ ಕರ್ನಾಟಕ ಸ್ಥಾನಿಕ ಸಂಪಾದಕ ಶ್ರೀ ಬಂಡು ಕಲಕರ್ಣಿ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ ಪಾಟೀಲ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರ ನೀಡಿದರು.

ಪ್ರಶ್ನೋತ್ತರ ಅವಧಿಯ ಅಧ್ಯಕ್ಷತೆಯನ್ನು ಶ್ರೀ ಯಶವಂತ ಡೋಂಗ್ರೆಯವರು ವಹಿಸಿದ್ದರು.

## ಜಿಲ್ಲಾವಾರು ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆಗಳು



**ಬಳ್ಳಾರಿ :** ದಿನಾಂಕ 09.08.2019 ರಂದು ಶುಕ್ರವಾರ ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಇವರು ಉದ್ಘಾಟಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ ಹಿರೇಮಠ ಇವರು ಅಧ್ಯಕ್ಷತೆ ವಹಿಸಿದ್ದರು ಹಾಗೂ ಮತ್ತೋರ್ವ ಮಾನ್ಯ ನಿರ್ದೇಶಕರಾದ ಶ್ರೀ ರಾಜಶೇಖರ ಬಿ. ಇವರು ಮತ್ತು ಮಾಜಿ ನಿರ್ದೇಶಕರಾದ ಶ್ರೀ ಅಂಬಲಿ ಮಂಜುನಾಥ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಸಂಪರ್ಕ ಸಭೆಯಲ್ಲಿ ಒಟ್ಟು 68 ಸಹಕಾರಿಗಳಿಂದ 92 ಸದಸ್ಯರು ಭಾಗವಹಿಸಿದರು.



**ರಾಯಚೂರು :** ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆಯು ಕನಕ ಮಂಗಳ ಭವನ, ಕುಷ್ಠಗಿ ರಸ್ತೆ, ಸಿಂಧನೂರಿನಲ್ಲಿ ದಿನಾಂಕ 10.08.2019ರಂದು ಶನಿವಾರ ಮಧ್ಯಾಹ್ನ 3:00 ಗಂಟೆಗೆ ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಇವರ ಅಧ್ಯಕ್ಷತೆಯಲ್ಲಿ ಮತ್ತು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ, ಆರ್.ತಿಮ್ಮಯ್ಯ ಶೆಟ್ಟಿ ಹಾಗೂ ರಾಜಶೇಖರ ಬಿ. ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಇವರ ಉಪಸ್ಥಿತಿಯಲ್ಲಿ ನಡೆಯಿತು. ಈ ಸಂಪರ್ಕ ಸಭೆಯಲ್ಲಿ ಒಟ್ಟು 98 ಸಹಕಾರಿಗಳಿಂದ 144 ಸದಸ್ಯರು ಭಾಗವಹಿಸಿದರು.



**ಹಾವೇರಿ:** ದಿನಾಂಕ 31–08–2019 ರಂದು ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂಪರ್ಕ ಸಭೆಯನ್ನು ಹಾವೇರಿಯ ಸಜ್ಜನರ್ ಹಾಲ್ ನಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಇವರು ವಹಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ ಬಿ ಕಲಾಲ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ, ಹಾಗೂ ಸಲಹೆಗಾರರಾದ ಶ್ರೀ ವಿ.ಜೆ ಕಾರಕೂನ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 95 ಸೌಹಾರ್ದ ಸಹಕರಿಗಳಿಂದ 154 ಜನ ಪ್ರತಿನಿಧಿಗಳು ಈ ಸಭೆಯಲ್ಲಿ ಹಾಜರಿದ್ದರು.




**ಉತ್ತರ ಕನ್ನಡ:** ದಿನಾಂಕ 31–08–2019 ರಂದು ಉತ್ತರ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂಪರ್ಕ ಸಭೆಯನ್ನು ಟಿ.ಎಮ್.ಎಸ್. ಸಭಾಭವನ ದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಇವರು ವಹಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ, ಹಾಗೂ ಸಲಹೆಗಾರರಾದ ಶ್ರೀ ವಿ.ಜೆ ಕಾರಕೂನ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 76 ಸೌಹಾರ್ದ ಸಹಕರಿಗಳಿಂದ 125 ಜನ ಪ್ರತಿನಿಧಿಗಳು ಈ ಸಭೆಯಲ್ಲಿ ಹಾಜರಿದ್ದರು.



**ಹುಬ್ಬಳ್ಳಿ:** ದಿನಾಂಕ 30.08.2019ರಂದು ಧಾರವಾಡ ಮತ್ತು ಗದಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂಪರ್ಕ ಸಭೆಯನ್ನು ಹುಬ್ಬಳ್ಳಿಯ ಮಂತ್ರ ರೆಸಿಡೆನ್ಸಿ ಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ವಹಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಚಂದ್ರಕಾಂತ ಪಡಚಣ್ಣವರ, ಶ್ರೀ ಆರ್. ಎನ್. ದೇಶಪಾಂಡೆ, ಮಾಜಿ ನಿರ್ದೇಶಕರಾದ ಶ್ರೀ ರವೀಂದ್ರ ಯಲಿಗಾರ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ. ಪಾಟೀಲ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ, ಹಾಗೂ ಸಲಹೆಗಾರರಾದ ಶ್ರೀ ವಿ.ಜೆ ಕಾರಕೂನ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 52 ಸೌಹಾರ್ದ ಸಹಕರಿಗಳಿಂದ 83 ಜನ ಪ್ರತಿನಿಧಿಗಳು ಈ ಸಭೆಯಲ್ಲಿ ಹಾಜರಿದ್ದರು.



**ಬೆಂಗಳೂರು :** ದಿನಾಂಕ:23.08.2019 ರಂದು ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆಯನ್ನು ಹೋಟೆಲ್ ಕದಂಬ, ಡಾ.ಮೋದಿ ಆಸ್ಪತ್ರೆ ರಸ್ತೆ, ರಾಜಾಜಿನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು, ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಎಚ್.ಕೃಷ್ಣಾರೆಡ್ಡಿ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡೂರಾವ್ ರವರು ಅಧ್ಯಕ್ಷತೆಯನ್ನು ವಹಿಸಿದ್ದರು, ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 43 ಸೌಹಾರ್ದ ಸಹಕಾರಿಗಳಿಂದ 63 ಜನ ಪ್ರತಿನಿಧಿಗಳು ಹಾಜರಿದ್ದರು.



**ಕೊಪ್ಪಳ :** ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ವಿಷಯಾಧಾರಿತ ತರಬೇತಿ ಹಾಗೂ ಸಂಪರ್ಕ ಸಭೆಯನ್ನು ಗಂಗಾವತಿಯ ಹೋಟಲ್ ಲಲಿತ ಮಹಲ್‌ನಲ್ಲಿ ದಿನಾಂಕ 09-08-2019 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕ್ರೆಡಿಟ್ ಫೆಡರೇಷನ್‌ನ ನಿರ್ದೇಶಕರಾದ ಶ್ರೀ ಹೆಚ್ ಪ್ರಭಾಕರ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರು ಭಾಗವಹಿಸದ್ದರು. ಕಾರ್ಯಕ್ರಮದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಉಪಸ್ಥಿತರಿದ್ದರು.



**ತುಮಕೂರು :** ತುಮಕೂರು ನಗರದ ಸೇಕ್ರೆಡ್ ಹಾರ್ಟ್ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಸದರಿ ಸಹಕಾರಿಯಲ್ಲಿ ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಭೆಗೆ ಉದ್ಘಾಟಕರಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿಯವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಗಂಗಾಧರಯ್ಯರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸೇಕ್ರೆಡ್ ಹಾರ್ಟ್ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಅಧ್ಯಕ್ಷರಾದ ಲ್ಯಾನ್ಸಿ ಎಚ್. ರವರು ಆಗಮಿಸಿದ್ದರು ಹಾಗೂ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ನಾರಾಯಣ ಹೆಗಡೆ ಉಪಸ್ಥಿತರಿದ್ದರು. 63 ಸೌಹಾರ್ದ ಸಹಕರಿಗಳಿಂದ 87 ಜನ ಪ್ರತಿನಿಧಿಗಳು ಈ ಸಭೆಯಲ್ಲಿ ಹಾಜರಿದ್ದರು.



**ಚಿಕ್ಕಬಳ್ಳಾಪುರ :** ದಿನಾಂಕ 24-08-2019 ರಂದು ಚಿಕ್ಕಬಳ್ಳಾಪುರ ಜಿಲ್ಲಾ ಪತ್ರಕರ್ತರ ಭವನ ಇಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಭೆಗೆ ಉದ್ಘಾಟಕರಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿರವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ನಾಗೇಂದ್ರ ಗುಪ್ತ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಉದ್ದೇಶಿತ ಒಕ್ಕೂಟ ಸೌಹಾರ್ದ ಸಹಕಾರಿಯ ಮುಖ್ಯ ಪ್ರವರ್ತಕರಾದ ಶೈಲಜಾ ರವರು ಆಗಮಿಸಿದ್ದರು. ಹಾಗೂ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ನಾರಾಯಣ ಹೆಗಡೆ ರವರು ಉಪಸ್ಥಿತರಿದ್ದರು. 28 ಸೌಹಾರ್ದ ಸಹಕಾರಿಗಳಿಂದ 57 ಪ್ರತಿನಿಧಿಗಳು ಸಭೆಯಲ್ಲಿ ಹಾಜರಿದ್ದರು.



**ಶಿವಮೊಗ್ಗ :** ದಿನಾಂಕ 16.08.2019 ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ನಗರದ ಚಾಣಕ್ಯ ಸಭಾಂಗಣ, ಮಥುರಾ ಪ್ಯಾರಡೈಸ್, ಶಿವಮೊಗ್ಗದಲ್ಲಿ ಸಂಪರ್ಕ ಸಭೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು, ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಎಚ್. ಕೃಷ್ಣಾರೆಡ್ಡಿ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು, ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎ.ಆರ್, ಪ್ರಸನ್ನ ಕುಮಾರ್ ರವರು ವಹಿಸಿದ್ದರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಅಧ್ಯಕ್ಷರಾಗಿ ನೂತನವಾಗಿ ಆಯ್ಕೆಯಾಗಿರುವ ಹಾಗೂ ಶಿವಮೊಗ್ಗದ ಸರ್ಕಾರಿ ನೌಕರರ ಸೌಹಾರ್ದ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಷಡಕ್ಷರಿಯವರನ್ನು ಸನ್ಮಾನಿಸಲಾಯಿತು, ಬೆಂಗಳೂರು ಪ್ರಾಂತದ ಕಾನೂನು ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್, ರವರು ಉಪಸ್ಥಿತರಿದ್ದರು, 43 ಸೌಹಾರ್ದ ಸಹಕಾರಿಗಳಿಂದ 85 ಜನ ಪ್ರತಿನಿಧಿಗಳು ಸಭೆಯಲ್ಲಿ ಹಾಜರಿದ್ದರು.



**ದಾವಣಗೆರೆ:** ದಾವಣಗೆರೆ ನಗರದ ಅಪೂರ್ವ ರೆಸ್ಟೋರೆಂಟ್ ಹೋಟೆಲ್ ನಲ್ಲಿ ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಭೆಗೆ ಉದ್ಘಾಟಕರಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿಯವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ. ನಂಜನಗೌಡ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹೆಚ್ ಎಂ ನಾಗರಾಜ್, ಮುಖ್ಯ ಪ್ರವರ್ತಕರು, ದಾವಣಗೆರೆ ಜಿಲ್ಲಾ ಸೌಹಾರ್ದ ಒಕ್ಕೂಟ ನಿ., ಹಾಗೂ ಶ್ರೀ ಉಮೇಶ್ ಶೆಟ್ಟಿ, ನಿರ್ದೇಶಕರು, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ, ಬೆಂಗಳೂರು. ಪ್ರಾಂತೀಯ ಕಛೇರಿಯ ಕಾನೂನು ಅಧಿಕಾರಿಯಾದ ಸಂಜಯ್ ಕೊರಟಕರ್ ಹಾಗೂ ಜಿಲ್ಲಾ ಸೌಹಾರ್ದ ಸಂಯೋಜಕರಾದ ಶ್ರೀ ನಟರಾಜ್ ರವರು ಉಪಸ್ಥಿತರಿದ್ದರು. 40 ಸೌಹಾರ್ದ ಸಹಕಾರಿಗಳಿಂದ 80 ಜನ ಪ್ರತಿನಿಧಿಗಳು ಈ ಸಭೆಯಲ್ಲಿ ಹಾಜರಿದ್ದರು.



**ಚಿತ್ರದುರ್ಗ :** ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಜೆ.ಸಿ.ಆರ್. ಬಡಾವಣೆ ಶಾಖೆಯಲ್ಲಿ ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕರಿಗಳ ಸಂಪರ್ಕ ಸಭೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಭೆಗೆ ಉದ್ಘಾಟಕರಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್. ಲಕ್ಷ್ಮೀಕಾಂತರೆಡ್ಡಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ನಾಗರಾಜ ಶೆಟ್ಟಿ ಅಧ್ಯಕ್ಷರು, ಶ್ರೀ ಕನ್ಯಾಕ ಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಹಾಗೂ ಶ್ರೀ ತಿಪ್ಪೇಸ್ವಾಮಿ, ಮುಖ್ಯ ಪ್ರವರ್ತಕರು, ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕರಿಗಳ ಒಕ್ಕೂಟ ನಿ., ಇವರುಗಳು ಆಗಮಿಸಿದ್ದರು.

ಬೆಂಗಳೂರು ಪ್ರಾಂತೀಯ ಕಛೇರಿಯ ಕಾನೂನು ಅಧಿಕಾರಿಯಾದ ಸಂಜಯ್ ಕೊರಟಕರ್ ಹಾಗೂ ಜಿಲ್ಲಾ ಸೌಹಾರ್ದ ಸಂಯೋಜಕರಾದ ಶ್ರೀ ನಟರಾಜ್ ರವರು ಉಪಸ್ಥಿತರಿದ್ದರು. 28 ಸೌಹಾರ್ದ ಸಹಕರಿಗಳಿಂದ 60 ಜನ ಪ್ರತಿನಿಧಿಗಳು ಈ ಸಭೆಯಲ್ಲಿ ಹಾಜರಿದ್ದರು.



**ಬೆಂಗಳೂರು:** ದಿನಾಂಕ:23.08.2019 ರಂದು ಬೆಂಗಳೂರು ನಗರ ಮತ್ತು ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆಯನ್ನು ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು, ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಎಚ್.ಕೃಷ್ಣಾರೆಡ್ಡಿ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮಾನ್ಯ ನಿರ್ದೇಶಕರುಗಳಾದ ಶ್ರೀ ಬಿ.ಎಸ್. ಗುಂಡೂರಾವ್, ಶ್ರೀ ಆರ್. ತಿಮ್ಮಯ್ಯಶೆಟ್ಟಿ ಹಾಗೂ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ಉಪಸ್ಥಿತ–ರಿದ್ದರು. ಕಾರ್ಯಕ್ರಮದಲ್ಲಿ 34 ಸೌಹಾರ್ದ ಸಹಕಾರಿಗಳಿಂದ 52 ಜನ ಪ್ರತಿನಿಧಿಗಳು ಹಾಜರಿದ್ದರು.



**ಹಾವೇರಿ :** ಹಾವೇರಿ ಸಂಪರ್ಕ ಕಛೇರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ ಬಿ ಕಲಾಲ, ಇವರು ಭೇಟಿ ನೀಡಿದರು.



**ಹಾವೇರಿ :** ಶ್ರೀ ಗಾಯಿತ್ರಿ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ ಬಿ ಕಲಾಲ, ಇವರು ಭೇಟಿ ನೀಡಿದರು.

## ಪ್ರವೇಶ ತರಬೇತಿ ಕಾರ್ಯಕ್ರಮ




**ವಿಜಯಪುರ:** ದಿನಾಂಕ 10.08.2019 ರಂದು ವಿಜಯಪುರ ಹಾಗೂ ಬಾಗಲಕೋಟ ಜಿಲ್ಲೆಯಲ್ಲಿ 2018-19 ನೇ ಸಾಲಿನಲ್ಲಿ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳಿಗಾಗಿ ಪ್ರವೇಶ ತರಬೇತಿಯನ್ನು ಹೋಟಲ್ ಶುಭಶ್ರೀ, ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಗಾರದ ಅಧ್ಯಕ್ಷತೆಯನ್ನು ಶ್ರೀ ಸಿದ್ರಾಮಪ್ಪ ಉಪ್ಪಿನ, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು. ಇವರು ವಹಿಸಿದ್ದರು. ಉದ್ಘಾಟನೆಯನ್ನು ಶ್ರೀ ಜಿ.ಎನ್.ಪಾಟೀಲ ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ ಬೆಂಗಳೂರು. ಇವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಎಂ.ಜಿ.ಪಾಟೀಲ ಮಾನ್ಯ ವೃತ್ತಿಪರ ನಿರ್ದೇಶಕರು, ಸಂಯುಕ್ತ ಸಹಕಾರಿ ಬೆಂಗಳೂರು. ಇವರು ಭಾಗವಹಿಸಿದ್ದರು. ಈ ತರಬೇತಿಯಲ್ಲಿ 32 ಸೌಹಾರ್ದ ಸಹಕಾರಿಗಳಿಂದ 52 ಪ್ರತಿನಿಧಿಗಳು ಭಾಗವಹಿಸಿದ್ದರು.

ಸೌಹಾರ್ದ ಸಹಕಾರಿಗಳಲ್ಲಿ ಲೆಕ್ಕಪತ್ರಗಳ ನಿರ್ವಹಣೆ (ಪ್ರಾಯೋಗಿಕ) ವಿಷಯದ ಕುರಿತು ಶ್ರೀ ಸುನೀಲ ಪತ್ತಾರ, ಮಾನ್ಯ ನಿರ್ದೇಶಕರು, ಸಹಕಾರಿ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಮುಧೋಳ ಇವರು ಹಾಗೂ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಮಾನ್ಯ ಉಪಾಧ್ಯಕ್ಷರು ಕೆಡಿಸಿಸಿ ಬ್ಯಾಂಕ್, ಶಿರಸಿ ಇವರು ಸೌಹಾರ್ದ ಸಹಕಾರಿಗಳು ನಿರ್ವಹಿಸಬೇಕಾದ ಶಾಸನಬದ್ಧ ಕರ್ತವ್ಯಗಳು, ಆಡಳಿತ ಮಂಡಲಿ ಸಾಮಾನ್ಯ ಸಭೆ, ನಡವಳಿ ದಾಖಲಿಸುವ ವಿಧಾನ (ಪ್ರಾಯೋಗಿಕ) ಕುರಿತು ಪ್ರಾಯೋಗಿಕ ತರಬೇತಿಗಳನ್ನು ನಡೆಸಿಕೊಟ್ಟರು.

## ಕ್ಲಸ್ಟರ್ ತರಬೇತಿ ಕಾರ್ಯಕ್ರಮ



**ಮಡಿಕೇರಿ:** ಕೊಡವ ಎಂಟರ್‌ಪ್ರೆನ್ಯೂರ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಸಹಕಾರಿಯ ನಿರ್ದೇಶಕರಿಗೆ ಆಡಳಿತ ಮಂಡಲಿ ಸದಸ್ಯರ ಅಧಿಕಾರಗಳು ಮತ್ತು ಕರ್ತವ್ಯಗಳ ಕುರಿತು ಕ್ಲಸ್ಟರ್ ತರಬೇತಿ ಕಾರ್ಯಕ್ರಮವನ್ನು ದಿನಾಂಕ 20 ಆಗಸ್ಟ್ 2019ರಂದು ಕೊಡವ ಸಮಾಜ ಕಾಂಪ್ಲೆಕ್ಸ್, ಮುಖ್ಯ ರಸ್ತೆ, ಮಡಿಕೇರಿಯಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಜಿಲ್ಲಾ ಸಂಂ-ಯೋಜಕರಾದ ಶ್ರೀ ಸುರೇಶ ಆರ್ ಎಸ್ ರವರು ಆಡಳಿತ ಮಂಡಲಿ ಸದಸ್ಯರ ಅಧಿಕಾರಗಳು ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿ ನೀಡಿದ್ದರು.

ಉದ್ದೇಶಿತ ವಿರಾಜಪೇಟೆ ತಾಲ್ಲೂಕು ಕೊಡವ ಸೌಹಾರ್ದ ಸಹಕಾರಿ ನಿಯಮಿತ, ಸಹಕಾರಿಯ ಪ್ರವರ್ತಕರಿಗೆ ಆಡಳಿತ ಮಂಡಲಿ ಸದಸ್ಯರ ಅಧಿಕಾರಗಳು ಮತ್ತು ಕರ್ತವ್ಯಗಳ ಕುರಿತು ಕ್ಲಸ್ಟರ್ ತರಬೇತಿ ಕಾರ್ಯಕ್ರಮವನ್ನು ದಿನಾಂಕ 14 ಆಗಸ್ಟ್ 2019ರಂದು ಪ್ರಕಾಶ್ ಟವರ್ ಕಟ್ಟಡ, ಅಪ್ಪಚು ಕವಿ ಸರ್ಕಲ್ ಹತ್ತಿರ, ವಿರಾಜಪೇಟೆ, ಕೊಡಗು ಜಿಲ್ಲೆಯಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ರವರು ಆಡಳಿತ ಮಂಡಲಿ ಸದಸ್ಯರ ಅಧಿಕಾರಗಳು ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿ ನೀಡಿದ್ದರು.




**ಮೈಸೂರು:** ಮೈಸೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಚುನಾವಣೆಯ ಕುರಿತು ಕ್ಲಸ್ಟರ್ ತರಬೇತಿ ಕಾರ್ಯಕ್ರಮವನ್ನು ದಿನಾಂಕ 13 ಆಗಸ್ಟ್ 2019 ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಗೆ ಮೈಸೂರು ಪ್ರಾಂತೀಯ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಕಾನೂನು ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದರ ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ಇವರು ಚುನಾವಣೆಯ ಕುರಿತು ಸಹಕಾರಿಗಳಿಗೆ ಮಾಹಿತಿ ನೀಡಿದ್ದರು.

## ವಲಯವಾರು ಸಭೆ




**ದಕ್ಷಿಣ ಕನ್ನಡ :** ಸದಸ್ಯ ಸಹಕಾರಿಗಳ ನಡುವೆ ಸಮನ್ವಯ ಸಾಧಿಸುವ ಉದ್ದೇಶದಿಂದ, ಸದಸ್ಯ ಸಹಕಾರಿಗಳ ಆಶಯ ಮತ್ತು ಆಶೋತ್ತರಗಳಿಗೆ ಸ್ಪಂದಿಸುವ ದೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ದಿನಾಂಕ: 06.08.2019 ಹಾಗೂ 07.08.2019ರಂದು ಸಂಯುಕ್ತ ಸಹಕಾರಿಯ ಪ್ರಾಂತೀಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ಇವರ ಅಧ್ಯಕ್ಷತೆಯಲ್ಲಿ ವಲಯವಾರು ಸಭೆಯನ್ನು ಆಯೋಜಿಸಲಾಯಿತು. ದಿನಾಂಕ: 06.08.2019ರಂದು ಮೂಡಬಿದ್ರೆ ಮತ್ತು ಮಂಗಳೂರು ನಗರ/ಗ್ರಾಮಾಂತರ ವಲಯಗಳ ಸೌಹಾರ್ದ ಸಹಕಾರಿಗಳಿಗೆ ಹಾಗೂ ದಿನಾಂಕ: 07.08.2019ರಂದು ಬಿ.ಸಿ.ರೋಡ್/ಬೆಳ್ತಂಗಡಿ ಮತ್ತು ಪುತ್ತೂರು/ಸುಳ್ಯ ವಲಯಗಳ ಸೌಹಾರ್ದ ಸಹಕಾರಿಗಳ ಸಭೆಯನ್ನು ಜರುಗಿಸಲಾಯಿತು. ಹೀಗೆ ಒಟ್ಟು 04 ಸಭೆಗಳನ್ನು ನಡೆಸಲಾಯಿತು.

## ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ 'ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ'



**ಧಾರವಾಡ:** ದಿನಾಂಕ 24 ಮತ್ತು 25 ಅಗಷ್ಟ 2019 ರಂದು ಧಾರವಾಡ, ಗದಗ, ಹಾವೇರಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳಿಗಾಗಿ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿಯನ್ನು ಕೆ.ಎಂ.ಎಫ್. ತರಬೇತಿ ಕೇಂದ್ರ ರಾಯಾಪುರ, ಧಾರವಾಡ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಾಗಾರದ ಅಧ್ಯಕ್ಷತೆಯನ್ನು ಶ್ರೀ ಚಂದ್ರಕಾಂತ ಪಡಚಣ್ಣವರ ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ವಹಿಸಿದ್ದರು ಉದ್ಘಾಟನೆಯನ್ನು ಶ್ರೀಮತಿ ಸರಸ್ವತಿ ಎನ್. ರವಿ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ಇವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ರವಿ ಯಲಿಗಾರ, ಮಾಜಿ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು. ಶ್ರೀ ಅನೂಪ ದೇಶಪಾಂಡೆ, ಮಾನ್ಯ ವಕೀಲರು ಕರ್ನಾಟಕ ಉಚ್ಛನ್ಯಾಯಾಲಯ ಧಾರವಾಡ ಹಾಗೂ ಶ್ರೀ ಶ್ರೀಕಾಂತ್ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಸಂಯುಕ್ತ ಸಹಕಾರಿ, ಬೆಳಗಾವಿ. ಇವರು ಉಪಸ್ಥಿತರಿದ್ದರು.

ತರಬೇತಿಯ ಮೊದಲನೇಯ ದಿನ ಅಂದರೆ ದಿನಾಂಕ 24.08.2019 ರಂದು ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು ಹಾಗೂ ನಿರ್ದೇಶಕರ ಜವಾಬ್ದಾರಿ ಮತ್ತು ಕರ್ತವ್ಯಗಳು ವಿಷಯದ ಕುರಿತು ಶ್ರೀ ಅನೂಪ ದೇಶಪಾಂಡೆ, ಮಾನ್ಯ ವಕೀಲರು ಕರ್ನಾಟಕ ಉಚ್ಛನ್ಯಾಯಾಲಯ ಧಾರವಾಡ ಇವರು ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ (ಉತ್ತಮ ತಂಡದ ನಿರ್ವಹಣೆಗಾಗಿ ವೈಯಕ್ತಿಕ ಮತ್ತು ತಂಡದ ಕೌಶಲ್ಯಗಳ ಅಗತ್ಯತೆ) ಕುರಿತು ಶ್ರೀ ಅಮೃತ ಜೋಷಿ ಮಾನ್ಯ ನಿರ್ದೇಶಕರು, ವಿಕಾಸ ಸೌಹಾರ್ದ ಕೋ-ಆಪ್ ಬ್ಯಾಂಕ್ ಹೊಸಪೇಟ. ಇವರು ಉಪನ್ಯಾಸ ನೀಡಿದರು.

ತರಬೇತಿಯ ಎರಡನೇಯ ದಿನ ಅಂದರೆ ದಿನಾಂಕ 25.08.2019 ರಂದು ಚಟುವಟಿಕೆಗಳು ಯೋಗಾಭ್ಯಾಸದೊಂದಿಗೆ ಪ್ರಾರಂಭವಾಯಿತು. ಶಿಬಿರಾರ್ಥಿಗಳಿಗೆ ಶ್ರೀ ನಾಗರಾಜ ಕುಲಕರ್ಣಿ, ಯೋಗ ತಜ್ಞರು ಧಾರವಾಡ. ಇವರು ಯೋಗಾಭ್ಯಾಸವನ್ನು ಹೇಳಿಕೊಟ್ಟರು. ನಂತರದಲ್ಲಿ ಸಹಕಾರಿ ಸಂಸ್ಥೆಗಳಲ್ಲಿ ವ್ಯಾಪಾರ ಅಭಿವೃದ್ಧಿ ಯೋಜನೆ ಮತ್ತು ಸಹಕಾರಿ ನಾಯಕತ್ವ –ಸವಾಲುಗಳು, ಅವಕಾಶಗಳು ಮತ್ತು ಉತ್ತರದಾಯಿತ್ವ ಸಹಕಾರಿ ಸಂಸ್ಥೆಗಳಲ್ಲಿ ಗುಣಮಟ್ಟ ನಿರ್ವಹಣೆ ವಿಷಯದ ಕುರಿತು, ಶ್ರೀ ಎಸ್. ಎ. ಸಿದ್ದಾಂತಿ, ಮಾನ್ಯ ಪ್ರಾಂಶುಪಾಲರು, ಆರ್.ಐ.ಸಿ.ಎಂ.ಬೆಂಗಳೂರು. ಇವರು ಹಾಗೂ ಗ್ರಾಹಕರ ಸೇವೆಗಳ ನಿರ್ವಹಣೆ ಮತ್ತು ಆಡಳಿತ ಮಂಡಳಿ ಜವಾಬ್ದಾರಿಗಳು ವಿಷಯದ ಕುರಿತು ಶ್ರೀ ಶ್ರೀವತ್ಸ ಗುಡಿ, ಮಾನ್ಯ ಸಹಾಯಕ ಪ್ರಾಧ್ಯಾಪಕರು ಡಾ.ವಿರೇಂದ್ರ ಹೆಗಡೆ ಇನಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ರಿಸರ್ಚ್ ಧಾರವಾಡ. ಇವರು ಉಪನ್ಯಾಸ ನೀಡಿದರು.

ಸಾಯಂಕಾಲ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಚಂದ್ರಕಾಂತ ಪಡಚಣ್ಣವರ ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಶಂಭುಲಿಂಗ ಹೆಗಡೆ, ಮಾನ್ಯ ಅಧ್ಯಕ್ಷರು, ಕದಂಬ ಮಾರ್ಕೇಟಿಂಗ್ ಸೌಹಾರ್ದ ಸಹಕಾರಿ ನಿ. ಶಿರಸಿ ಮತ್ತು ಕ್ಯಾಂಪ್ಕೋದ ಮಾನ್ಯ ನಿರ್ದೇಶಕರು ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಅಮೃತ ಜೋಷಿ, ಮಾನ್ಯ ನಿರ್ದೇಶಕರು ವಿಕಾಸ ಸೌಹಾರ್ದ ಕೋ-ಆಪ್ ಬ್ಯಾಂಕ್ ಹೊಸಪೇಟ. ಶ್ರೀ ಶ್ರೀವತ್ಸ ಗುಡಿ, ಸಹಾಯಕ ಪ್ರಾಧ್ಯಾಪಕರು ಡಾ.ವಿರೇಂದ್ರ ಹೆಗಡೆ ಇನಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ರಿಸರ್ಚ್ ಧಾರವಾಡ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ಇವರು ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 73ನೇ ಸ್ವಾತಂತ್ರ್ಯ ದಿನಾಚರಣೆ ಆಚರಣೆ.

73ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಧ್ವಜರೋಹಣವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ, ಮೈಸೂರು ವಿಭಾಗದಲ್ಲಿ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಆಚರಿಸಲಾಯಿತು.



ಕೇಂದ್ರ ಕಛೇರಿ



ಕಲಬುರಗಿ ಪ್ರಾಂತೀಯ ಕಛೇರಿ



ಮೈಸೂರು ಪ್ರಾಂತೀಯ ಕಛೇರಿ



ಬೆಳಗಾವಿ ಪ್ರಾಂತೀಯ ಕಛೇರಿ



ಬೀದರ ಜಿಲ್ಲಾ ಸಂಪರ್ಕ ಕಛೇರಿ



ಕೋಲಾರ ಜಿಲ್ಲಾ ಸಂಪರ್ಕ ಕಛೇರಿ



ಚಾಮರಾಜನಗರ ಜಿಲ್ಲಾ ಸಂಪರ್ಕ ಕಛೇರಿ

## "ರಾಜ್ಯದ ಸೌಹಾರ್ದ ಸಹಕಾರಿಗಳ ಗಮನಕ್ಕೆ"

ಇ–ಸ್ಟಾಂಪಿಂಗ್ ವ್ಯವಹಾರ ನಡೆಸಲು ಸಹಕಾರಿಗಳು ಸಂಯುಕ್ತ ಸಹಕಾರಿಯ ಖಾತೆಗೆ ಹಣ ವರ್ಗಾಯಿಸುವ ಸಮಯದಲ್ಲಿ ತಮಗೆ ನೀಡಿರುವ Virtual Account Number ಗೆ ತಮ್ಮ ಸಹಕಾರಿಯ ಖಾತೆಯಿಂದಲೇ ಹಣ ವರ್ಗಾಯಿಸಲು ಸೂಚಿಸಿದೆ.

# ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ ಆಚರಣೆ



**ಚಿಕ್ಕೋಡಿ:** ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿಯಲ್ಲಿ 73ನೇ ಸ್ವಾತಂತ್ರೋತ್ಸವದ ನಿಮಿತ್ತ ಜರುಗಿದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಶ್ರೀ ಜಗದೀಶ ಕವಟಗಿಮಠ, ಮಾನ್ಯ ಅಧ್ಯಕ್ಷರು ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಹಾಗೂ ಮಾನ್ಯ ಉಪಾಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರು. ಇವರು ಭಾಗವಹಿಸಿದ್ದರು ಮತ್ತು ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿವರ್ಗದವರು ಭಾಗವಹಿಸಿದ್ದರು.



**ಗದಗ:** ಶಿವಸಂಗಮ ವಿವಿದೋದ್ದೇಶ ಸೌಹಾರ್ದ ಸಹಕಾರಿಯಲ್ಲಿ 73ನೇ ಸ್ವಾತಂತ್ರ್ಯ ದಿನಾಚರಣೆ ಆಚರಣೆ.



**ಹೊಸಪೇಟೆ:** ಸ್ವಾರ್ತಿ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ 73ನೇ ಸ್ವಾತಂತ್ರ್ಯ ದಿನಾಚರಣೆ ಆಚರಣೆ.



**ಅಂಕೋಲಾ:** ಸೂರ್ಯ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ 73ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗರಾಜು ಹಮ್ಮಣ್ಣ ನಾಯಕ್ ಇವರು ನೇರವೇರಿಸಿದರು.



**ಉತ್ತರ ಕನ್ನಡ:** ಶ್ರೀ ಮಹಾಗಣಪತಿ–ಮಹಾಸತಿ (ಎಮ್.ಜಿ.ಎಮ್) ಪತ್ತಿನ ಸೌಹಾರ್ದ ಸಹಕಾರಿಯಲ್ಲಿ 73ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಈರಪ್ಪ ಮಂಜಪ್ಪ ಇವರು ನೇರವೇರಿಸಿದರು.



**ಚಿತ್ರದುರ್ಗ:** ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್ ನಲ್ಲಿ 73ನೇ ಸ್ವಾತಂತ್ರ್ಯ ದಿನಾಚರಣೆ ಆಚರಣೆ.



**ಚಾಮರಾಜನಗರ :** ನವ್ಯ ಕರ್ನಾಟಕ ವಿವಿದೋದ್ದೇಶ ಸೌಹಾರ್ದ ಸಹಕಾರಿಯಲ್ಲಿ 73ನೇ ಸ್ವಾತಂತ್ರ್ಯ ದಿನಾಚರಣೆ ಆಚರಣೆ.

## ಸ್ವಾತಂತ್ರ್ಯ ದಿನಾಚರಣೆ ಆಚರಣೆ

ಬದಾಮಿ ವಿಕಾಸ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾದಾಮಿ, ವಿಶ್ವಜ್ಯೋತಿ ಸೌಹಾರ್ದ ಸಹಕಾರಿ ನಿ., ಹಾನಗಲ್ಲ, ಶ್ರೀ ಶುಭಧನಲಕ್ಷ್ಮೀ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಹೊಸಪೇಟೆ, ಶ್ರೀ ದತ್ತಾತ್ರೇಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ವಿಜಯಪುರ, ಪಾರ್ವತಿ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಹಾಗೂ ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಸಹಕಾರಿಯಲ್ಲಿ 73ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜರೋಹಣವನ್ನು ಆಚರಿಸಲಾಯಿತು

## ಪತ್ರಿಕಾ ಗೋಷ್ಠಿಗಳು




**ಶಿವಮೊಗ್ಗ:** ಶಿವಮೊಗ್ಗ ಜಿಲ್ಲೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎ,ಆರ್, ಪ್ರಸನ್ನ ಕುಮಾರ್ ರವರು ಪತ್ರಿಕಾಗೋಷ್ಠಿ ನಡೆಸಿದರು.




**ಚಿಕ್ಕಬಳ್ಳಾಪುರ:** ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಎಚ್. ಕೃಷ್ಣಾರೆಡ್ಡಿ ರವರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗೇಂದ್ರ ಗುಪ್ತ ರವರು ಪತ್ರಿಕಾಗೋಷ್ಠಿ ನಡೆಸಿದರು.




**ತುಮಕೂರು :** ತುಮಕೂರು ಜಿಲ್ಲೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ,ಎಚ್, ಕೃಷ್ಣಾರೆಡ್ಡಿ ರವರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ, ಗಂಗಾಧರಯ್ಯನವರು ಪತ್ರಿಕಾಗೋಷ್ಠಿ ನಡೆಸಿದರು.



**ಚಿತ್ರದುರ್ಗ:** ಚಿತ್ರದುರ್ಗ ಜಿಲ್ಲೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ,ಹೆಚ್, ಕೃಷ್ಣಾರೆಡ್ಡಿ ರವರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಸ್.ಆರ್. ಲಕ್ಷ್ಮೀಕಾಂತ ರೆಡ್ಡಿ ರವರು ಪತ್ರಿಕಾಗೋಷ್ಠಿ ನಡೆಸಿದರು.



**ಹೊಸಪೇಟೆ:** ದಿನಾಂಕ 09–08–2019 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಹೊಸಪೇಟೆಯಲ್ಲಿ ಪತ್ರಿಕಾ ಗೋಷ್ಠಿಯನ್ನು ನಡೆಸಿದರು. ಈ ಪತ್ರಿಕಾಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಕರುಗಳಾದ ಶ್ರೀ ವಿಶ್ವನಾಥ ಚ ಹಿರೇಮಠ, ಶ್ರೀ ರಾಜಶೇಖರ ಬಿ. ಮತ್ತು ಮಾಜಿ ನಿರ್ದೇಶಕರಾದ ಶ್ರೀ ಅಂಬಿಲಿ ಮಂಜುನಾಥ ಭಾಗವಹಿಸಿದ್ದರು.



**ರಾಯಚೂರು:** ದಿನಾಂಕ 10.08.2019ರಂದು ಸಿಂಧನೂರಿನ ಕನಕ ಮಂಗಳ ಭವನದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ಇವರು ಪತ್ರಿಕಾಗೋಷ್ಠಿಯನ್ನು ನಡೆಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಆರ್.ತಿಮ್ಮಯ್ಯಶೆಟ್ಟಿ ಮತ್ತು ಶ್ರೀ ರಾಜಶೇಖರ ಬಿ ಹಾಗೂ ಮಾಜಿ ಸಂಸದರಾದ ಶ್ರೀ ಕೆ. ವಿರುಪಾಕ್ಷಪ್ಪ ಇವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ




ತೋರಣಗಲ್: ದಿನಾಂಕ 08-08-2019 ರಂದು ತೋರಣಗಲ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಲಿ., ತೋರಣಗಲ್ ಸಹಕಾರಿಗೆ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ಭೇಟಿ ನೀಡಿ ಸಹಕಾರಿಯ ಬೆಳವಣಿಗೆಯ ಕುರಿತು ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿಗಳು ಮತ್ತು ಪ್ರಾಂತೀಯ ವ್ಯವಸ್ಥಾಪಕರು ಮತ್ತು ಜಿಲ್ಲಾ ಸಂಯೋಜಕರು ಉಪಸ್ಥಿತರಿರುತ್ತಾರೆ.



ಸಿಂಧನೂರು: ದಿನಾಂಕ: 10.08.2019ರಂದು ರಾಣಿ ಚೆನ್ನಮ್ಮ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಈ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ಮತ್ತು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಆರ್. ತಿಮ್ಮಯ್ಯಶೆಟ್ಟಿ ಮತ್ತು ಶ್ರೀ ರಾಜಶೇಖರ ಬಿ ಹಾಗೂ ಮಾಜಿ ಸಂಸದರಾದ ಶ್ರೀ ಕೆ.ವಿರುಪಾಕ್ಷಪ್ಪ ಇವರುಗಳು ಭೇಟಿ ನೀಡಿ ಸಹಕಾರಿಯ ಆರ್ಥಿಕ ಚಟುವಟಿಕೆಗಳನ್ನು ಪರಿಶೀಲಿಸಿ ಸೂಕ್ತ ಸಲಹೆ ಮಾರ್ಗದರ್ಶನವನ್ನು ನೀಡಿದರು.



ರಾಯಚೂರು: ದಿನಾಂಕ: 10.08.2019ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ಆಸರೆ ಬುದ್ಧಿಮಾಂದ್ಯ ಶಾಲೆಗೆ ಭೇಟಿ ನೀಡಿ ಬುದ್ಧಿಮಾಂದ್ಯ ಮಕ್ಕಳಿಗಾಗಿ ಊಟದ ವ್ಯವಸ್ಥೆಗೆ ಚಾಲನೆಯನ್ನು ನೀಡಿರುತ್ತಾರೆ. ಈ ಸಂದರ್ಭದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಇವರು ಉಪಸ್ಥಿತರಿದ್ದರು.



ಸಿಂಧನೂರು: ದಿನಾಂಕ: 10.08.2019ರಂದು ಜನತಾ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ಮತ್ತು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಗುರುನಾಥ ಜ್ಯಾಂತಿಕರ, ಆರ್.ತಿಮ್ಮಯ್ಯಶೆಟ್ಟಿ ಮತ್ತು ರಾಜಶೇಖರ ಬಿ ಹಾಗೂ ಮಾಜಿ ಸಂಸದರಾದ ಶ್ರೀ ಕೆ.ವಿರುಪಾಕ್ಷಪ್ಪ ಇವರುಗಳು ಈ ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಆರ್ಥಿಕ ಚಟುವಟಿಕೆಗಳನ್ನು ಪರಿಶೀಲಿಸಿ ಸೂಕ್ತ ಸಲಹೆ ಮಾರ್ಗದರ್ಶನವನ್ನು ನೀಡಿದರು.



ಕೊಪ್ಪಳ: ದಿನಾಂಕ: 9.08.2019ರಂದು ಖುಷಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಂಗಾವತಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಬಿ.ಶ್ರೀಧರ ಇವರು ಭೇಟಿ ನೀಡಿ ಸಹಕಾರಿಯ ಆರ್ಥಿಕ ಚಟುವಟಿಕೆಗಳನ್ನು ಪರಿಶೀಲಿಸಿ ಸೂಕ್ತ ಸಲಹೆ ಮಾರ್ಗದರ್ಶನವನ್ನು ನೀಡಿದರು. ಕೊಪ್ಪಳ ಜಿಲ್ಲಾ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪಾ ಪತ್ತಾರ, ಉಪಾಧ್ಯಕ್ಷರಾದ ಶ್ರೀ ಶಂಕರಗೌಡ ಎಲ್.ಹೆಚ್, ಕೊಪ್ಪಳ ಜಿಲ್ಲಾ ಒಕ್ಕೂಟದ ಮಾನ್ಯ ನಿರ್ದೇಶಕರು, ಮತ್ತು ಖುಷಿ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಆನಂದಕುಮಾರ, ಮಾನ್ಯ ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿಯ ನಿರ್ದೇಶಕರು, ಸಿಬ್ಬಂದಿವರ್ಗದವರು ಮತ್ತು ಪಿಗ್ಮಿ ಸಂಗ್ರಹಕಾರರು ಉಪಸ್ಥಿತರಿದ್ದರು.

ಮಾನವಿ : ದಿನಾಂಕ: 10.09.2019ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ಮಾನವಿಯಲ್ಲಿರುವ ರಾಯಚೂರು ಜಿಲ್ಲಾ ಸಂಪರ್ಕ ಕಛೇರಿಗೆ ಭೇಟಿ ನೀಡಿದರು.

## ನೆರೆ ಸಂತ್ರಸ್ತರಿಗೆ ಉದಾರ ದೇಣಿಗೆ ನೀಡಿದ ಸೌಹಾರ್ದ ಸಹಕಾರಿಗಳ ವಿವರ

| SL NO. | Code | Subscriber | Amount |
|---|---|---|---|
| 1 | BGM-0004 | Sri Arihantha Credit Souharda Sahakari Ltd., | 1,00,000.00 |
| 2 | BGU-0040 | Sri Vemana Souharda Credit Co-Operative Ltd., | 1,00,000.00 |
| 3 | CTG-0002 | The Merchants Souharda Sahakara Bank Ni., | 1,00,000.00 |
| 4 | KWR-0049 | Saint Milagris Credit Souharda Cooperative Ltd., | 50,000.00 |
| 5 | RCR-0055 | Tungabhadra Pattina Souharda Sahakari Ni. | 50,000.00 |
| 6 | CTG-0036 | Sri Kanyaka Parameshwari Souharda Sahakara Ni., | 25,000.00 |
| 7 | KPL-0091 | Soubhagyalaxmi Vividoddesha Souharda Sahakari Ni., | 25,000.00 |
| 8 | MYS-0006 | Mysuru Credit Souharda Sahakari Ltd., | 25,000.00 |
| 9 | CTG-0075 | Vishwachethana Souharda Sahakari Ni., | 20,000.00 |
| 10 | BGM-0061 | Sri Basaveshwara Credit Souharda Sahakari Ni., | 15,000.00 |
| 11 | BGU-0107 | S L V Souharda Pattina Sahakari Ni., | 15,000.00 |
| 12 | MDY-0008 | Mandya Varthakara Pattina Souharda Sahakari Ni., | 15,000.00 |
| 13 | BGU-0190 | Bandavya Souharda Credit Sahakari Ltd., | 14,000.00 |
| 14 | BEL-0006 | Sri Gayatri Pattina Souharda Sahakari Ni., | 11,500.00 |
| 15 | BGM-0041 | Sri Adinatha Multipurpose Souharda Sahakari Ltd. | 11,000.00 |
| 16 | BGM-0388 | Sri Arihanta Credit Souharda Sahakari Ni., | 11,000.00 |
| 17 | GLB-0052 | Sri Sharana Basaveshwara Pattina Souharda Sahakari Ni. | 11,000.00 |
| 18 | RCR-0014 | Ashwini Souharda Pattina Sahakari Ni., | 11,000.00 |
| 19 | BGU-0411 | Udayanagara Souharda Credit Co Operative Ltd., | 10,001.00 |
| 20 | BGM-0112 | Arihant Urban Souharda Credit Sahakari Ltd., | 10,000.00 |
| 21 | BGM-0354 | Jagajyoti Basaveshwara Pattina Souharda Sahakari Ni. | 10,000.00 |
| 22 | BGU-0221 | Sahajanya Vividoddesha Souharda Sahakari Ni., | 10,000.00 |
| 23 | BJP-0004 | Vasavi Souharda Credit Sahakari Ni., | 10,000.00 |
| 24 | BJP-0010 | Sri Gajanana Souharda Pattina Sahakari Ni. | 10,000.00 |
| 25 | GDG-0004 | Jyothi Pattina Souharda Sahakari Ni., | 10,000.00 |
| 26 | KLR-0009 | Sri Sai Souharda Credit Co-operative Ltd., | 10,000.00 |
| 27 | RCR-0109 | Sri Chandeshwara Pattina Souharda Sahakari Ni., | 10,000.00 |

| | | | |
|---|---|---|---|
| 28 | SMG-0002 | Saraswat Souharda Pattina Sahakari Ni., | 10,000.00 |
| 29 | UDP-0006 | Sai Ganesh Souharda Credit Co-operative Ltd.. | 10,000.00 |
| 30 | KPL-0200 | Tatwamasi Pattina Souharda Sahakari Ni., | 10,000.00 |
| 31 | KPL-0212 | Sri Udayonmukha Pattina Souharda Sahakari Ni., | 10,000.00 |
| 32 | HVR-0066 | Sri Guru Sadananda Souharda Pattina Sahakari Ni., | 5,001.00 |
| 33 | MNG-0076 | Karunya Souharda Credit Sahakari Ni., | 5,001.00 |
| 34 | KPL-0237 | Sri Guru Krupa Pattina Souharda Sahakari Ni., | 5,001.00 |
| 35 | BGM-0006 | Sri Panchacharya Urban Credit Souharda Sahakari Ltd., | 5,000.00 |
| 36 | BGM-0529 | Channabasaveshwara Credit Souharda Sahakari Ni., | 5,000.00 |
| 37 | BGM-0807 | Sri Shabaridevi Vividha Uddeshagala Souharda Sahakari Ni., | 5,000.00 |
| 38 | BGU-0247 | Dr.Hegde Credit Souharda Sahakari Ni., | 5,000.00 |
| 39 | BJP-0062 | Jai Jawan Souharda Pattina Sahakari Ni., | 5,000.00 |
| 40 | BJP-0066 | Sri Kedareshwar Vividoddeshagala Souharda Sahakari Ni., | 5,000.00 |
| 41 | BJP-0171 | Amruthajyothi Credit Souharda Sahakari Ni., | 5,000.00 |
| 42 | HSN-0001 | Sri Vigneshwar Vividodhesha Souharda Sahakari Ni., | 5,000.00 |
| 43 | HVR-0007 | Sri Veeramaheshwar Pattina Souharda Sahakari Ni. | 5,000.00 |
| 44 | KWR-0029 | Sri Matha Vaibhava Mahalakshmi Credit Souharda Sahakari Ni., | 5,000.00 |
| 45 | KWR-0085 | V-Care Credit Souharda Sahakari Ni., | 5,000.00 |
| 46 | SMG-0011 | Sri Gandha Souharda Credit Co-Operative Ltd. | 5,000.00 |
| 47 | SMG-0024 | Kodachadri Adike Souharda Sahakari Ni. | 5,000.00 |
| 48 | UDP-0003 | Bharathi Souharda Credit Co-operative Ltd., | 5,000.00 |
| 49 | UDP-0016 | Janahita Souharda Vividoddesha Sahakari Ni., | 5,000.00 |
| 50 | GLB-0150 | Kalyana Nidhi Souharda Pattina Ni., | 5,000.00 |
| 51 | KPL-0160 | Bhagatsing Pattina Souharda Sahakari Ni., | 5,000.00 |
| 52 | KPL-0219 | Sri Rajarajeshwari Pattina Souharda Sahakari Ni., | 5,000.00 |
| 53 | DVG-0062 | Davanagere Sri Someshwara Souharda Credit Co-operative Ltd., | 5,000.00 |
| 54 | HVR-0110 | Sri Akshaya Ganapathi Kshemabhivruddhi Souharda Sahakari Ni., | 5,000.00 |
| 55 | BJP-0385 | Varasiddi Vinayaka Souharda Sahakari Ni., | 5,000.00 |
| 56 | RCR-0198 | Sri Kalanabha Pattina Souharda Sahakari Ni., | 5,000.00 |

| | | | |
|---|---|---|---|
| 57 | BGM-0080 | Sri Basaveshwara Credit Souharda Sahakari Ltd. | 5,000.00 |
| 58 | BGU-0240 | Sri Jade Shankara Linga Souharda Credit Co-operative Ltd., | 5,000.00 |
| 59 | MYS-0016 | Parivarthana Vividoddesha Mahila Souharda Sahakari Ni., | 4,000.00 |
| 60 | DWD-0098 | Sri Sharanabasaveshwara Souharda Sahakari Ni., | 4,000.00 |
| 61 | BGM-0552 | Farah Urban Credit Souharda Sahakari Ni., | 2,500.00 |
| 62 | BJP-0267 | Sri Amoghasiddeshwara Souharda Pattina Sahakari Ni., | 2,000.00 |
| 63 | KWR-0011 | Sri Vivek Credit Souharda Sahakari Ni., | 2,000.00 |
| 64 | DWD-0108 | Janadhana Urban Credit Souharda Sahakari Ni., | 2,000.00 |
| 65 | BGK-0287 | Sri Samruddhi Mahila Souharda Sahakari Ni., | 2,000.00 |
| 66 | KPL-0117 | Sri Malemalleshwara Souharda Pattina Sahakari Ni., | 1,000.00 |
| 67 | SMG-0095 | Bahu Krushi Vividhoddesha Souharda Sahakari Ni., | 1,000.00 |
| 68 | BJP-0294 | Virata Viswakarma Souharda Pattina Sahakari Ni., | 1,000.00 |
| 69 | RCR-0150 | Nidhisri Souharda Pattina Sahakari Ni., | 1,000.00 |
| | | TOTAL | 8,97,004.00 |



**ಹುಬ್ಬಳ್ಳಿ:** ಹುಬ್ಬಳ್ಳಿಯ ಮಂತ್ರ ರೆಸಿಡೆನ್ಸಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್. ಎನ್. ದೇಶಪಾಂಡೆ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಪತ್ರಿಕಾಗೋಷ್ಠಿ ನಡೆಸಿದರು.




**ಉತ್ತರ ಕನ್ನಡ:** ದಿನಾಂಕ 31 ಆಗಸ್ಟ್ 2019 ರಂದು ಶಿರಸಿಯ ಮಧುವನ ಹೋಟಲ್ ಆರಾಧನ ಸಭಾಂಗಣ ನಡೆದ ಪತ್ರಿಕಾಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ .ಕೃಷ್ಣಾರೆಡ್ಡಿ, ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ತರಬೇತಿ ವ್ಯವಸ್ಥಾಪಕರಾದ ಶ್ರೀ ವಿ.ಜೆ.ಕಾರಕೂನ್, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಮತ್ತು ಪತ್ರಿಕಾ ಮಾಧ್ಯಮದವರು ಉಪಸ್ಥಿತರಿದ್ದರು.

## ಡಿ.ಸಿ.ಬಿ.ಎಮ್ ಮರುಮೌಲ್ಯಮಾಪನದ ಫಲಿತಾಂಶ.

ಶ್ರೀಮತಿ ತುಳಸಿ ಮಂಜುನಾಥ ಇವರು ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ (ಕ್ರಮಸಂಖ್ಯೆ–50) ತಮ್ಮ ಫಲಿತಾಂಶವನ್ನು ಮರುಮೌಲ್ಯಮಾಪನಕ್ಕಾಗಿ ವಿನಂತಿಸಿಕೊಂಡಿದ್ದರು. ಅವರ ಉತ್ತರ ಪತ್ರಿಕೆಗಳ ಮರು ಮೌಲ್ಯ ಮಾಪನ ಮಾಡಲಾಗಿದ್ದು, ಫಲಿತಾಂಶ ಮೊದಲು 413 ಅಂಕಗಳಿಂದು ಈಗ 429 ಅಂಕಗಳನ್ನು ಪಡೆದಿದ್ದು ಅವರು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

## ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಉದ್ಘಾಟನಾ ಕಾರ್ಯಕ್ರಮ



**ರಾಯಚೂರು:** ದಿನಾಂಕ 10-08-2019 ರಂದು ಸಿಂಧನೂರಿನ ಕನಕ ಮಂಗಳ ಭವನದಲ್ಲಿ ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಸಿಂಧನೂರು ಇದರ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ನೇರವೆರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರು, ಮಾಜಿ ಸಂಸದರಾದ ಶ್ರೀ ವಿರುಪಾಕ್ಷಪ್ಪ ವಹಿಸಿದ್ದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ, ಶ್ರೀ ಆರ್.ತಿಮ್ಮಯ್ಯಶೆಟ್ಟಿ ಹಾಗೂ ಶ್ರೀ ರಾಜಶೇಖರ ಬಿ ಮತ್ತು ಮಾಜಿ ಶಾಸಕರಾದ ಶ್ರೀ ಪ್ರತಾಪಗೌಡ ಪಾಟೀಲ, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮದ ನಿರ್ದೇಶಕರಾದ ಶ್ರೀ ಮಂಜುಳಾ ಪಾಟೀಲ, ಶ್ರೀ ಎಸ್ ಎಸ್ ಪಾಟೀಲ ಹಾಗೂ ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಇತರೆ ಹಿರಿಯ ಸಹಕಾರಿಗಳು ಭಾಗವಹಿಸಿದ್ದರು.

## ಪುತ್ತೂರಿನ ನಂದನ ವಿವಿದೋದ್ದೇಶ ಸೌಹಾರ್ದ ಸಹಕಾರಿಗೆ ನಿರ್ದೇಶಕರ ಭೇಟಿ



**ಪುತ್ತೂರು:** ದಿನಾಂಕ 07-08-2019 ರಂದು ಪುತ್ತೂರಿನ ನಂದನ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಕಛೇರಿಗೆ ಮೈಸೂರು ಪ್ರಾಂತೀಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ಇವರು ಭೇಟಿ ನೀಡಿದರು.

ಭೇಟಿಯ ಸಂದರ್ಭದಲ್ಲಿ ಸಹಕಾರಿಯ ಕ್ಷಿಪ್ರಗತಿಯ ಅಭಿವೃದ್ಧಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಸ್ಥೆಯ ಲೆಕ್ಕಪರಿಶೋಧನಾ ವರದಿಯನ್ನು ಪರಿಶೀಲಿಸಿ ಸಹಕಾರಿಯನ್ನು ನಿವ್ವಳ ನಷ್ಟದಿಂದ ಲಾಭದೆಡೆಗೆ ತರುವ ನಿಟ್ಟಿನಲ್ಲಿ ಸಹಕಾರಿಯ ನಿರ್ದೇಶಕ ಮಂಡಳಿ ಮತ್ತು ಸಿಬ್ಬಂದಿಗಳಿಗೆ ಸೂಕ್ತ ಸಲಹೆ/ಸೂಚನೆ ನೀಡಿದರು. ಸಂಸ್ಥೆಯು ಆರಂಭದಿಂದಲೂ ವಿವಿಧ ರೀತಿಯ ವ್ಯವಹಾರ ಮಾಡಿದ್ದು, ಸಂಸ್ಥೆಯ ಆರ್ಥಿಕ ಬುನಾದಿ ಅತ್ಯುತ್ತಮವಾಗಿದೆ. ಮುಂದಿನ ದಿನಗಳಲ್ಲಿ ಸಂಸ್ಥೆಯು ಲಾಭಕ್ಕೆ ಬಂದು ಸದಸ್ಯರಿಗೆ ಡಿವಿಡೆಂಡ್ ನೀಡುವಂತಾಗಬೇಕು ಎಂದು ತಿಳಿಸಿದರು. ಇದೇ ಸಂಧರ್ಭದಲ್ಲಿ ನಿರ್ದೇಶಕರನ್ನು ಸಹಕಾರಿಯ ಆಡಳಿತ ಮಂಡಳಿಯಿಂದ ಸನ್ಮಾನಿಸಿದರು.

## ಜೈ ಶ್ರೀ ಅಂಬೆದುರ್ಗಾಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸ್ಥಳಾಂತರ ಸಮಾರಂಭ



**ಕಾರವಾರ :** ಕಾರವಾರ ತಾಲೂಕಿನ ಸದಾಶಿವಗಡದ ಚಿತ್ತಾಕುಲಾದಲ್ಲಿ 'ಜೈ ಶ್ರೀ ಅಂಬೆ ದುರ್ಗಾಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಇದರ 2ನೇ ಚಿತ್ತಾಕುಲಾ ಶಾಖೆಯ ಸ್ಥಳಾಂತರ ಸಮಾರಂಭಕ್ಕೆ ಆಶೀರ್ವಚನ ಹಾಗೂ ಉದ್ಘಾಟಕರಾಗಿ ಆಗಮಿಸಿದ್ದ ರಾಮಕೃಷ್ಣ ಆಶ್ರಮದ ಶ್ರೀ ಭಾವೇಶಾನಂದ ಸ್ವಾಮಿಜಿಯವರು ನಮ್ಮ ಸಹಕಾರಿಯನ್ನು ಉದ್ದೇಶಿಸಿ 'ಪ್ರತಿಯೊಬ್ಬ ಮನುಷ್ಯನೂ ದಾನ ಮಾಡುವ ಗುಣವನ್ನು ಬೆಳೆಸಿಕೊಳ್ಳಬೇಕು, ಹಾಗಿದ್ದಾಗ ಮಾತ್ರ ಜೀವನದಲ್ಲಿ ಮುಂದೆ ಬರಲು ಸಾಧ್ಯ ಎಂದು ಹೇಳುತ್ತಾ ದುರ್ಗಾಮಾತಾ ಸೌಹಾರ್ದ ಸಹಕಾರಿಯು ಕಾರವಾರ ತಾಲೂಕಿನಲ್ಲಿ ಉನ್ನತವಾಗಿ ತನ್ನ ಗ್ರಾಹಕರಿಗೆ ಸೇವೆಸಲ್ಲಿಸುತ್ತಾ ಬಂದಿದೆ, ಹಾಗೂ ಇತರೇ ಸಾಮಾಜಿಕ ಸಣ್ಣ ಪುಟ್ಟ ಕಾರ್ಯದಲ್ಲಿ ತನ್ನನ್ನು ತೊಡಗಿಸುತ್ತಾ ಬಂದಿರುತ್ತದೆ, ದುರ್ಗಾಮಾತಾ ಸಹಕಾರಿಯು ಕಾರವಾರ ಅಲ್ಲದೇ ಕರ್ನಾಟಕದಲ್ಲಿ ತನ್ನ ಶಾಖೆಗಳನ್ನು ತೆರೆದು ಕರ್ನಾಟಕದ ಜನರಿಗೆ ಸಹಕಾರಿಯ ಸವಲತ್ತುಗಳು ನೀಡುವುದಾಗಿ ಹಾರೈಸಿದರು.

## ಇಫ್ಕೋ ಸಂಸ್ಥೆಯ ಶ್ರೀ ಸಿ.ಎಸ್ ಪಾಟೀಲ್ ರವರಿಗೆ ಬೀಳ್ಕೊಡಿಗೆ ಕಾರ್ಯಕ್ರಮ



**ಬೆಂಗಳೂರು:** ಸಹಕಾರಿ ರಂಗದಲ್ಲೇ ಅದ್ವಿತೀಯ ಸಂಸ್ಥೆಯಾದ ಇಫ್ಕೋ (ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ ಕೋ ಆಪರೇಟಿವ್ ಲಿ., ಸಂಸ್ಥೆಯಲ್ಲಿ 34 ವರ್ಷಗಳ ಕಾಲ ಸೇವೆ ಸಲ್ಲಿಸಿ ಕಳೆದ 31.07.2019 ರಂದು ನಿವೃತ್ತರಾದ ಶ್ರೀ ಸಿ.ಎಸ್ ಪಾಟೀಲ್ ರವರಿಗೆ ಬೆಂಗಳೂರಿನ ಸೆಂಚುರಿ ಕ್ಲಬ್‌ನಲ್ಲಿ ಬೀಳ್ಕೋಡುಗೆ ಸಮಾರಂಭದಲ್ಲಿ ಏರ್ಪಡಿಸಲಾಗಿತ್ತು.

ಇಫ್ಕೋ ಸಂಸ್ಕೆಯ ನಿರ್ದೇಶಕರೂ ಹಾಗೂ ಕೋಲಾರ ವಿಧಾನ ಸಭಾ ಕ್ಷೇತ್ರದ ಶಾಸಕರೂ ಆದ ಶ್ರೀ ಕೆ. ಶ್ರೀನಿವಾಸಗೌಡರವರು ಕಾರ್ಯಕ್ರಮವನ್ನು ದೀಪ ಬೆಳಗುವುದರೊಂದಿಗೆ ಉದ್ಘಾಟಿಸಿ ಶ್ರೀ ಸಿ.ಎಸ್. ಪಾಟೀಲರವರ ಸೇವಾ ಅವಧಿಯ ಕಾರ್ಯಪ್ರಗತಿ ಮತ್ತು ಸೇವೆಯನ್ನು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಸಿ.ಎಸ್ ಪಾಟೀಲ್, ಶ್ರೀಮತಿ ಪದ್ಮಾ ಪಾಟೀಲ್ ಮತ್ತು ಕರ್ನಾಟಕ ರಾಜ್ಯ ಮಾರಾಟ ವ್ಯವಸ್ಥಾಪಕರಾಗಿ ಜವಾಬ್ದಾರಿ ವಹಿಸಿಕೊಂಡಿರುವ ಡಾ. ನಾರಾಯಣ ಸ್ವಾಮಿಯವರು ಹಾಗೂ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ. ಜಿ. ಪಾಟೀಲ ಹಾಗೂ ಸಹಕಾರಿ, ಕೃಷಿ ಹಾಗೂ ಇತರೆ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಇಫ್ಕೋ ಕ್ಷೇತ್ರಾಧಿಕಾರಿಗಳಾದ ಶ್ರೀ ಸತೀಶ್‌ಕುಮಾರ್ ಹೆಚ್. ಎಮ್ ಇವರು ಕಾರ್ಯಕ್ರಮ ನಿರೂಪಣೆ ಮಾಡಿದರು.

## ಉಚಿತ ಆರೋಗ್ಯ ತಪಸಣಾ ಶಿಬಿರ



**ಬೆಂಗಳೂರು:** ದಿನಾಂಕ 28.07.2019 ರಂದು ಜನವಿಕಾಸ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಸದರಿ ಸಹಕಾರಿ ವತಿಯಿಂದ ಉಚಿತ ಆರೋಗ್ಯ ತಪಸಣಾ ಶಿಬಿರವನ್ನು ನಮ್ಮ ಸದಸ್ಯರಿಗಾಗಿ ಪ್ರಕ್ರಿಯ ಆಸ್ಪತ್ರೆ, 8ನೇ ಮೈಲಿ, ತುಮಕೂರು ಹಾಗೂ ನಾಡಿಚಿಕಿತ್ಸೆ ಮಿತ್ರ ಆರೋಗ್ರ ಧಾಮ ಪೋ. ರಮೇಶ ರವರ ಸಹಯೋಗದೊಂದಿಗೆ ಯಶಸ್ವಿಯಾಗಿ ನೇರವೇರಿಸಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಎಸ್. ಮುನಿರಾಜು, ಮಾಜಿ ಶಾಸಕರು, ಶ್ರೀ ಬಿ.ಆರ್ ಯತಿರಾಜು, ಪೋಲೀಸ್ ಸಬ್‌ಇನ್‌ಸ್ಪೆಟರ್, ಸಿಸಿಬಿ. ಬೆಂಗಳೂರು ಹಾಗೂ ನಮ್ಮ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಎಂ.ಬಿ. ದಯಾನಂದ ಹಾಗೂ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದ ಸಹಕಾರದೊಂದಿಗೆ ನೇರವೇರಿಸಲಾಯಿತು.

## 9ನೇ ವರ್ಷದ ವಾರ್ಷಿಕ ಮಹಾ ಸಭೆ



**ಸಿಂಧನೂರು:** ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ 9ನೇ ವರ್ಷದ ವಾರ್ಷಿಕ ಮಹಾ ಸಭೆ ದಿನಾಂಕ 25–08–2019ರಂದು ಶ್ರೀ ಲಕ್ಷ್ಮೀ ರೆಸಿಡೆನ್ಸಿ, ಸಿಂಧನೂರಿನಲ್ಲಿ ನೆರವೇರಿತು. ಮಹಾ ಸಭೆಯನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟನೆ ಮಾಡಲಾಯಿತು. ಎಂ. ಲೋಕನಗೌಡ ಅಧ್ಯಕ್ಷರು 2018–19ನೇ ಸಾಲಿನಲ್ಲಿ ಸಹಕಾರಿಯು ರೂ.65.43 ಲಕ್ಷ ನಿವ್ವಳ ಲಾಭ ಗಳಿಸಿದ್ದು ಸದರಿ ವರ್ಷವೂ ಶೇ 20% ರಷ್ಟು ಲಾಭಾಂಶವನ್ನು ಸದಸ್ಯರಿಗೆ ಹಂಚಲು ಹರ್ಷ ವ್ಯಕ್ತಪಡಿಸುತ್ತಾ ಈ ಎಲ್ಲಾ ಅಭಿವೃದ್ಧಿಗೆ ಕಾರಣರಾದಂತಹ ಕಾರ್ಯಕಾರಿ ಮಂಡಳಿಯವರ ಅಮೂಲ್ಯ ಸಲಹೆಗೆ, ಸಹಕಾರಿಯ ಸದಸ್ಯರಿಗೆ ಹಾಗೂ ಗ್ರಾಹಕರಿಗೆ ಮತ್ತು ಸಿಬ್ಬಂದಿಗಳ ಪರಿಶ್ರಮಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು.

# ಉದ್ಘಾಟನಾ ಕಾರ್ಯಕ್ರಮ



**ಕಲ್ಯಾಣಪುರ :** ಶ್ರೀ ವೇಣುಗೋಪಾಲಕೃಷ್ಣ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಇದರ ನೂತನ ಶಾಖಾ ಕಛೇರಿಯನ್ನು 25.08.2019 ರಂದು ಜಿ.ಎಲ್.ಎಮ್ ಕಾಂಪ್ಲೆಕ್ಸ್, ಜಯನಗರ, ಸಂತೆಕಟ್ಟೆ– ಕಲ್ಯಾಣಪುರ ಇಲ್ಲಿ ಶ್ರೀ ಮಂಜುನಾಥ ಎಸ್ ಕೆ, ನಿರ್ದೇಶಕರು, ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿ ನಿ. ಬೆಂಗಳೂರು ಇವರು ಉದ್ಘಾಟಿಸಿದರು. ಇವರೊಂದಿಗೆ ಉಡುಪಿ ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ ಬಿ. ಎಸ್ ಹಾಗೂ ಉಡುಪಿ ನಗರಸಭೆ ಗೋಪಾಲಪುರ ವಾರ್ಡಿನ ಸದಸ್ಯೆ ಶ್ರೀಮತಿ ಮಂಜುಳಾ ಬಿ ನಾಯಕ್ ಉಪಸ್ಥಿತರಿದ್ದರು.



**ವಿಜಯಪುರ:** ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ಜೀರ್ಣೋದ್ದಾರ ಸಮಿತಿ ವತಿಯಿಂದ ಕರ್ನಾಟಕ ರಾಜ್ಯ ಸರ್ಕಾರದ ಕಿತ್ತೂರ ರಾಣಿ ಚನ್ನಮ್ಮ" ಪ್ರಶಸ್ತಿ ವಿಜೇತರಾದ ಹಾಗೂ ಗುರುಮಾತೆಯರ ಜಿಲ್ಲಾ ಮಹಿಳಾ ಸೌಹಾರ್ದ ಸಹಕಾರಿ ನಿಯಮಿತ ವಿಜಯಪುರ ಇದರ ಅಧ್ಯಕ್ಷರಾದ ಶ್ರೀಮತಿ ಮಹಾದೇವಿ ಚನಬಸಯ್ಯ ಹಿರೇಮಠ ಇವರನ್ನು ಸನ್ಮಾನಿಸಲಾಯಿತು.



ಬೆಳಗಾವಿ: ದಿನಾಂಕ 31.08.2019ರಂದು ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿಯ 4ನೇ ವಾರ್ಷಿಕ ಮಹಾಸಭೆಯನ್ನು ಶ್ರೀ ತ್ರಿವಿಧ ದಾಸೋಹ ಮೂರ್ತಿ ಸಿದ್ರಾಯಜ್ಜನವರ ಮಠ ಜಿವಾಪೂರ ರೋಡ ಕಟಕೋಳದಲ್ಲಿ ನಡೆಯಿತು



**ವಿಜಯಪುರ:** ವೀರಶೈವ ಲಿಂಗಾಯತ ಸೌಹಾರ್ದ ಸಹಕಾರಿ ನಿ., ಸದರಿ ಸಹಕಾರಿಯ ಉದ್ಘಾಟನೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವರಾಜು ಚೈಕಿಮಠ, ಉಪಾಧ್ಯಕ್ಷರಾದ ಚನ್ನಬಸಯ್ಯ ಹೀರೇಮಠ ಇವರು ನೇರವೇ–ರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಎಲ್ಲ ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.



**ಉಡುಪಿ :** ಉಡುಪಿ ಜಿಲ್ಲೆಯ ಕುಂದಾಪುರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಇದರ ನೂತನ ಶಾಖೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ. ಇವರ ಉದ್ಘಾಟಿಸಿದರು.




**ಬೆಂಗಳೂರು:** ರೇಷ್ಮೆ ಮಿತ್ರರ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ರೇಷ್ಮೆ ನಗರ, ಬೆಂಗಳೂರು ಇದರ 3ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ 25.08.2019 ರಂದು ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಸಭಾಂಗಣ ತಲಘಟ್ಟಪುರ, ಬೆಂಗಳೂರು ಇಲ್ಲಿ ಸದರಿ ಸಹಕಾರಿಯ ಅಧ್ಯಕ್ಷರಾದ ಡಾ॥ ವೆಂಕಟರಾಮು ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

# ಸುಕೋ ಬ್ಯಾಂಕ್ ನ ಬೆಳ್ಳಿ ಹಬ್ಬದ ಆಚರಣೆ



ಚಿತ್ರದುರ್ಗದಲ್ಲಿ ಬೆಳ್ಳಿ ಹಬ್ಬದ ಸಂಭ್ರಮೋತ್ಸವ

ದಿನಾಂಕ 13.07.2019ರ ಶನಿವಾರ ಸಂಜೆ 6 ಗಂಟೆಗೆ ಕೆಇಬಿ ನೌಕರರ ಸಮುದಾಯ ಭವನದಲ್ಲಿ ಎಂ.ಡಿ. ಪಲ್ಲವಿ ಮತ್ತು ಅವರ ತಂಡದಿಂದ ಸುಮಧುರ ಸ್ವರ ಸಂಗೀತ ಗಾಯನ 'ಸುಕೋ ಸಂಜೆ' ಅತ್ಯಂತ ಯಶಸ್ವಿಯಾಗಿ, ಅದ್ದೂರಿಯಾಗಿ ನೆರವೇರಿತು. ಬೆಳ್ಳಿ ಹಬ್ಬದ ಅಂಗವಾಗಿ ಮಹಿಳೆಯರು ಮತ್ತು ಮಕ್ಕಳಿಗಾಗಿ ಕ್ಯಾರಿಕೇಚರ್ ಆನ್ ಮಗ್, ಮೆಹೆಂದಿ, ಹೋಪ್ಲಾ ಆಟ, ಕೀ ಚೈನ್ ಮೇಕಿಂಗ್, ಟ್ಯಾಟೋ ಹಾಕುವಿಕೆ, ನೇಲ್ ಪಾಲಿಷ್, ಬೆಲೂನ್ ಶೂಟಿಂಗ್ ವಿಶೇಷ ಮನೋರಂಜನಾ ಚಟುವಟಿಕೆಗಳನ್ನು ಏರ್ಪಡಿಸಲಾಗಿತ್ತು. ಮಕ್ಕಳು ಮತ್ತು ಮಹಿಳೆಯರು ಈ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.

ಬ್ಯಾಂಕ್‌ನ ಸಂಸ್ಥಾಪಕ ಅಧ್ಯಕ್ಷ ಶ್ರೀ ಮನೋಹರ್ ಮಸ್ಕಿ, ಹಾಲಿ ಅಧ್ಯಕ್ಷ ಶ್ರೀ ಮೋಹಿತ್ ಮಸ್ಕಿ, ನಿರ್ದೇಶಕರಾದ ಶ್ರೀ ಸತ್ಯನಾರಾಯಣ, ಶ್ರೀಮತಿ ಸಾವಿತ್ರಿ ದಾನಗೌಡ, ಶ್ರೀ ವೆಂಕಾರೆಡ್ಡಿ ಸಕ್ರಿಯವಾಗಿ ಪಾಲ್ಗೊಂಡು, ಕಾರ್ಯಕ್ರಮದ ಯಶಸ್ವಿಗೆ ಸಲಹೆ – ಸೂಚನೆಗಳನ್ನು ನೀಡಿದರು.

ನಾಡಿನ ಖ್ಯಾತ ಗಾಯಕಿ ಎಂ.ಡಿ. ಪಲ್ಲವಿ ಅವರ ಸ್ವರ ಮಾಧುರ್ಯವನ್ನು ಸವಿದ ಚಿತ್ರದುರ್ಗದ ನಾಗರೀಕರು ಬ್ಯಾಂಕ್‌ನ ಸಾಂಸ್ಕೃತಿಕ ಮನೋಭಾವವನ್ನು ಮುಕ್ತಕಂಠದಿಂದ ಕೊಂಡಾಡಿದರು. ವಿವಿಧ ಕ್ಷೇತ್ರಗಳಲ್ಲಿಯ ಗಣ್ಯರು ಮತ್ತು ವಿಶಿಷ್ಟ ವ್ಯಕ್ತಿಗಳನ್ನು ಒಳಗೊಂಡು ರಚಿಸಲಾಗಿದ್ದ, 'ಬೆಳ್ಳಿ ಹಬ್ಬ ಸಂಚಾಲನಾ ಸಮಿತಿ' ಮತ್ತು 'ಬೆಳ್ಳಿ ಹಬ್ಬದ ಸಮಿತಿ' ಸಕ್ರಿಯವಾಗಿ ಪಾಲ್ಗೊಂಡು, ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಿತು.

### ಚನ್ನಗಿರಿಯಲ್ಲಿ

ಚನ್ನಗಿರಿಯ ಬೀರೂರು ರಸ್ತೆಯ ಜವಳಿ ಕಲ್ಯಾಣ ಮಂಟಪದಲ್ಲಿ ಜುಲೈ 14, 2019ರ ಶನಿವಾರ ಸಂಜೆ 5.30ಕ್ಕೆ 'ಸುಕೋ ಸಂಜೆ' ಅದ್ದೂರಿಯಾಗಿ ನೆರವೇರಿತು. ಕರ್ನಾಟಕದ ಖ್ಯಾತ ಗಾಯಕಿ ಎಂ.ಡಿ. ಪಲ್ಲವಿ ಮತ್ತು ಅವರ ತಂಡದಿಂದ ಸುಮಧುರ ಸ್ವರ ಸಂಗೀತ ಗಾಯನ 'ಸುಕೋ ಸಂಜೆ' ಅತ್ಯಂತ ಯಶಸ್ವಿಯಾಗಿ, ಅದ್ದೂರಿಯಾಗಿ ನೆರವೇರಿತು.

### ಕೂಡ್ಲಿಗಿಯಲ್ಲಿ

ಸಾಂಸ್ಕೃತಿಕ ಪಟ್ಟಣ ಕೂಡ್ಲಿಗಿಯಲ್ಲಿ ಜುಲೈ 27, 2019 ರ ಶನಿವಾರ ಸಂಜೆ 5.30ಕ್ಕೆ ಮದಕರಿ ವೃತ್ತದ ಹತ್ತಿರ ಇರುವ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆಯ ಸಭಾಂಗಣದಲ್ಲಿ 'ಸುಕೋ ಸಂಜೆ' ಭರ್ಜರಿಯಾಗಿ ನೆರವೇರಿತು.

ಕ್ಷೇತ್ರ ಶಿಕ್ಷಣಾಧಿಕಾರಿ ಶ್ರಿಮತಿ ಉಮಾದೇವಿ ಅವರು ಕಾರ್ಯಕ್ರಮ ಉದ್ಘಾಟಿಸಿ, ಸಹಕಾರಿ ಕ್ಷೇತ್ರದ ಪ್ರತಿಷ್ಠಿತ ಸುಕೋ ಬ್ಯಾಂಕ್, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಸದೃಢವಾಗಿದೆ. ಬ್ಯಾಂಕ್ ಮತ್ತಷ್ಟು ಅಭಿವೃದ್ಧಿ ಹೊಂದಲಿ' ಎಂದು ಶುಭ ಹಾರೈಸಿದರು.

---



**ಬೆಂಗಳೂರು:** ದಿನಾಂಕ 25.08.2019 ರಂದು ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ 9ನೇ ವಾರ್ಷಿಕ ಸಾಮಾನ್ಯ ಸಭೆ ನಡೆಯಿತು. ಸಭೆಯಲ್ಲಿ ಸಹಕಾರಿಯ ಹಿರಿಯ ಸದಸ್ಯರನ್ನು ಗೌರವಿಸುವುದಲ್ಲದೆ, ಎಸ್.ಎಸ್. ಎಲ್.ಸಿ ಮತ್ತು ಪಿಯುಸಿಯಲ್ಲಿ ಶೇಕಡ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ಸದಸ್ಯರ ಮಕ್ಕಳನ್ನು ಪ್ರೋತ್ಸಾಹಿಸುವುದು ಶ್ಲಾಘನೀಯ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ ಪಾಟೀಲ್ ಹೇಳಿದರು. ಸರ್ವಸದಸ್ಯರ ವಾರ್ಷಿಕ ಸಭೆಯಲ್ಲಿ 364 ಸದಸ್ಯರು ಭಾಗವಹಿಸಿದರು.



**ಬಳ್ಳಾರಿ:** ದಿನಾಂಕ 18/08/2019 ರಂದು ನಡೆದ ಮೇಘ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟೆಡ್ ಇದರ 2018–19 ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು ಪ್ರಾರ್ಥನೆಯನ್ನು ಸಹಕಾರಿಯ ಸಿಬ್ಬಂದಿ ವರ್ಗದವರು ನಡೆಸಿಕೊಟ್ಟರು, ನಂತರ ಕಾರ್ಯಕ್ರಮದ ಉದ್ಘಾಟನೆಯನ್ನು ಉಪಾಧ್ಯಕ್ಷರಾದ ಶ್ರೀಯುತ ಕೆ.ಸತ್ಯನಾರಾಯಣ ರಾವ್ ರವರು ನಡೆಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೇಘ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಹನುಮಂತರೆಡ್ಡಿ ವಿ. ರವರು ವಹಿಸಿದ್ದರು.

# ವಿವಿಧ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳು

## ಉದಯ ಸೌಹಾರ್ದ ಪತ್ತಿನ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆ



**ಬೆಂಗಳೂರು :** ಉದಯ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ 2018–19ನೇ ಸಾಲಿನ 24ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ದಿನಾಂಕ 28–07–2019ರಲ್ಲಿ, ಸಹಕಾರಿಯ ಅಧ್ಯಕ್ಷರಾದ ಶ್ರೀ ಗುಂಡುರಾವ್. ಬಿ.ಎಸ್. ಇವರ ಅಧ್ಯಕ್ಷತೆಯಲ್ಲಿ, ಸಹಕಾರ ಸಮುದಾಯ ಭವನ, ಪ್ರಾದೇಶಿಕ ಸಹಕಾರ ನಿರ್ವಹಣಾ ತರಬೇತಿ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ನಡೆಯಿತು. ಸಹಕಾರಿಯು ಪ್ರಸಕ್ತ ಸಾಲಿನಲ್ಲಿ ನಿವ್ವಳ ಲಾಭ ರೂ: 1,06,02,665/ಗಳನ್ನು ಗಳಿಸಿದೆ. ಸಹಕಾರಿಯ ಒಟ್ಟು ದುಡಿಯುವ ಬಂಡವಾಳ ರೂ 114 ಕೋಟಿ 07 ಲಕ್ಷಗಳಾಗಿರುತ್ತದೆ. ಸದಸ್ಯರುಗಳಿಗೆ ಶೇ.12 ಡಿವಿಡೆಂಡ್ ಘೋಷಿಷಲಾಗಿದೆ.

## ಶ್ರೀ ರಾಮೇಶ್ವರ ಬಹುಉದ್ದೇಶಿ ಸೌಹಾರ್ದ ಸಹಕಾರಿಯ 17ನೇ ವಾರ್ಷಿಕ ಮಹಾಸಭೆ



**ತೀರ್ಥಹಳ್ಳಿ:** ದಿನಾಂಕ 03–08–2019ನೇ ಶನಿವಾರ ಶ್ರೀ ರಾಮೇಶ್ವರ ಬಹುಉದ್ದೇಶಿ ಸೌಹಾರ್ದ ಸಹಕಾರಿಯ 17ನೇ ಸರ್ವ ಸದಸ್ಯರ ಮಹಾಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಜೆ. ಮಂಜುನಾಥ ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಪ್ರಸನ್ನ ಕುಮಾರ್‌ರವರು ಮಾತನಾಡಿ ಸಹಕಾರಿಯ ವಾರ್ಷಿಕ ವರದಿಯನ್ನು ಗಮನಿಸಿದಾಗ ಸಹಕಾರಿಯು ಉತ್ತಮ ರೀತಿಯಲ್ಲಿ ಸೌಹಾರ್ದ ಕಾಯ್ದೆಗೆ ಅನುಗುಣವಾಗಿ ನಡೆಯುತ್ತಿದೆ. ಒಂದು ಸಹಕಾರಿಯ ಬೆಳವಣಿಗೆಗೆ ಸಹಕಾರಿಯ ಸದಸ್ಯರು, ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿವರ್ಗದವರು ಕಾರಣರಾಗಿರುತ್ತಾರೆ ಎಂದರು. ಸದರಿ ವರ್ಷದಲ್ಲಿ ಸಹಕಾರಿಯು ರೂ. 29,22,095–12 ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.15% ಡಿವಿಡೆಂಡ್ ನೀಡಲು ಸಭೆಯು ತೀರ್ಮಾನಿಸಿತು.

## ಶ್ರೀ ರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 6ನೇ ವಾರ್ಷಿಕ ಮಹಾಸಭೆ



**ಕೋಡಿ ಕನ್ಯಾಣ:** ಶ್ರೀ ರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೋಡಿ ಕನ್ಯಾಣ 2018–19 ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ 11.08.2019 ರ ಭಾನುವಾರ ಪೂರ್ವಾಹ್ನ 9.00 ಕ್ಕೆ ಸರಿಯಾಗಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕೋಡಿ ಕನ್ಯಾಣದಲ್ಲಿ ಜರುಗಿತು. ಈ ವಾರ್ಷಿಕ ಮಹಾಸಭೆಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಂಭುಶಂಕರ್ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ವ್ಯವಸ್ಥಾಪಕರಾದ ರಾಘವೇಂದ್ರ ಕರ್ಕೇರ ಪ್ರಸಕ್ತ ಸಾಲಿನ ವರದಿಯನ್ನು ವಾಚಿಸಿ ಸಂಸ್ಥೆಯು ರೂ.5,25,57,190.90 ಠೇವಣಿ ಸಂಗ್ರಹಿಸಿದ್ದು ರೂ 4,73,12,508.00 ಸಾಲ ವಿತರಿಸಿ ರೂ 7,13,796.01 ರಷ್ಟು ಲಾಭಗಳಿಸಿರುತ್ತದೆ ಎಂದು ತಿಳಿಸಿದರು.


# ಸರಸ್ವತಿ ಸೌಹಾರ್ದ ಸಹಕಾರಿಯ 18ನೇ ವಾರ್ಷಿಕ ಸಾಮಾನ್ಯ ಸಭೆ




**ಪುತ್ತೂರು:** ಪುತ್ತೂರಿನ ಪ್ರತಿಷ್ಠಿತ ಸಹಕಾರಿ ಸಂಸ್ಥೆಯಾದ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 18ನೇ ವಾರ್ಷಿಕ ಮಹಾಸಭೆಯು ದಿನಾಂಕ 25-08-2019ನೇ ಭಾನುವಾರದಂದು ಪುತ್ತೂರಿನ ತೆಂಕಿಲದಲ್ಲಿರುವ ಒಕ್ಕಲಿಗ ಗೌಡ ಸಮುದಾಯ ಭವನದಲ್ಲಿ ನಡೆಯಿತು.

ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿ ಮಾತನಾಡಿ ಜಾಗತೀಕ ಮಟ್ಟದಲ್ಲಿ ಬದಲಾವಣೆಗಳಾಗುತ್ತಿರುವ ಈ ದಿನಗಳಲ್ಲಿ ಭಾರತವನ್ನು ಜಗತ್ತು ನೋಡುತ್ತಿದೆ, ಹಿರಿಯರ ತಪಸ್ಸು ಬಲಿದಾನದ ಫಲವಾಗಿ ನಾವು ಉತ್ತಮ ರೀತಿಯಲ್ಲಿ ಜೀವನ ನಡೆಸಲು ಸಾಧ್ಯವಾಗಿದೆ. ಭೀಕರ ಮಳೆ ಬರಗಾಲದ ಈ ಪರಿಸ್ಥಿತಿಯಲ್ಲಿ ನಾವು ನಮ್ಮ ಕೈಲಾದ ಸಹಕಾರ ಕೊಡಬೇಕು. ಬ್ಯಾಂಕುಗಳ ಎನ್‌ಪಿಎ ನಮಗೆ ಪರಿಣಾಮ ಆಗುತ್ತದೆ. ಮೋಸ ವಂಚನೆ ಪ್ರಕರಣಗಳು ಹೆಚ್ಚುತ್ತಿದ್ದು ಇದರ ನಿಯಂತ್ರಣಕ್ಕೆ ಜ್ಞಾನ, ಕೌಶಲ್ಯ, ತಂತ್ರಜ್ಞಾನ ಹೆಚ್ಚಾಗಬೇಕು. ಸಿಬ್ಬಂದಿಗಳಿಗೆ ನಿರಂತರವಾದ ತರಬೇತಿಯನ್ನು ನೀಡಲಾಗುತ್ತಿದೆ. ಎಲ್‌ಐಸಿಯೊಂದಿಗೂ ಒಪ್ಪಂದ ಮಾಡಿಕೊಳ್ಳಲಾಗಿದೆ, ಹಾಗೂ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಹಲವಾರು ಸಾಮಾಜಿಕ ಸೇವಾಕಾರ್ಯಗಳನ್ನು ಹಮ್ಮಿಕೊಂಡು ಬರಲಾಗುತ್ತಿದೆ. ಡ್ರೋನ್ ಪ್ರತಾಪ್, ಹಿಮದಾಸ್‌ರವರ ಸಾಧನೆ, ಚಂದ್ರಯಾನ-2 ನಮ್ಮೆಲ್ಲರಿಗೂ ಹೆಮ್ಮೆ ಮತ್ತು ಸ್ಫೂರ್ತಿಯಾಗಬೇಕು.

ಸಹಕಾರಿಯು ಒಟ್ಟು 8.13 ಕೋಟಿ ಪಾಲು ಬಂಡವಾಳ ಹೊಂದಿದ್ದು, 178.28 ಕೋಟಿ ಠೇವಣಿ ಸಂಗ್ರಹಿಸಿ, 130.11 ಕೋಟಿ ಸಾಲ ವಿತರಿಸಿದೆ ಹಾಗೂ 30,371 ಸದಸ್ಯರನ್ನು ಹೊಂದಿದೆ ಎಂದು ತಿಳಿಸಿದರು. ಆರ್ಥಿಕ ವರ್ಷಾಂತ್ಯಕ್ಕೆ 3.51 ಕೋಟಿ ನಿವ್ವಳ ಲಾಭಗಳಿಸಿದ್ದು, ಸದಸ್ಯರಿಗೆ ಶೇ.13 ಡಿವಿಡೆಂಡ್ ನೀಡುವುದಾಗಿ ಮಹಾಸಭೆಯು ಈ ಸಂದರ್ಭದಲ್ಲಿ ನಿರ್ಧರಿಸಿತು. ಸಭೆಯಲ್ಲಿ ಉತ್ತಮ ಗ್ರಾಹಕರನ್ನು ಗೌರವಿಸಲಾಯಿತು.



**ರಾಯಚೂರು:** ಸಿರಿ ಸಂಜೀವಿನಿ ಸೌಹಾರ್ದ ಸಹಕಾರಿ ನಿ., ಸಿರವಾರ ಈ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ನೆರೆ ಪರಿಹಾರ ನಿಧಿಗೆ ರೂ. 21,000 ರೂಪಾಯಿಗಳನ್ನು ಮತ್ತು ಸಹಕಾರಿಯ ಸಿಬ್ಬಂದಿ ಅವರಿಂದ ನೆರೆ ಪರಿಹಾರ ನಿಧಿಗೆ ರೂ. 15,000 ರೂಪಾಯಿಗಳ ಚೆಕ್ ನೀಡಿದರು.



**ಕಲಬುರಗಿ:** ಆದಿ ಶಕ್ತಿ ಸೌಹಾರ್ದ ಸಹಕಾರಿ ನಿ., ಕಲಬುರ್ಗಿ ಇದರ 2ನೇ ಸಾಮಾನ್ಯ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ್ ಮಹಾಜನ್ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಇವರು ಭಾಗವಹಿಸಿದರು.



**ಕೊಪ್ಪ:** ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿ. ಕೊಪ್ಪ (ಯಸ್ಕಾನ್) ಸದರಿ ಸಹಕಾರಿಯ ಜನೌಷಧಿ ಕೇಂದ್ರದಿಂದ ಔಷಧಿ, ಮಾತ್ರೆಗಳನ್ನು ಕೊಪ್ಪ ಮತ್ತು ನ.ರಾ.ಪುರ ಸರ್ಕಾರಿ ಆಸ್ಪತ್ರೆಯ ಬಡರೋಗಿಗಳಿಗೆ ಹಾಗೂ ಬಸವಾನಿಯಲ್ಲಿರುವ ವೃದ್ಧಾಶ್ರಮಕ್ಕೆ ಮತ್ತು ನೆರೆ ಸಂತ್ರಸ್ತರಿಗೆ ಉಚಿತವಾಗಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು, ಸಿಬ್ಬಂದಿ ವರ್ಗದವರು ನೀಡಿದರು.

## ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಒಂಭತ್ತನೇ ವಾರ್ಷಿಕ ಸಾಮಾನ್ಯ ಸಭೆ



**ಸಾಲಿಗ್ರಾಮ:** ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಸಾಲಿಗ್ರಾಮ ಇದರ ಒಂಭತ್ತನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷ ಆನಂದ ಸಿ. ಕುಂದರ್‌ರವರ ಅಧ್ಯಕ್ಷತೆಯಲ್ಲಿ ಇತ್ತೀಚಿಗೆ ಜರಗಿತು. ಕಾರ್ಯಾರಂಭಿಸಿ ಕೇವಲ ಏಳುವರೆ ವರ್ಷಗಳ ಅವಧಿಯಲ್ಲಿ ಕ್ಷಿಪ್ರ ಬೆಳವಣಿಗೆ ಕಂಡ ಸಹಕಾರಿ ಕಳೆದ ಸಾಲಿನಲ್ಲಿ 20.00 ಲಕ್ಷಕ್ಕೂ ಅಧಿಕ ನಿವ್ವಳ ಲಾಭಗಳಿಸಿ, ರೂ. 65.00 ಲಕ್ಷಕ್ಕೂ ಮಿಕ್ಕಿ ಆಪದ್ಧನ ನಿಧಿಗಳನ್ನು ಕ್ರೋಢೀಕರಿಸಿದೆ. ದಿನಾಂಕ 20.07.2019ರಂದು ಜರಗಿದ 9ನೇ ವಾರ್ಷಿಕ ಸಾಮಾನ್ಯ ಸಭೆಯು ಕಳೆದ ಸಾಲಿನಲ್ಲಿ ಗಳಿಸಿದ ನಿವ್ವಳ ಲಾಭವನ್ನು ಕಾಯ್ದೆ ಮತ್ತು ಉಪವಿಧಿಯಂತೆ ವಿಂಗಡಿಸಿ ಸಾಮಾನ್ಯ ಸದಸ್ಯರು ಮತ್ತು ಸಹ ಸದಸ್ಯರಿಗೆ ಶೇ.25 ರ ಡಿವಿಡೆಂಡ್ ಘೋಷಿಸಿ ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ ವಿತರಿಸಲಾಯಿತು. ಕಳೆದ ನಾಲ್ಕು ವರ್ಷಗಳಿಂದ ಪ್ರಾಥಮಿಕ ಹಂತದಲ್ಲಿ ಶೇ.25ರ ಡಿವಿಡೆಂಡ್ ಹಂಚಿಕೆ ಮಾಡುತ್ತಿರುವುದು ಹೆಗ್ಗಳಿಕೆಯ ವಿಚಾರ. ಸಹಕಾರಿಯು ಆರಂಭದಿಂದಲೂ ಲಾಭದಲ್ಲಿದ್ದು, ಕ್ರಮಬದ್ದವಾದ ಲೆಕ್ಕಪತ್ರಗಳ ನಿರ್ವಹಣೆ, ವಸೂಲಾತಿ ಪ್ರಮಾಣ ಇವೆಲ್ಲವನ್ನು ಪರಿಗಣಿಸಿ "ಅ" ವರ್ಗದ ಆಡಿಟ್ ವರ್ಗೀಕರಣಗೊಂಡಿದೆ. ಸಭೆಯಲ್ಲಿ ಸಹಕಾರಿಯ ನಿರ್ದೇಶಕರುಗಳಾದ ಸರ್ವಶ್ರೀ ಸಂಜೀವ ಜಿ, ಡಾ.ಕೆ.ಕೃಷ್ಣ ಕಾಂಚನ್, ಮಂಜುನಾಥ ಎಸ್.ಕೆ., ಡಾ.ಸತೀಶ ಪೂಜಾರಿ, ವಸಂತ ಶೆಟ್ಟಿ, ಶಂಕರ ಬಂಗೇರ, ವೈ. ಕೃಷ್ಣಮೂರ್ತಿ ಐತಾಳ ಶ್ರೀಮತಿ ಶಾಂತಾ ಭಟ್ ಮತ್ತು ಶ್ರೀಮತಿ ನಾಗರತ್ನ ಬ್ಯಾರಿ, ಉಪಸ್ಥಿತರಿದ್ದರು.

## ನವಕರ್ನಾಟಕ ಕ್ರೆಡಿಟ್ ಸೌಹಾರ್ದ ಸಹಕಾರಿಯ 17ನೇ ವರ್ಷದ ವಾರ್ಷಿಕ ಮಹಾ ಸಭೆ




**ಹೊಸಪೇಟೆ:** ದಿನಾಂಕ 18.08.2019 ರಂದು ನವಕನಾಟಕ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಇದರ 17ನೇ ವಾರ್ಷಿಕ ಸಾಮಾನ್ಯ ಸಭೆಯು ನವಕರ್ನಾಟಕ ಬಿಲ್ಡಿಂಗ್, ಪಟೇಲ ನಗರ, ಹೊಸಪೇಟೆಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ವೀರಪ್ಪ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ನಂತರ ಮಾತನಾಡಿ 2018–19ನೇ ಸಾಲಿನ ಆಡಳಿತ ವರದಿಯನ್ನು ಓದಿ, ಸದರಿ ಸಹಕಾರಿಯು 2018–19ನೇ ಸಾಲಿನಲ್ಲಿ ರೂ.37,43,402,.37 ಲಾಭ ಗಳಿಸಿದು ಸದಸ್ಯರಿಗೆ 10% ಲಾಭಾಂಶ ಪೋಷಿಸಲಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದು ಉತ್ತೀರ್ಣರಾದ ಸದಸ್ಯರ ಮಕ್ಕಳಿಗೆ ನಗದು ರೂಪದಲ್ಲಿ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು. ಉತ್ತರ ಕರ್ನಾಟಕದ ನೆರೆ ಸಂತ್ರಸ್ತರಿಗೆ ಸಹಕಾರಿಯ ವತಿಯಿಂದ 50,001/– ಹಾಗೂ ನಿರ್ದೇಶಕ ಮಂಡಳಿ, ಸಿಬ್ಬಂದಿ ಹಾಗೂ ಪಿಗ್ಮಿ ಸಂಗ್ರಹಕರರು ಇವರಿಂದ ವೈಯಕ್ತಿಕವಾಗಿ ರೂ. 50,000/– ಹಣವನ್ನು ಮುಖ್ಯಮಂತ್ರಿ ನೆರೆ ಪರಿಹಾರ ನಿಧಿಗೆ ಕೊಡಲು ನಿರ್ಧರಿಸಲಾಯಿತು. ಡಾ॥ ಈರಣ್ಣ ಪಿ. ಶೆಟ್ಟರ, ನಿರ್ದೇಶಕರು, ಇವರು ಕೊನೆಯಲ್ಲಿ ವಂದಿಸಿದರು.




## 2ನೇ ವರ್ಷದ ವಾರ್ಷಿಕ ಮಹಾ ಸಭೆ

**ವಿಜಯಪುರ:** ದಿನಾಂಕ 18.08.2019 ರಂದು ಶ್ರೀ ವರಮಹಾಲಕ್ಷ್ಮೀ ಮಹಿಳಾ ಸೌಹಾರ್ದ ಸಹಕಾರಿ ನಿ., ಇದರ 2ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಮಹಾದೇವಿ ಬಿದರಕುಂಬಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಡಾ॥ ಶೈಲಜಾಪಾಟೀಲ, ವೃಂದಾ ವೀರಕರ. ಡಾ॥ ಗೀತಾ ಶೆಟ್ಟಿ ಉಪಸ್ಥಿತರಿದ್ದರು.

## ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ 68ನೇ ವಾರ್ಷಿಕ ಸಾಮಾನ್ಯ ಸಭೆ



**ಚಿತ್ರದುರ್ಗ :** ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ ಇದರ 68 ವಾರ್ಷಿಕ ಸರ್ವಸದಸ್ಯರ ಸಭೆಯು ದಿನಾಂಕ 28–07–2019ನೇ ಭಾನುವಾರದಂದು ಜರುಗಿತು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಸ್. ಆರ್ ಲಕ್ಷ್ಮೀಕಾಂತರೆಡ್ಡಿ ಇವರು ಅಧ್ಯಕ್ಷತೆಯನ್ನು ವಹಿಸಿ ಬ್ಯಾಂಕಿನ ಕಾರ್ಯವೈಖರಿ ಮತ್ತು ಬೆಳವಣಿಗೆಗಳ ಬಗ್ಗೆ ವಿವರ ನೀಡಿದರು. 28 ಕೋಟಿ ರೂ.ಗಳ ಸ್ವಂತ ಬಂಡವಾಳ, 104 ಕೋಟಿ ರೂ.ಗಳ ಡಿಪಾಜಿಟ್, 70 ಕೋಟಿ ರೂ.ಗಳ ಸಾಲ ಮತ್ತು ಮುಂಗಡಗಳನ್ನು ಹೊಂದಿದ್ದು, 175 ಕೋಟಿ ರೂ.ಗಳ ವ್ಯವಹಾರವನ್ನು ಹೊಂದಿರುತ್ತದೆ. 2018–19ನೇ ಆರ್ಥಿಕ ವರ್ಷಾಂತ್ಯಕ್ಕೆ 2.38 ಕೋಟಿ ರೂ.ಗಳ ತೆರಿಗೆ ಮುಂಚಿನ ವರಮಾನ ಗಳಿಸಿದ್ದು, ವರಮಾನ ತೆರಿಗೆ ಜಾಥಾ 1.57 ಕೋಟಿ ರೂ.ಗಳ ನಿವ್ವಳ ವರಮಾನ ಗಳಿಸಿರುತ್ತದೆ.

ಸದಸ್ಯರಿಗೆ ಶೇ.25 ರಷ್ಟು ಡಿವಿಡೆಂಡ್ ಘೋಷಣೆ ಮಾಡಲಾಗಿರುತ್ತದೆ. ಸರ್ವಸದಸ್ಯರ ಸಭೆಯಲ್ಲಿ ಬ್ಯಾಂಕಿನಿಂದ ನೂತನ ತಂತ್ರಜ್ಞಾನ ಫಲವಾಗಿ ಮೊಬೈಲ್ ಆಪ್ ಮತ್ತು ಇಂಟರ್‌ನೆಟ್ ಬ್ಯಾಂಕಿಂಗ್ (ನಾನ್ ಫೈನಾನ್ಷಿಯಲ್) ಸೌಲಭ್ಯವನ್ನು ಉದ್ಘಾಟಿಸಲಾಯಿತು. .

ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಎನ್. ಜಯ್ಯಣ್ಣ, ನಿರ್ದೇಶಕರಾದ ಪಿ.ಎಸ್.ಸುರೇಶ ರಾಜು, ಡಾ॥ ಕೆ.ಎಸ್.ಮುಕುಂದ ರಾವ್, ಎಸ್.ವಿ.ನಾಗರಾಜಪ್ಪ, ರಘುರಾಮ ರೆಡ್ಡಿ, ಜಿ.ರಾಜಾನಾಯ್ಕ್, ಕೆ.ನಾಗರಾಜ್, ಡಾ॥ ರಾಮಚಂದ್ರ ನಾಯಕ್, ಕೆ.ಎನ್.ಸಕ್ರಪ್ಪ, ಶ್ರೀಮತಿ ಎಸ್.ಎಂ.ಉಷಾ, ಶ್ರೀಮತಿ ಚಂದ್ರಿಕಾ ಲೋಕನಾಥ್, ಎ.ಸುಮಂತ್ ಮತ್ತು ಎಚ್.ಪಿ.ರಮೇಶ್ ಉಪಸ್ಥಿತರಿದ್ದರು.

## ಆರಾಧ್ಯ ಸೌಹಾರ್ದ ಸಹಕಾರಿಯ ಎರಡನೇ ವಾರ್ಷಿಕ ಸರ್ವಸದಸ್ಯರ ಸಭೆ



**ಮೈಸೂರು:** ಆರಾಧ್ಯ ಸೌಹಾರ್ದ ಸಹಕಾರಿ ನಿಯಮತ ಇದರ ಎರಡನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ದಿನಾಂಕ 15–08–2019 ರ ಗುರುವಾರದಂದು ಆರಾಧ್ಯ ಮಹಾಸಭಾದ ಆವರಣದಲ್ಲಿ ಮೈಸೂರು ಪ್ರಾಂತೀಯ ಕಾನೂನು ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರರವರು, ಮೈಸೂರು ಮತ್ತು ಕೊಡಗು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ್.ಆರ್.ಎಸ್. ರವರು, ವಾಗ್ದೇವಿ ಸೌಹಾರ್ದ ಪತ್ತಿನ ಸಹಾಕಾರಿ ನಿಯಮಿತದ ಅಧ್ಯಕ್ಷರಾದ ಶ್ರೀ ನವೀನ್ ರವರು ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಶ್ರೀಹರಿ ಇವರಿಂದ ದೀಪ ಬೆಳಗುವ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

## ವಾರ್ಷಿಕ ಸಾಮಾನ್ಯ ಸಭೆ




**ಶಿವಮೊಗ್ಗ:** ದಿನಾಂಕ 28.08.2019 ರಂದು ನಡೆದ ಸಾಗರ ಸೌಹಾರ್ದ ಪತ್ತಿನ ಸಹಕಾರಿ ನಿ,. ಶಿವಮೊಗ್ಗ ಇದರ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ.

## ವಿವಿಧ ಸೌಹಾರ್ದ ಸಹಕಾರಿಗಳ ವಾರ್ಷಿಕ ಮಹಾ ಸಭೆ

ಶ್ರೀ ಭುವನೇಶ್ವರಿ ಸೌಹಾರ್ದ ಸಹಕಾರಿಯ ಮೊದಲ ವಾರ್ಷಿಕ ಸಾಮಾನ್ಯ ಸಭೆ ಹಾಗೂ ಸಾಯಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ,.ಕೋಲಾರ, ಶ್ರೀ ಮುಪ್ಪಿನ ಷಡಕ್ಷರದೇವ ಸೌಹಾರ್ದ ಸಹಕಾರಿ ನಿ., ಯಳಂದೂರು ಇದರ 3ನೇ ವಾರ್ಷಿಕ ಸಾಮಾನ್ಯ ಸಭೆ ಹಾಗೂ ಮಾವುಲಿ ಕಾಮಗಾರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಮುಚಂಡಿ ಇದರ 3ನೇ ವಾರ್ಷಿಕ ಸಾಮಾನ್ಯ ಸಭೆ ನಡೆಯಿತು.

# ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ 8ನೇ ವಾರ್ಷಿಕ ಸಾಮಾನ್ಯ ಸಭೆ




**ಬೀದರ:** ದಿನಾಂಕ 18–08–2019ರಂದು ಬೀದರ ನಗರದ ಸಹದಾರ್ ತರಬೇತಿ ಸಂಸ್ಥೆಯಲ್ಲಿ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಇದರ 8ನೇ ಸಾಮಾನ್ಯ ಸಭೆ ಹಾಗೂ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಿಗೆ ಹಾಗೂ ಮುಖ್ಯ ಕಾರ್ಯನಿರ್ವಹಕರಿಗೆ ಸೌಹಾರ್ದ ಸಹಕಾರಿಗಳು ನಿರ್ವಹಿಸಬೇಕಾದ ಶಾಸನಾತ್ಮಕ ಕರ್ತವ್ಯ ಹಾಗೂ ಜವಾಬ್ದಾರಿಯ ಕುರಿತ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ತರಬೇತಿ ಕಾರ್ಯಗಾರವನ್ನು ಒಕ್ಕೂಟ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್ ಉದ್ಘಾಟಿಸಿ ಮಾತನಾಡಿ ಸದಸ್ಯ ಸಹಕಾರಿಗಳು ಗುಣಮಟ್ಟದಲ್ಲಿ ಬೆಳೆದು ಆರ್ಥಿಕವಾಗಿ ಸದೃಡವಾಗಬೇಕು ಅಲ್ಲದೆ ಸದಸ್ಯರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು ಜಿಲ್ಲೆಯಲ್ಲಿ ಸೌಹಾರ್ದ ಚಳುವಳಿ ಹೆಚ್ಚಿಸಲು ಒಕ್ಕೂಟ ಸಹಕಾರಿಗೆ ಬೆಂಬಲ ನೀಡಿ ಜಿಲ್ಲೆಯಲ್ಲಿ ಸೌಹಾರ್ದ ಕಾಯ್ದೆಯಲ್ಲಿ ನೋಂದಣಿಯಾದ ಎಲ್ಲಾ ಸಹಕಾರಿಗಳು ಒಕ್ಕೂಟ ಸದಸ್ಯತ್ವ ಪಡೆದುಕೊಳ್ಳಲು ವಿನಂತಿಸಿದರು. ಸಹಕಾರಿ ನೋಂದಣಿಯ ನಂತರ ಅವುಗಳ ಕಾರ್ಯಚಟುವಟಿಕೆ ದಾಖಲಾತಿಗಳು ಪಾರದರ್ಶಕವಾಗಿರಲು ಈ ತರಬೇತಿ ಅತ್ಯಂತ ಮಹತ್ವದಾಗಿದೆ ಇದರ ಪ್ರಯೋಜನ ಪಡೆದುಕೊಳ್ಳಲು ತಿಳಿಸಿದರು.

7ನೇ ಸಾಮಾನ್ಯ ಸಭೆಯ ಸಭಾ ನಡವಳಿ ಮತ್ತು ನಿರ್ಣಯಗಳನ್ನು ನಿರ್ದೇಶಕರಾದ ಜಗನ್ನಾಥ ಕರಂಜೆ ಸಭೆಯಲ್ಲಿ ಓದಿ ತಿಳಿಸಿದರು. ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್ ಇವರು ಲೆಕ್ಕಪರಿಶೋಧನ ವರದಿ ಹಾಗೂ ವಾರ್ಷಿಕ ವರದಿಯನ್ನು ಸಭೆಯಲ್ಲಿ ಮಂಡಿಸಿದರು. ಮೂರು ವರ್ಷದ ಕ್ರಿಯಾ ಯೋಜನೆಯನ್ನು ನಿರ್ದೇಶಕರಾದ ಶ್ರೀ ಶಿವಾನಂದ ಮಂಠಾಳಕರ ಅವರು ಮಂಡಿಸಿದರು. ಕಳೆದ ವರ್ಷದಲ್ಲಿ ಒಕ್ಕೂಟ ಸಹಕಾರಿಗೆ ಸದಸ್ಯತ್ವ ಪಡೆದ ಸಹಕಾರಿಗಳ ಪಟ್ಟಿಯನ್ನು ನಿರ್ದೇಶಕರಾದ ಶ್ರೀ ಶಿವಬಸಪ್ಪ ಚನ್ನಮಲ್ಲೆ ಮಂಡಿಸಿದರು. ಅಂದಾಜು ಆಯ–ವ್ಯಯವನ್ನು ನಿರ್ದೇಶಕರಾದ ಸಂಜಯ ಕ್ಯಾಸಾ ಮಂಡಿಸಿ ಸರ್ವಾನುಮತದ ಅಂಗೀಕಾರ ಪಡೆಯಲಾಯಿತು.

ಕಾರ್ಯಕ್ರಮದಲ್ಲಿ ನಿರ್ದೇಶಕರಾದ ಸಂಜೀವಕುಮಾರ ಪಾಟೀಲ್, ಶ್ರೀ ಶಿವಾನಂದ ಮಂಠಾಳಕರ್, ಶಿವಬಸಪ್ಪ ಚನ್ನಮಲ್ಲೆ, ಸಂಜಯ ಕ್ಯಾಸಾ, ಜಗನ್ನಾಥ ಕರಂಜೆ, ನಂದಾವಿವೇಕಾನಂದ, ಶ್ರೀಕಾಂತ ಸ್ವಾಮಿ ಬಸವರಾಜ ಬುಧೆರಾ, ಡಾ॥ ಅಶೋಕ ನಾಗೂರೆ, ಶ್ರೀಮತಿ ಸವಿತಾ ಜಿ.ಕೆ. ಬಾಬುರಾವ ಕಾರಬಾರಿ, ಸುಭಾಷ ಶೇಡೋಳೆ, ರವಿ, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಅಮೃತ ಹೋಸಮನಿ ಜಿಲ್ಲೆಯ ಹಿರಿಯ ಸಹಕಾರಿಗಳು ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿಗಳು ನಿರ್ವಹಿಸಬೇಕಾದ ಶಾಸನಾತ್ಮಕ ಕರ್ತವ್ಯ ಹಾಗೂ ಜವಾಬ್ದಾರಿಗಳ ಕುರಿತು ಉಪನ್ಯಾಸ

**ಬೀದರ:** ಸೌಹಾರ್ದ ಸಹಕಾರಿಗಳು ಕಾರ್ಯಚಟುವಟಿಕೆಗಳು ಅದರಲ್ಲಿಯು ಪ್ರಮುಖವಾಗಿ ಆದಾಯ ತೆರಿಗೆ ರಿಟರ್ನ, ಟ್ಯಾಕ್ಸ್ ಆಡಿಟ್, ಜಿಎಸ್.ಟಿ, ಕೆವೈಸಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವ ಕುರಿತು ಮಾಹಿತಿ ನೀಡಿದರು. ನಿರ್ದೇಶಕರ ಕರ್ತವ್ಯ ಜವಾಬ್ದಾರಿ, ಸದಸ್ಯರ ಕನಿಷ್ಠ ವ್ಯವಹಾರ ಮಾಡುವ ಕುರಿತು ಹಾಗೂ ನಿರ್ದೇಶಕರು ಅವರ ಸಂಬಂಧಿಗಳು ಪಡೆಯುವ ಸಾಲ ಸೌಲಭ್ಯಗಳ ಲೆಕ್ಕಪರಿಶೋಧನೆ, ಸಾಮಾನ್ಯ ಸಭೆ ಕಡ್ಡಾಯವಾಗಿ ನಡೆಸುವ ಕುರಿತು ಸಕಾಲದಲ್ಲಿ ಆಡಳಿತ ಮಂಡಳಿಯ ಚುನಾವಣೆ ನಡೆಸುವಂತೆ ಮಾಹಿತಿಯನ್ನು ಸಲ್ಲಿಸುವಂತೆ ತಿಳಿಸಿದರು.

ಸೌಹಾರ್ದ ಸಹಕಾರಿಗಳು ಹೆಚ್ಚಿನ ಬಡ್ಡಿ ಆಮಿಶ ಬಡ್ಡಿ ಠೇವಣಿಗಳನ್ನು ಸಂಗ್ರಹಿಸುವುದು, ಠೇವಣಿ ಸಂಗ್ರಹಕ್ಕೆ ಕಮಿಷನ್ ಏಜೆಂಟ್ ನೇಮಕ ಮಾಡಿಕೊಳ್ಳಬಾರದು ಎಂದು ತಿಳಿಸಿದರು. ಸಾಲದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದು ವಿನಾಕಾರಣ ಸಹಕಾರಿಯ ಬಡ್ಡಿಯನ್ನು ಭರತಕ್ಕದು ಎಂದು ತೋರಿಸಿ ಲಾಭದಲ್ಲಿದೆ ಎಂದು ಹೇಳುವುದು ಮಾಡಬಾರದು ಎಂದು ತಿಳಿಸಿದರು. ಠೇವಣಿದಾರ ಯಾವಕಾಲದಲ್ಲಿಯು ಠೇವಣಿ ಮರಳಿ ಕೇಳಿದರು ಕೊಡಬೇಕಾಗುತ್ತದೆ ಜಿಲ್ಲೆಯ ಸೌಹಾರ್ದ ಸಹಕಾರಿಗಳು ತಮ್ಮ ಶಾಸನಾತ್ಮಕ ಮಾಹಿತಿಗಳನ್ನು ನಿಗದಿ ಪಡೆಸಿದ ದಿನಾಂಕದ ಒಳಗಾಗಿ ವಿವಿಧ ಇಲಾಖೆಗಳಿಗೆ ಪ್ರಾಧಿಕಾರಗಳಗೆ ಸಂಯುಕ್ತ ಸಹಕಾರಿ ಸಲ್ಲಿಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು.

ಬೀದರ ಜಿಲ್ಲಾ ಸೌಹಾರ್ದ ಸಂಯೋಜಕರಾದ ಶ್ರೀ ವೀರಶಟ್ಟಿ ಇವರು ಸಭೆಯನ್ನು ಉದ್ದೇಶಿಸಿ ಸಹಕಾರಿಗಳು ವರ್ಷದಲ್ಲಿ 6 ಕನಿಷ್ಠ ಆಡಳಿತ ಮಂಡಳಿಯ ಸಭೆಯನ್ನು ಹಾಗೂ ವರ್ಷದಲ್ಲಿ ಒಂದು ವಾರ್ಷಿಕ ಸಾಮಾನ್ಯ ಸಭೆಯನ್ನು ಕಡ್ಡಾಯವಾಗಿ ಜರುಗಿಸಬೇಕಾಗಿರುತ್ತದೆ. ಮುಖ್ಯಕಾರ್ಯನಿರ್ವಾಹಕರು ಸಹಕಾರಿಯ ಲೆಕ್ಕಪರಿಶೋಧನೆಯ ವರದಿಯನ್ನು ಸೆಪ್ಟೆಂಬರ್ 30ರ ಒಳಗೆ ಪೂರ್ಣಗೊಳಿಸಿ 25ರ ಒಳಗಾಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯುವುದು ಕಡ್ಡಾಯವಾಗಿದೆ. ಇದರ ವರದಿಯನ್ನು ಕಾಯ್ದೆ ಕಲಂ 34ರ ಮಾಹಿತಿಯನ್ನು ಸಂಬಂಧಪಟ್ಟ ನಿಬಂಧಕರಿಗೆ ಸಂಯುಕ್ತ ಸಹಕಾರಿಗೆ ಸಲ್ಲಿಸುವುದು ಕಡ್ಡಾಯವಾಗಿದೆ. ಲೆಕ್ಕಪರಿಶೋಧನ ವರದಿ ಹಾಗೂ ಲೆಕ್ಕಪರಿಶೋಧಕರ ನೇಮಕಾತಿಯ ಮಾಹಿತಿಯನ್ನು ಉಪನಿರ್ದೇಶಕರು ಸಹಕಾರ ಸಂಘಗಳ ಲೆಕ್ಕಪರಿಶೋಧನ ಇಲಾಖೆಗೆ ಸಲ್ಲಿಸಬೇಕಾಗಿರುತ್ತದೆ. ತಪ್ಪಿದಲ್ಲಿ ಇಲಾಖೆಯು ಆಡಿಟರ್ ನೇಮಕ ಮಾಡಲು ಅವಕಾಶ ಇರುತ್ತದೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ ಬಾಕಿ ಇರುವ ಸೌಹಾರ್ದ ಸಹಕಾರಿಗಳ ಚುನಾವಣೆ ಮಾಹಿತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಲು ತಿಳಿಸಿ ಅಧಿಕಾರ ಅವಧಿ ಪೂರ್ಣಗೊಳ್ಳುವ 6 ತಿಂಗಳ ಪೂರ್ವದಲ್ಲಿ 13ಡಿ ಮಾಹಿತಿಯನ್ನು ಸಲ್ಲಿಸಲು ತಿಳಿಸಲಾಯಿತು. ಶಾಸನಾತ್ಮಕ ಕರ್ತವ್ಯಗಳನ್ನು ಮಾಡಲು ತಪ್ಪಿದಲ್ಲಿ ಅಪರಾಧ ಮತ್ತು ದಂಡಗಳ ಕುರಿತು ಮಾಹಿತಿ ನೀಡಲಾಯಿತು. ಕಾರ್ಯಕ್ರಮದಲ್ಲಿ 75 ಸಹಕಾರಿಗಳು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

# ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕಿನ 21ನೇ ಸರ್ವಸದಸ್ಯರ ಮಹಾಸಭೆ.




**ಬೆಂಗಳೂರು:** ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತದ 2018–19ನೇ ಸಾಲಿನ 21ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯು ದಿನಾಂಕ 25/08/2019ರಂದು ಬೆಂಗಳೂರಿನ ನಿಮ್ಹಾನ್ಸ್ ಕನ್ವೆನ್ಷನ್ ಹಾಲ್‌ನಲ್ಲಿ ಯಶಸ್ವಿಯಾಗಿ ನಡೆಯಿತು. ಸಭೆಯಲ್ಲಿ ಉತ್ತಮ ವ್ಯವಹಾರ ನಡೆಸಿದ ಗ್ರಾಹಕರು ಮತ್ತು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸದಸ್ಯರನ್ನು ಸನ್ಮಾನಿಸಲಾಯಿತು. ಅಲ್ಲದೆ, ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು.

ಅಧ್ಯಕ್ಷರಾದ ಸದಾಶಿವರೆಡ್ಡಿಯವರು ಮಾತನಾಡಿ, ಬ್ಯಾಂಕಿನ ಶಾಖೆಗಳು ಪ್ರಸ್ತುತ ವಿ.ವಿ.ಪುರಂ, ಬೊಮ್ಮನಹಳ್ಳಿ, ಮಾರತ್ತಹಳ್ಳಿ, ರಘುವನಹಳ್ಳಿ ಮತ್ತು ಅರೆಕೆರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಒಟ್ಟಾರೆ 9063 ಸದಸ್ಯರೊಂದಿಗೆ ರೂ.15.79 ಕೋಟಿಗಳ ಷೇರು ಬಂಡವಾಳ ಮತ್ತು 18.41 ಕೋಟಿಗಳ ಕಾಯ್ದಿರಿಸಿದ ನಿಧಿಗಳ ಸಂಗ್ರಹಣೆಯಾಗಿದೆ. ಠೇವಣಿಗಳು ಮತ್ತು ಸಾಲ–ಮುಂಗಡಗಳ ಪ್ರಮಾಣವು ಕ್ರಮವಾಗಿ 277.81 ಮತ್ತು 186.34 ಕೋಟಿಗಳಾಗಿದ್ದು, ಶೂನ್ಯ ಪ್ರಮಾಣದಲ್ಲಿ ನಿವ್ವಳ ನಿಷ್ಕ್ರಿಯ ಆಸ್ತಿಗಳನ್ನು ನಿರ್ವಹಿಸಲಾಗಿದೆ. ಬ್ಯಾಂಕಿನ ಒಟ್ಟಾರೆ ವ್ಯವಹಾರವು 464 ಕೋಟಿಗೆ ಮೀರಿ ಪ್ರಸಕ್ತ ಸಾಲಿನಲ್ಲಿ 3.66 ಕೋಟಿಗಳ ನಿವ್ವಳ ಲಾಭ ಗಳಿಸಿ, ಶೇ.11 ರಷ್ಟು ಷೇರು ಲಾಭಾಂಶ ಘೋಷಿಸಲಾಗಿದೆ.

# ಕೆ.ವಿ.ಜಿ ವಿವಿದೋದ್ದೇಶ ಸೌಹಾರ್ದ ಸಹಕಾರಿ 10ನೇ ಸರ್ವಸದಸ್ಯರ ಮಹಾಸಭೆ.



**ದಕ್ಷಿಣ ಕನ್ನಡ :** ಕೆ.ವಿ.ಜಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ಕುರುಂಜಿಬಾಗ್ ಸುಳ್ಯ ಇದರ ವಾರ್ಷಿಕ ಮಹಾ ಸಭೆಯು ದಿನಾಂಕ 27.07.2019ನೇ ಶನಿವಾರ ಪೂರ್ವಾಹ್ನ 10.30ಕ್ಕೆ ಕೆ.ವಿ.ಜಿ ಐ.ಪಿ.ಎಸ್ ಸಭಾಂಗಣದಲ್ಲಿ ನೆರವೇರಿತ್ತು. 2 ಈ ಮಹಾಸಭೆಯ ಸಭಾಧ್ಯಕ್ಷತೆಯನ್ನು ಸಂಸ್ಥೆಯ ವ್ಯವಸ್ಥಾಪಕರು ಹಾಗು ಅಕಾಡಮಿ ಆಪ್ ಲಿಬರಲ್ ಎಜುಕೇಶನ್ ಇದರ ಪ್ರಧಾನ ಕಾರ್ಯದರ್ಶಿಗಳಾದ ಡಾ. ರೇಣುಕಾ ಪ್ರಸಾದ್ ಕೆ ವಿ ಯವರು ವಹಿಸಿದ್ದರು.

# ರಾಣೀಚನ್ನಮ್ಮ ಪತ್ತಿನ ಸೌಹಾರ್ದ ಸಹಕಾರಿಯ 10 ನೇ ವಾರ್ಷಿಕ ಸಾಮಾನ್ಯ ಸಭೆ




**ಸಿಂಧನೂರು:** ದಿನಾಂಕ 18–08–2019 ರಂದು ರವಿವಾರ ಮುಂಜಾನೆ 10–00 ಕ್ಕೆ ರಾಣಿಚಹನ್ನಮ್ಮ ಪತ್ತಿನ ಸೌಹಾರ್ದ ಸಹಕಾರಿಯ 10ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಹಾಗೂ ದಶಮಾನೋತ್ಸವದ ಸಂಭ್ರಮಾಚರಣೆಯನ್ನು ಸಿಂಧನೂರು ನಗರದ ವಿನಯ್ ರೆಸಿಡೆನ್ಸಿಯ ಸಭಾ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ 10ನೇ ವಾರ್ಷಿಕ ಮಹಾಸಭೆ ಹಾಗೂ ಸಹಕಾರಿ ದಶಮಾನೋತ್ಸವದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಡಿ. ರಾಮದಾಸ ಇವರ ಅಧ್ಯಕ್ಷತೆಯಲ್ಲಿ, ಈ ಸಮಾರಂಭದ ಉದ್ಘಾಟಕರಾಗಿ ಮಾನವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಆರ್.ತಿಮ್ಮಯ್ಯ ಶೆಟ್ಟಿ ಹಾಗೂ ಮುಖ್ಯ ಅಥಿತಿಗಳಾಗಿ ವಿಕಾಸ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ ಹಿರೇಮಠ ಮತ್ತು ಸಿಂಧೂ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಹಾಗೂ ವೃತ್ತಿಪರ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಶ್ರೀ ರಾಜಶೇಖರ್.ಬಿ ಅವರು ಭಾಗವಹಿಸಿದ್ದರು.



**ಕೊಪ್ಪಳ :** ಶ್ರೀ ಬಸವೇಶ್ವರ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿಯಮಿತ ಕೊಪ್ಪಳ, ಇದರ 11 ನೇ ವಾರ್ಷಿಕ ಮಹಾಸಭೆಯು ದಿನಾಂಕ 28/7/2019 ರಂದು ಶ್ರೀ ಬಸವೇಶ್ವರ ವೃತ್ತ (ಗಂಜ್ ಸರ್ಕಲ್) ಹತ್ತಿರ ತಾಲೂಕಾ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘ ನಿ ಕೊಪ್ಪಳ ಇದರ 3ನೇ ಅಂತಸ್ತಿನ ಸಭಾಂಗಣದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀಯುತ ಅನಿಲಕುಮಾರ ವಿ ನಾಲ್ವಾಡ ರವರ ಅಧ್ಯಕ್ಷತೆಯಲ್ಲಿ ಜರುಗಿತು. ವರದಿ ವರ್ಷಾಂತ್ಯಕ್ಕೆ ಸಹಕಾರಿಯು ಒಟ್ಟು ರೂ.77.74 ಲಕ್ಷದಷ್ಟು ಶೇರು ಬಂಡವಾಳ ಹೊಂದಿದ್ದು, ರೂ.826.22 ಲಕ್ಷದಷ್ಟು ಠೇವಣಿ ಸಂಗ್ರಹಿಸಿದ್ದು, ರೂ.820.60 ಲಕ್ಷದಷ್ಟು ಸಾಲ ವಿತರಿಸಿದೆ. ರೂ.39.42 ಲಕ್ಷದಷ್ಟು ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.20 ದರದಲ್ಲಿ ಡಿವಿಡೆಂಡ್ ನೀಡಲು ಸಭೆಯು ನಿರ್ಧರಿಸಿತು.



**ಶಿವಮೊಗ್ಗ:** ಬಲಿಜ ಸೌಹಾರ್ದ ಪತ್ತಿನ ಸಹಕಾರಿ ನಿ., ಸಹಕಾರಿಯ 2018-19ನೇ ಸಾಲಿನ ಏಳನೇ ವರ್ಷದ ಸರ್ವಸದಸ್ಯರ ಸಭೆಯು ದಿನಾಂಕ 28-07-2019ರಂದು ಅಂಬೇಡ್ಕರ್ ಭವನದಲ್ಲಿ ನಡೆಯಿತು.



**ಬೆಂಗಳೂರು:** ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಹಂಕ, ಬೆಂಗಳೂರು ಇದರ 10ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 28.07.2019ರಂದು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಸಭಾಂಗಣ, ಬೆಂಗಳೂರು ಇಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ. ಮುನಿರೆಡ್ಡಿಯವರು ವಹಿಸಿದರು.




**ಸಾಗರ:** ಮಯೂರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಇದರ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಮೋಹನ ಎಂ. ವಿ. ಇವರು ಅಧ್ಯಕ್ಷತೆಯಲ್ಲಿ ನಡೆಯಿತು.




**ರಾಯಚೂರು:** ವಿಶ್ವ ಚೇತನ ಸೌಹಾರ್ದ ಸಹಕಾರಿ ನಿ., ರಾಯಚೂರು ಇದರ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 30.07.2019ರಂದು ಹಿರಿಯೂರಿನ ರೋಟರಿ ಸಭಾಭವನದಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಲಕ್ಷ್ಮೀಶ ಇವರು ವಹಿಸಿದರು.



**ಹೊಸದುರ್ಗ:** ದಿನಾಂಕ 25.07.2019ರಂದು ಸೀತಾರಾಘವ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಹೊಸದುರ್ಗ ಇದರ ವಾರ್ಷಿಕ ಸಾಮಾನ್ಯ ಸಭೆಯು ಶ್ರೀ ಗಣೇಶ ಸದನ, ಬಸ್ ನಿಲ್ದಾಣ, ಹೊಸದುರ್ಗ ಇಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಹಂಜಿ ಶಿವಸ್ವಾಮಿ ಇವರು ವಹಿಸಿದರು.



**ಚಾಮರಾಜನಗರ:** ಜನಪರ ಸೌಹಾರ್ದ ಸಹಕಾರಿ ನಿ., ಚಾ.ನಗರ ಇದರ 4ನೇ ವರ್ಷದ ವಾರ್ಷಿಕ ಸಭೆ



**ದಾವಣಗೆರೆ:** ದಿನಾಂಕ 25.08.2019ರಂದು ನಡೆದ ಜಂಗಮ ಸೌಹಾರ್ದ ಸಹಕಾರಿಯ 9ನೇ ವರ್ಷದ ವಾರ್ಷಿಕ ಸಾಮಾನ್ಯ ಸಭೆ.



**ಶಿವಮೊಗ್ಗ:** ಶಿಕಾರಿಪುರ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ., ಇದರ ಪ್ರಥಮ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಪ್ರಸನ್ನ ಕುಮಾರ ಇವರು ಉಪಸ್ಥಿತರಿದ್ದರು.




**ದಾವಣಗೆರೆ:** ಮನಿಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆ.



**ದಕ್ಷಿಣ ಕನ್ನಡ:** ಒಡಿಯೂರು ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ.



**ಶಿವಮೊಗ್ಗ:** ಶ್ರೀ ಭ್ರಾಂತೇಶ ವಿವಿದೋದ್ದೇಶ ಸೌಹಾರ್ದ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆ.




**ದಕ್ಷಿಣ ಕನ್ನಡ:** ಸುಗ್ಗಿ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ.




**ಮೂಡುಬಿದರೆ:** ವಂದೇಮಾತರಂ ವಿವಿದೋದ್ದೇಶ ಸೌಹಾರ್ದ ಸಹಕಾ–ರಿಯ 9ನೇ ವಾರ್ಷಿಕ ಸಾಮಾನ್ಯ ಸಭೆ.





**ಉಡುಪಿ :** ಪಂದುಬೆಟ್ಟು ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ.

# ನೆರೆ ಸಂತ್ರಸ್ತರ ನಿಧಿಗೆ ದೇಣಿಗೆ



ಚಿತ್ರದುರ್ಗ: ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನೆರೆ ಸಂತ್ರಸ್ತರ ನಿಧಿಗೆ ರೂ 1 ಲಕ್ಷ ರೂಪಾಯಿಗಳನ್ನು ಸಹಕಾರಿಯ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್. ಆರ್ ಲಕ್ಷ್ಮೀಕಾಂತ ರೆಡ್ಡಿ ಚೆಕ್ ಮುಖಾಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ಹೆಚ್. ಕೃಷ್ಣಾರೆಡ್ಡಿ ಇವರಿಗೆ ನೀಡಿದರು.



ಚಿತ್ರದುರ್ಗ: ಶ್ರೀ ಕನ್ನಿಕಾ ಪರಮೇಶ್ವರಿ ಸೌಹಾರ್ದ ಸಹಕಾರಿಯವರು ನೆರೆ ಸಂತ್ರಸ್ತರ ನಿಧಿಗೆ ರೂ 25 ಸಾವಿರ ರೂಪಾಯಿಗಳನ್ನು ಚೆಕ್ ಮುಖಾಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ಹೆಚ್. ಕೃಷ್ಣಾರೆಡ್ಡಿ ಇವರಿಗೆ ನೀಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್. ಆರ್ ಲಕ್ಷ್ಮೀಕಾಂತ ರೆಡ್ಡಿ ರವರು ಉಪಸ್ಥಿತರಿದ್ದರು.



ಚಿತ್ರದುರ್ಗ: ಹಿರಿಯೂರಿನ ವಿಶ್ವಚೇತನ ಸೌಹಾರ್ದ ಸಹಕಾರಿಯವರು ನೆರೆ ಸಂತ್ರಸ್ತರ ನಿಧಿಗೆ ರೂ 20 ಸಾವಿರ ರೂಪಾಯಿಗಳನ್ನು ಚೆಕ್ ಮುಖಾಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ಹೆಚ್. ಕೃಷ್ಣಾರೆಡ್ಡಿ ಇವರಿಗೆ ನೀಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್. ಆರ್ ಲಕ್ಷ್ಮೀಕಾಂತ ರೆಡ್ಡಿ ರವರು ಉಪಸ್ಥಿತರಿದ್ದರು.




ಗೌರಿಬಿದನೂರು: ಅಕ್ಷಯ ಸೌಹಾರ್ದ ಸಹಕಾರಿ ನಿಯಮಿತ., ಗೌರಿಬಿದನೂರು ವತಿಯಿಂದ ರಾಜ್ಯದಲ್ಲಿ ಉಂಟಾಗಿರುವ ಭೀಕರ ಮಳೆ ಮತ್ತು ಪ್ರವಾಹದ ಹೊಡೆತಕ್ಕೆ ಸಿಲುಕಿರುವ ಸಂತ್ರಸ್ತರಿಗಾಗಿ ಸಹಕಾರಿ ಸಂಸ್ಥೆಯಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಹೆಸರಿನ 25,000/- ರೂಗಳ ಚೆಕ್ ಅನ್ನು ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ಹೆಚ್. ಕೃಷ್ಣಾರೆಡ್ಡಿ ಇವರಿಗೆ ಹಸ್ತಾಂತರಿಸಲಾಯಿತು.



ಚಿಕ್ಕಬಳ್ಳಾಪುರ: ವಾಸವಿ ವರ್ತಕರ ಸೌಹಾರ್ದ ಸಹಕಾರಿ ನಿಯಮಿತ., ಚಿಕ್ಕಬಳ್ಳಾಪುರ ವತಿಯಿಂದ ರಾಜ್ಯದಲ್ಲಿ ಉಂಟಾಗಿರುವ ಭೀಕರ ಮಳೆ ಮತ್ತು ಪ್ರವಾಹದ ಹೊಡೆತಕ್ಕೆ ಸಿಲುಕಿರುವ ಸಂತ್ರಸ್ತರಿಗಾಗಿ ಸಹಕಾರಿ ಸಂಸ್ಥೆಯಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಹೆಸರಿನ 10,000/- ರೂಗಳ ಚೆಕ್ ಅನ್ನು ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ಹೆಚ್. ಕೃಷ್ಣಾರೆಡ್ಡಿ ಇವರಿಗೆ ಹಸ್ತಾಂತರಿಸಲಾಯಿತು.



ರಾಯಚೂರು: ಮಾರುತಿ ಸೌಹಾರ್ದ ಸಹಕಾರಿ ನಿಯಮಿತ, ಬಳಗನೂರು ಈ ಸಹಕಾರಿಯ ವತಿಯಿಂದ ರಾಜ್ಯದಲ್ಲಿ ಉಂಟಾಗಿರುವ ಭೀಕರ ಮಳೆ ಮತ್ತು ಪ್ರವಾಹದ ಹೊಡೆತಕ್ಕೆ ಸಿಲುಕಿದ ಸಂತ್ರಸ್ತರಿಗಾಗಿ ಸದರಿ ಸೌಹಾರ್ದ ಸಹಕಾರಿಯಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಹೆಸರಿನ 25,000/- ರೂಪಾಯಿಗಳ ಚೆಕ್ ನೀಡಿದರು.



ರಾಯಚೂರು: ಶಿವಶರಣೆ ಸಜ್ಜಲಶ್ರೀ ಸೌಹಾರ್ದ ಸಹಕಾರಿ ನಿಯಮಿತ, ಮಸ್ಕಿ ಈ ಸಹಕಾರಿಯ ವತಿಯಿಂದ ರಾಜ್ಯದಲ್ಲಿ ಉಂಟಾಗಿರುವ ಜೀಕರ ಮಳೆ ಮತ್ತು ಪ್ರವಾಹದ ಹೊಡೆತಕ್ಕೆ ಸಿಲುಕಿದ ಸಂತ್ರಸ್ತರಿಗಾಗಿ ಸದರಿ ಸೌಹಾರ್ದ ಸಹಕಾರಿಯಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಹೆಸರಿನ 50,000/- ರೂಪಾಯಿಗಳ ಚೆಕ್ ನೀಡಿದರು.



ರಾಯಚೂರು: ದೇವನಾಂಪ್ರಿಯ ಸೌಹಾರ್ದ ಸಹಕಾರಿ ನಿಯಮಿತ, ಮಸ್ಕಿ ಈ ಸಹಕಾರಿಯ ವತಿಯಿಂದ ರಾಜ್ಯದಲ್ಲಿ ಉಂಟಾಗಿರುವ ಜೀಕರ ಮಳೆ ಮತ್ತು ಪ್ರವಾಹದ ಹೊಡೆತಕ್ಕೆ ಸಿಲುಕಿದ ಸಂತ್ರಸ್ತರಿಗಾಗಿ ಸದರಿ ಸೌಹಾರ್ದ ಸಹಕಾರಿಯಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಹೆಸರಿನ 11,000/- ರೂಪಾಯಿಗಳ ಚೆಕ್ ನೀಡಿದರು.



ಕೊಪ್ಪಳ: ದಿನಾಂಕ 10.08.2019ರಂದು ಶ್ರೀ ಗುರು ಸೃಷ್ಟಿಕರ್ತ ಪತ್ತಿನ ಸೌಹಾರ್ದ ಸಹಕಾರಿ ನಿ., ಗಿಣಿಕೇರಾ, ಕೊಪ್ಪಳ. ಸಹಕಾರಿಯಿಂದ ಉತ್ತರ ಕರ್ನಾಟಕ ಪ್ರವಾಹ ಸಂತ್ರಸ್ತರಿಗೆ ಅಕ್ಕಿ, ಬಿಸ್ಕೆಟ್, ಬೆಲ್ಲ, ಬೇಳೆ, ಎಣ್ಣೆ, ಸಕ್ಕರೆ, ಹಾಗೂ ಆಹಾರ ಪದಾರ್ಥಗಳನ್ನು ನೀಡಲಾಯಿತು. ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿವರ್ಗದವರು ಹಾಗೂ ಪಿಗ್ಮಿಸಂಗ್ರಹಕರು ಉಪಸ್ಥಿತರಿದ್ದರು.




ಚಾಮರಾಜನಗರ : ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿಯಮಿತ ಇದರ ವತಿಯಿಂದ ಉತ್ತರ ಕರ್ನಾಟಕದ ನೆರೆಯಿಂದ ಹಾನಿಗೊಳಗಾದ ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ಶೆಗುಣಸಿ, ತಮದಡ್ಡಿ, ಕೂಡನಹಳ್ಳ, ದರೂರು, ಅಸ್ತಿ ,ಹಳ್ಳಂಗಳ್ಳಿ ಗ್ರಾಮ ಮತ್ತು ತೇರದಾಳದ ಗಂಜಿ ಕೇಂದ್ರಕ್ಕೆ ಬೇಟಿ ನೀಡಿ ಸಂಗ್ರಹಿಸಿದ್ದ ಆಹಾರ ಪದಾರ್ಥಗಳು ಮತ್ತು ಇತರೆ ಸಾಮಗ್ರಿಗಳನ್ನು ವಿತರಿಸಲಾಯಿತು.



ಕೋಲಾರ : ಶ್ರೀ ಸಾಯಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಟಿ., ಕೋಲಾರ ವತಿಯಿಂದ ಜೀಕರ ಮಳೆ ಮತ್ತು ಪ್ರವಾಹದ ಹೊಡೆತಕ್ಕೆ ಸಿಲುಕಿದ ಸಂತ್ರಸ್ತರಿಗೆ ಸದರಿ ಸೌಹಾರ್ದ ಸಹಕಾರಿಯಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಹೆಸರಿಗೆ 10,000/- ರೂಪಾಯಿಗಳ ಚೆಕ್ ಅನ್ನು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರಿಗೆ ಹಸ್ತಾಂತರಿಸಲಾಯಿತು.



ಕೋಲಾರ : ಶ್ರೀ ಗಣಪತಿ ಸೌಹಾರ್ದ ವಿವಿಧೋದ್ದೇಶ ಸಹಕಾರಿ ನಿ., ಚಿಕ್ಕಬಳ್ಳಾಪುರ ವತಿಯಿಂದ ಜೀಕರ ಮಳೆ ಮತ್ತು ಪ್ರವಾಹದ ಹೊಡೆತಕ್ಕೆ ಸಿಲುಕಿದ ಸಂತ್ರಸ್ತರಿಗೆ ಸದರಿ ಸೌಹಾರ್ದ ಸಹಕಾರಿಯಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಹೆಸರಿಗೆ 5,000/- ರೂಪಾಯಿಗಳ ಚೆಕ್ ಅನ್ನು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರಿಗೆ ಹಸ್ತಾಂತರಿಸಲಾಯಿತು.



ಉತ್ತರ ಕನ್ನಡ: ಸ್ಕೊಡವೆಸ್ ಮಹಿಳಾ ಸೌಹಾರ್ದ ಸಹಕಾರಿ ನಿ., ಶಿರಸಿ ಸಹಕಾರಿಯ ವತಿಯಿಂದ ನೆರೆಪೀಡಿತ ಸಂತ್ರಸ್ತರಿಗೆ ನೆರವು ನೀಡಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಸರಸ್ವತಿ ಇವರು ಉಪಸ್ಥಿತರಿದ್ದರು.



ಅಂಕೋಲಾ: ದ್ವಾರಕಾ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಯೂರ ಆರ್ ನಾಯಕರು ಅಂಕೋಲಾ ತಾಲ್ಲೂಕಿನಲ್ಲಿ ಉಂಟಾದ ಭೀಕರ ನೆರೆ ಹಾವಳಿಯಿಂದ ಸಂಪೂರ್ಣವಾಗಿ ಮನೆ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿರುವ ಸಂತ್ರಸ್ತರಿಗೆ ಮನೆ ನಿರ್ಮಿಸಿಕೊಳ್ಳಲು ಶೀಟ್ ವಿತರಿಸುವ ಮೂಲಕ ಅರ್ಥಪೂರ್ಣ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ಬೆಳಗಾವಿ: ಶಿವಬಸವ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಇವರು ನೆರೆ ಸಂತ್ರಸ್ತರ ಪರಿಹಾರ ನಿಧಿಗೆ ರೂ.15000/- ಚೆಕ್ ನೀಡಿದರು.



ಕಾರವಾರ: ಜೈ ಶ್ರೀ ಅಂಬೆ ದುರ್ಗಾಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಸದಾಶಿವಗಡ, ಕಾರವಾರ ಸದರಿ ಸಹಕಾರಿಯಿಂದ ಕಿನ್ನರ್, ಸಿದ್ದರ, ಕಡವಾಡ, ಮದ್ರಾಂಳಿ ಭಾಗದ ನೆರೆ ಸಂತ್ರಸ್ತರಿಗೆ ಅವಲಕ್ಕಿ, ಕಾಯಿ, ಬೆಲ್ಲ, ಬಿಸ್ಕಿಟ್, ಸೋಪ, ಮೆಣದಬತ್ತಿ ಸೇರಿದಂತೆ ಇನ್ನಿತರ ಪರಿಹಾರ (ಗೃಹ ಉಪಯೋಗಿ) ಸಾಮಗ್ರಿಗಳು ವಿತರಿಸಲಾಯಿತು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

### ಕೋಲಾರ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಲಿ., ಕೋಲಾರ



ಶ್ರೀ ಹರ್ಷಜಿತ್ ಎಸ್
ಅಧ್ಯಕ್ಷರು



ರೂಪ ವಿ.ಆರ್
ಉಪಾಧ್ಯಕ್ಷರು

### ಚಂದ್ರೋದಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಮೈಗೂರು



ಶ್ರೀ ಧರೆಪ್ಪಾ ಬಾಮರಾಯ ಆಲಗೂರು
ಅಧ್ಯಕ್ಷರು



ಶ್ರೀ ಶ್ರೀಕಾಂತ ಕಲ್ಲಪ್ಪ ಶೇಕಬಾಳ
ಉಪಾಧ್ಯಕ್ಷರು

## ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ನಿಜಗುಣೆಪ್ಪ ಎಸ್ ಶೆಟ್ಟರ
ಅಧ್ಯಕ್ಷರು

**ಕೊಪ್ಪಳ:** ಶ್ರೀ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ಕೊಪ್ಪಳ ಇದರ ಅಧ್ಯಕ್ಷರಾದ ಶ್ರೀ ನಿಜಗುಣೆಪ್ಪ ಎಸ್ ಶೆಟ್ಟರ ರವರು(58) ದಿನಾಂಕ 06/08/2019 ಸಮಯ ಮಧ್ಯಾಹ್ನ 2:45 ಕ್ಕೆ ವಿಧಿವಶರಾಗಿದ್ದಾರೆ. ಶ್ರೀಯುತರ ನಿಧನಕ್ಕೆ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಯವರು ಸಂತಾಪ ವ್ಯಕ್ತಪಡಿಸಿದ್ದಾರೆ.

## ದಶಮಾನೋತ್ಸವ ಕಾರ್ಯಕ್ರಮ

**ತುಮಕೂರು :** ದಿನಾಂಕ 28.07.2019 ರಂದು ಸನ್‌ರೈಸ್ ಸೌಹಾರ್ದ ಪತ್ತಿನ ಸಹಕಾರಿ ನಿ., ಸಹಕಾರಿಯ ದಶಮಾನೋತ್ಸವ ಕಾರ್ಯಕ್ರಮವು ಶ್ರೀ ಉದ್ದಾನೇಶ್ವರ ಸಮುದಾಯ ಭವನ, ಸಿದ್ದಗಂಗಾ ಮಠ, ತುಮಕೂರು ಇಲ್ಲಿ ನಡೆಯಿತು.

## ಆಯ್ಕೆ



ಕೋಲಾರ: ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ ಆಪರೇಟಿವ್ ಲಿಮಿಟೆಡ್ ನ ಅಡಳಿತ ಮಂಡಳಿಯ ನಿರ್ದೇಶಕರಾದ ಶ್ರೀ ವಿ.ಎನ್ ರವಿಕುಮಾರ್ ರವರು ತುಮಕೂರು ಜಿಲ್ಲೆ ಪಾವಗಡದ ಪುರಸಭೆಯ ಸದಸ್ಯರಾಗಿ ಆಯ್ಕೆಯಾಗಿರುತ್ತಾರೆ. ಸದರಿ ಸಹಕಾರಿಯ ಗೌರವ ಅಧ್ಯಕ್ಷರಾದ ಶ್ರೀಯುತ ಬಿ.ಹೆಚ್.ಕೃಷ್ಣಾರೆಡ್ಡಿರವರು ಮತ್ತು ಆಡಳಿತ ಮಂಡಳಿ ಸದಸ್ಯರು ಶ್ರೀ ವಿ.ಎನ್ ರವಿಕುಮಾರ್ ರವರನ್ನು ಸನ್ಮಾನಿಸಿದರು.



ಚಿತ್ರದುರ್ಗ: ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನ ನಿರ್ದೇಶಕರಾದ ಶ್ರೀ ರಘುರಾಮ ರೆಡ್ಡಿಯವರು ಇತ್ತೀಚಿಗೆ ಚಿತ್ರದುರ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗೆ ನಡೆದ ಚುನಾವಣೆಯಲ್ಲಿ ನಿರ್ದೇಶಕರಾಗಿ ಆಯ್ಕೆಯಾಗಿರುವುದಕ್ಕೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿಯವರು ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್. ಆರ್ ಲಕ್ಷ್ಮೀಕಾಂತ ರೆಡ್ಡಿ ರವರು ಉಪಸ್ಥಿತರಿದ್ದರು.



ಕೋಲಾರ: ಕೋಲಾರ ಲೋಕಸಭಾ ಕ್ಷೇತ್ರದ ಸಂಸದರಾದ ಶ್ರೀಯುತ ಎಸ್. ಮುನಿಸ್ವಾಮಿರವರು ತಮ್ಮ ಗೆಲುವಿಗೆ ಪ್ರಮುಖ ಕಾರಣರಾದಂತಹ ಕೋಲಾರ ಲೋಕಸಭಾ ಚುನಾವಣೆಯ ಉಸ್ತುವಾರಿಗಳು ಹಾಗೂ ಪಾವಗಡ ಸೌಹಾರ್ದ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿರವರಿಗೆ ಇವರನ್ನು ಸನ್ಮಾನಿಸಿದರು.



ದಾವಣಗೆರೆ: ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕರಿಗಳ ಒಕ್ಕೂಟ ನಿ., ದಾವಣಗೆರೆ. ಇದರ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಹೆಚ್. ಎಂ. ನಾಗರಾಜ್ ಹಾಗೂ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಉಮೇಶ್ ಶೆಟ್ಟಿ ಇವರು ಆಯ್ಕೆಯಾಗಿರುತ್ತಾರೆ.



**ಮೂಡಲಗಿ :** ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿಯ 2018–19 ನೇ ಸಾಲಿನ ವಾರ್ಷಿಕ ಸರ್ವಸಾಧಾರಣ ಸಭೆಯ ಸಹಕಾರಿಯ ಸಭಾ ಭವನದಲ್ಲಿ ನಡೆಯಿತು. ಸಹಕಾರಿಯ ಅಧ್ಯಕ್ಷರು ಮಾತನಾಡಿ ಸದಸ್ಯರಿಗೆ ಶೇ 20 ರಷ್ಟು ಲಾಭಾಂಶ ವಿತರಿಸಲಾಗುವುದು ಎಂದು ಸಹಕಾರಿಯ ಅಧ್ಯಕ್ಷ ಈರಣ್ಣ ಕಡಾಡಿ ಘೋಷಿಸಿದರು. ಸಹಕಾರಿಯು ಪ್ರಸಕ್ತ ಸಾಲಿನಲ್ಲಿ ಸದಸ್ಯರ ಹಾಗೂ ಸಿಬ್ಬಂದಿಗಳ ಸಹಕಾರದಿಂದ ರೂ. 46 ಲಕ್ಷ ನಿವ್ವಳ ಲಾಭವಾಗಿದೆ.



**ಕೊಪ್ಪ:** ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ನಿ. ಕೊಪ್ಪ (ಯಸ್ಕಾನ್) ಇದರ 15ನೇ ಮಹಾಸಭೆ ದಿನಾಂಕ 25.08.2019ರಂದು ಗಾಯತ್ರೀ ಮಂದಿರದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ವೈ.ಎಸ್.ಸುಬ್ರಹ್ಮಣ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯು ರೂ. 74.53 ಕೋಟಿ ದುಡಿಯುವ ಬಂಡವಾಳ ಹೊಂದಿ, ರೂ. 1,67,35,695/–ಗಳ ಲಾಭ ಹೊಂದಿದ್ದು, ಸದಸ್ಯರಿಗೆ 14% ಡಿವಿಡೆಂಟ್ ಘೋಷಣೆ ಮಾಡಿದ್ದಾರೆ.

# YOUTH INTEGRATION IN COOPERATIVES: AN ASIAN PERSPECTIVE

- Yashavantha Dongre

**Introduction:**

Young people are an important asset for cooperatives, not only because they ensure the generational renewal of the membership and will be the cooperatives' future leaders, but also because they have a greater capacity for innovation and entrepreneurship and therefore are more inclined to work with new technologies and generally have higher levels of education than older cooperative members. In fact, youth had shown a great deal of enthusiasm and actively participated in the co-operative movement in its early stages. Co-operatives coming to the centre stage in Europe had a lot to do with youth participation as members and willingness of the young people to work for co-operatives. In Asian region too, there are evidences to show that a fair share of youth took active interest in co-operatives. It was observed that "in developing countries young people (below 30) are the section of the population most actively and willingly involved in the co-operative movement" (Maslennikov, 1990, 27). In Japan, the consumer co-operative movement was built around the University Co-operatives in which young students took active part. In India from the very early stages the co-operatives in educational institutions were among the most successful consumer co-operatives (Bhatnagar, 1927)

But today the situation seems to have changed totally, so much so, that the co-operative movement is coming to be known as a movement of the aged. Asia Pacific region houses the largest chunk of youth in the world, but the youth participation in co-operatives is not up to the desired level. We therefore, need to understand the demographic features of the region so as to be able to facilitate youth integration in co-operatives.

**Profile of youth population in Asia Pacific Region:**

asia and Pacific region is the most youthful region both in terms of the number of young people as well as the rate at which their population is growing. Most millennials of the world are found in this region that houses more than half of world's young people aged between 15 and 24. South Asia in particular accounts for the largest share of youth population of the globe even with a broader parameter of defining youth as those aged between 15 and 35 (Paranjothi & Dongre, 2006). However, the spread of youth population within the region is very uneven. In East Asia the share of youth population is said to be around 17%, while it is around 18% in South East Asia and the Pacific. The South Asian region houses the world's largest pool of youth accounting for about 26 percent of world's youth population (UNECA, 2010)

It is estimated that "the Asia-Pacific region contains 60 per cent of the world's youth population, or 750 million young persons aged 15 to 24 years. In 2010, India alone had 234 million young people, the highest number of any country in the world (representing 19 per cent of the country's total population), followed by China with 225 million (representing 17 per cent of the total population). By comparison, Japan only had 12 million young people or 10 per cent of the population. Bangladesh and the Philippines both also had very high shares of youth – around 20 per cent of the total population. (UNO, 2010)

As per the latest official census, the total youth population in India increased from 168 million in 1971 to 422 million in 2011. It is further estimated more than 50% of its population below the age of 25 and more than 65% below the age of 35. It is expected that, in 2020, the average age of an Indian will be 29 years, compared to 37 for China and 48 for Japan (GOI, 2017). China and Indonesia are the other two countries where the youth population forms a major part of the total population. The developed part of Asia, in particular countries like Japan, Korea, New Zeeland and Australia do not enjoy this demographic dividend, since their population is aging and hence shortage of labour force is a common problem for these countries.

**Why Cooperatives are ideal platform for youth?**

How far can co-operatives be the institutional choices the youth in the region would embrace? If co-operatives can be of help in addressing the above challenges, they

would be certainly an important choice for the young people. There are ample evidences and grounded arguments to demonstrates co-operatives can effectively address varied needs of the youth. Co-operatives being principle-based organizations exhibit a sense of social commitment and hence its member community can always hope to get their needs fulfilled.

Unemployment being the most critical challenge faced by youth, co-operatives can be an important source to look for. It is estimated that co-operatives around the world can create around 100 million jobs (ILO, 2012). It is also well argued that co-operatives could be an important mode of entrepreneurship and young people can take the co-operative way for establishing new start-ups and run their own businesses. It is said that If one is looking to establish one's own venture working with others to gain scale and share risks ... or one wishes to work with others in a business that all would own ... or one has an idea for a community owned business ... co-operative models offer an innovative solution (McDonnell et. al, 2012).

Co-operatives are seen to be an ideal option for providing better and affordable healthcare facilities. As has been well demonstrated in case of Bangladesh, "cooperative societies act as a risk management strategy for members, working on the basic principle of risk pooling during illness. This risk-pooling mechanism can mitigate the consequences of dependence on out-of-pocket payments to finance healthcare, thereby facilitating the move towards Universal Health Coverage" (Sarker et. al., 2016). There have been studies that demonstrated co-operative's ability to help youth access their health needs as well as providing youth space to serve people in need of health care (Matthew, 2017)

Co-operatives are seen to be supporting educational services in a variety of ways. In fact, co-operatives in educational institutions that consist of students, teachers and staff as members and serving the campus community, are common in the Asian region. University co-operatives in Japan are an outstanding example for providing Student Support Services and contributing to study and learning apart from providing part time jobs to youth. There are examples of co-operative educational institutions that provide educational services to youth with a focus on access, equity and quality.

It is therefore evident that co-operatives can empower youth in many ways. They not only provide a participatory opportunity to young people and there by enhance their skills in leadership, financial as well as business management, but also meet their varied needs. Therefore, co-operatives can be a humane, democratic and trustworthy institutional choice for youth of the region to address their varied challenges.

**Co-operatives and Youth – The Mutuality**

Youth need co-operatives to find solutions to many of their problems and the co-operative movement needs youth for it to flourish in the decades to come. Youth taking active part in co-operatives help them develop the qualities of mutuality, collectivism and contributing to each other. Co-operatives provide youth with a unique institutional choice to address their own issues through self-help and self-drive. At the same time the co-operative movement has a lot to gain if youth participate in co-operatives in a big way. Any socio-economic movement can get strengthened and survive longer when young blood is infused into it. Co-operatives get new ideas, get human resource that understand and handle modern technology and get future leaders who enrich the movement and take to better heights. Therefore, "it is essentially a win-win situation where the youth as well as the co-operative movement would gain"

Asian and Pacific region being the hub of youth population in the world, the co-operative sector needs to push hard to assimilate larger share of this population into its fold. There will have to be specific strategies put in place to create awareness and make youth believe in co-operative movement. The co-operative federal/apex organizations, the educational institutions and the domestic co-operative promotion bodies on the one hand and the global institutions such as the UNO, ILO, FAO, UNESCO and the ICA on the other, need to put in concerted efforts towards creating awareness among youth and make them repose faith on the co-operative movement. It is also necessary to lobby and negotiate with national governments to put in place conducive policies and legislations that create space for youth to participate in co-operatives. Once the mutuality is understood, both the youth and the co-operatives will be in a better position to appreciate each other better. Asian and Pacific region is longing for this to happen.

# ಮಹಿಳಾ ಸಾಧಕರ ಸಾಲಿನಲ್ಲಿ ದಿಟ್ಟ ಹೆಜ್ಜೆ ಇಟ್ಟ ಮಹಿಳೆಯರು

– ಸವಿತ ಎನ್. ಇ.

**ಪೀಠಿಕೆ :**

ಹೆಣ್ಣು ನಾಲ್ಕು ಗೋಡೆಗಷ್ಟೇ ಸೀಮಿತ ಎಂಬ ಕಾಲದಿಂದ ದೇಶದ ಅತ್ಯುನ್ನತ ಸ್ಥಾನವನ್ನೂ ಪಡೆಯುವ ಮಟ್ಟಿಗೆ ಹೆಣ್ಣು ಬದಲಾಗಿದ್ದಾಳೆ. ಎಲ್ಲ ಕ್ಷೇತ್ರಗಳಲ್ಲೂ ಪುರುಷನಿಗೆ ಸರಿಸಮನಾಗಿ ನಿಂತು ತನ್ನ ಸಾಮರ್ಥ್ಯದ ಅರಿವು ಮೂಡಿಸಿದ್ದಾಳೆ. ಹೆಣ್ಣು ಆಕಾಶದೆತ್ತರದಷ್ಟನ್ನು ಸಾಧಿಸಬಲ್ಲಳು ಎಂಬುದನ್ನು ಸಾಧಿಸಿದ ನೂರಾರು ಮಹಿಳೆಯರು ನಮ್ಮ ನಡುವೆ ಇದ್ದಾರೆ. ಅದರಲ್ಲಿ ಕೆಲವು 'ಪ್ರಥಮ' ಗಳು ಇಲ್ಲಿವೆ. ಸಾಧನೆಯ ಹಾದಿಯಲ್ಲಿ ಹೆಣ್ಣಿನ ಹೆಜ್ಜೆ ಗುರುತನ್ನು ಮೊಟ್ಟಮೊದಲಬಾರಿಗೆ ಮೂಡಿಸಿದ ಕೀರ್ತಿ ಇವರೆಲ್ಲರದು.

ಭಾರತದ ಮೊದಲ ಮಹಿಳಾ ರಾಷ್ಟ್ರಪತಿ–ಪ್ರತಿಭಾ ದೇವಿಸಿಂಗ್ ಪಾಟೀಲ್, ಭಾರತದ ಮೊದಲ ಮಹಿಳಾ ಪ್ರಧಾನಿ–ಇಂದಿರಾ ಪ್ರಿಯದರ್ಶಿನಿ, ಗಾಂಧಿ ಬಾಹ್ಯಾಕಾಶದಲ್ಲಿ ಮೊದಲ ಮಹಿಳೆ–ಕಲ್ಪನಾ ಚಾವ್ಲಾ, ಸೇನೆಯಲ್ಲಿ ಮೊದಲ ಭಾರತೀಯ ಮಹಿಳೆ–ಪುನಿತಾ ಅರೋರ, ಪ್ರಿಯಾ ಜಿನ್ಗನ್ ಮೌಂಟ್ ಎವರೆಸ್ಟ್ ಹತ್ತಿದ ಮೊದಲ ಭಾರತೀಯ ಮಹಿಳೆ–ಬಚೇಂದ್ರಿ ಪಾಲ್, ನೌಕಾಸೇನೆಯಲ್ಲಿ ಮೊದಲ ಭಾರತೀಯ ಮಹಿಳೆ–ಶುಭಾಂಗಿ ಸ್ವರೂಪ್, ಒಲಿಂಪಿಕ್ಸ್ ನಲ್ಲಿ ಮೊದಲ ಭಾರತೀಯ ಮಹಿಳೆ–ಕರ್ಣಂ ಮಲ್ಲೇಶ್ವರಿ, ಒಲಿಂಪಿಕ್ಸ್‌ನಲ್ಲಿ ಬೆಳ್ಳಿಗೆದ್ದ ಮೊದಲ ಭಾರತೀಯ ಮಹಿಳೆ–ಪಿ.ವಿ.ಸಿಂಧು,

ಭಾರತದ ಮೊದಲ ವಿಶ್ವಸುಂದರಿ–ರೀಟಾ ಫೆರಿಯಾ ಪೊವೆಲ್, ಭಾರತದ ಮೊದಲ ಭುವನ ಸುಂದರಿ–ಸುಶ್ಮಿತಾ ಸೇನ್, ಭಾರತದ ಮೊದಲ ನಟಿ–ಜುಬೇದಾ ಬೇಗಂ, ಭಾರತದ ಮೊದಲ ಗಾಯಕಿ ರಾಜಕುಮಾರಿ ದುಬೆ, ಭಾರತದ ಮೊದಲ ವೈದ್ಯೆ–ಆನಂದಿ ಗೋಪಾಲ ಜೋಶಿ, ನೊಬೆಲ್ ಪ್ರಶಸ್ತಿ ಪಡೆದ ಮೊದಲ ಭಾರತೀಯ ಮಹಿಳೆ–ಮದರ್ ಥೆರೆಸಾ, ಭಾರತದ ಮೊದಲ ಮಹಿಳಾ ಐಪಿಎಸ್ ಅಧಿಕಾರಿ–ಕಿರಣ್ ಬೇಡಿ, ಮೊದಲ ಮಹಿಳಾ ಚಾಲಕಿ–ರೋಶ್ನಿ ಶರ್ಮಾ, ಭಾರತದ ಮೊದಲ ಆಟೋ ರಿಕ್ಷಾ ಡ್ರೈವರ್–ಶೀಲಾ ದಾರ್ವೆ, ದ್ವಿಶತಕ ಭಾರಿಸಿದ ಮೊದಲ ಭಾರತೀಯ ಮಹಿಳಾ ಕ್ರಿಕೆಟರ್–ಮಿಥಾಲಿ ರಾಜ್, ವಾಯುಸೇನೆಯ ಮೊದಲ ಮಹಿಳಾ ಅಧಿಕಾರಿ–ಅಂಜಲಿ ಗುಪ್ತಾ, ಸುಪ್ರೀಂ ಕೋರ್ಟ್‌ನ ಮೊದಲ ಮಹಿಳಾ ಜಡ್ಜ್–ಎಂ.ಫಾತಿಮಾ ಬಿ. ವಿ., ಭಾರತೀಯ ವಾಯುನೆಲೆಯೆ ಮೊದಲ ಮಹಿಳಾ ಪೈಲೆಟ್–ದುರ್ಗಾ ಬ್ಯಾನರ್ಜಿ, ಆಸ್ಕರ್ ಗೆದ್ದ ಮೊದಲ ಭಾರತೀಯ ಮಹಿಳೆ–ಭಾನು ಅಥೈ, ಮೊದಲ ಮಿಸಸ್ ವರ್ಲ್ಡ್ ಪ್ರಶಸ್ತಿ ಗೆದ್ದ ಭಾರತೀಯ ಮಹಿಳೆ –ಅದಿತಿ ಗೋವಿಟ್ರಿಕರ್, ಯುದ್ಧ ವಿಮಾನದ ಮೊದಲ ಮಹಿಳಾ ಪೈಲೆಟ್–ಅವನಿ ಚತುರ್ವೇಧಿ, ಹೀಗೆ ಕೃಷಿಯಲ್ಲಿ ಇದುವರೆಗೆ ಕೇವಲ ರೈತ ಎಂದರೆ ಒಬ್ಬ ಪುರುಷ ವ್ಯಕ್ತಿ ಎಂದೇ ಅವನಿಂದಲೆ ಮಾತ್ರ ಸಾಧ್ಯ ಕೃಷಿಕ್ಷೇತ್ರದಲ್ಲಿ ಕೆಲಸ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತಿತ್ತೆಂಬ ಭಾವನೆಯನ್ನು ರಾಯಚೂರಿನ ಕವಿತಾಳದ ಕವಿತರವರು ಹಾಗೂ ದೊಡ್ಡಬಳ್ಳಾಪುರದ ಉಮಾದೇವಿಯವರು ತೊಡೆದು ಹಾಕಿ ಕೃಷಿ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆಯನ್ನು ಗೈದಿರುವ ಕಿರಿ ಪರಿಚಯ ಹಾಗೂ ಸಾಧನೆ.

**ಶ್ರೀಮತಿ ಕವಿತಾ ಉಮಾಶಂಕರ ಮಿಶ್ರಾ**



ರೈತ ಮನಸ್ಸು ಮಾಡಿದರೆ ಒಂದೇ ಎಕರೆ ಭೂಮಿಯಲ್ಲಿ ಐದಾರು ಕೋಟಿ ಸಂಪಾದನೆ ಮಾಡಬಹುದು! ರಾಯಚೂರಿನ ಮಾನ್ವಿ ತಾಲೂಕಿನ ಕವಿತಾಳ ಎಂಬ ಗ್ರಾಮದ ನಿವಾಸಿ. ಕವಿತಾ ಮಿಶ್ರಾರವರು ಓದಿದ್ದು ಕಂಪ್ಯೂಟರ್ ಸೈನ್ಸ್ ಡಿಪ್ಲೋಮಾ, ಜೊತೆಗೆ ಸೈಕಾಲಜಿಯಲ್ಲಿ ಸ್ನಾತಕ ಪದವಿ. ಕೈತುಂಬ ಸಂಪಾದನೆ ಮಾಡುವ ಕೆಲಸ ಸಿಕ್ಕರೂ ಅದನ್ನು ತೊರೆದು ಭೂತಾಯಿಯನ್ನೇ ನಂಬಿ ಬಂದವರು ಕವಿತಾ. ಏಕಬೆಳೆ ಪದ್ಧತಿಯನ್ನು ನಂಬಿಕೊಂಡಿರುವುದರಿಂದ ಪ್ರಯೋಜನವಿಲ್ಲ ಎಂಬುದನ್ನು ಅರಿತ ಇರವರು ಮಿಶ್ರ ಬೆಳೆ ಪದ್ಧತಿಯನ್ನು ಅಳವಡಿಸಿಕೊಂಡರು. ಬಿರುಬೇಸಿಗೆಯಲ್ಲಿ 40–45 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚುವ ತಾಪಮಾನದಲ್ಲೂ ತಮ್ಮ ಹತ್ತು ಎಕರೆ ಭೂಮಿಯನ್ನು ಹಸಿರಾಗಿಸಿದವರು ಕವಿತಾ.

ಸಾವಯವ ಕೃಷಿ, ಹನಿ ನೀರಾವರಿಯ ಮೂಲಕ ಹಠ ಹಿಡಿದು ಹತ್ತಾರು ಬೆಳೆಗಳನ್ನು ಬೆಳೆದು ಯಶಸ್ವಿಯಾಗಿದ್ದಾರೆ. ಕೃಷಿ ಮತ್ತು ರೈತ ವೃತ್ತಿಯ ಬಗ್ಗೆ ಅವರಿಗಿರುವ ಕಾಳಜಿ ಮತ್ತು ಪ್ರೀತಿ ಅಪಾರ. ಈ ಕುರಿತು ಅವರು ರೈತರಿಗೆ ನೀಡಿದ ಉಪಯುಕ್ತ ಸಲಹೆಯ ವಿಡಿಯೋವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ ಅನೇಕ ರೈತರಿಗೆ ಮಾದರಿಯಾಗಿದೆ.

ಸಮಗ್ರ ಬೇಸಾಯ ಪದ್ಧತಿಗೆ ಒತ್ತು ನೀಡಿ "ಏಕ ಬೆಳೆಯನ್ನು ನಂಬಿಕೊಂಡಿರುವುದು ಎಂದಿಗೂ ಅಪಾಯ. ಒಂದೇ ಬೆಳೆಯನ್ನು ನಂಬಿಕೊಂಡಿದ್ದರೆ ಅದು ಕೈಕೊಟ್ಟರೆ ರೈತನ ಕತೆ ಏನು?ಕುಟುಂಬದ ಗತಿ ಏನು? ಮಕ್ಕಳ ವಿದ್ಯಾಭ್ಯಾಸದ ಸ್ಥಿತಿ ಈಗಂತೂ ದುಡ್ಡಿನ ಮೇಲೆ ನಿಂತಿದೆ

41ನೇ ಪುಟಕ್ಕೆ......

# ಸಹಕಾರಿ ಸಂಸ್ಥೆಗಳಲ್ಲಿ ಸ್ವಾಯತ್ತತೆ ಸ್ವಾವಲಂಬನೆ ಮತ್ತು ಸ್ವಯಂ ನಿಯಂತ್ರಣ – ಒಂದು ಚಿಂತನೆ

– ಶಂಕರ ಹೆಗಡೆ

ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯು ಜನಸಮುದಾಯದ ಚಳುವಳಿಯಾದಂತೆ ಸಹಕಾರ ಚಳುವಳಿಯೂ ಸಹ 1905 ರಿಂದ ಜನಸಮುದಾಯದ ಚಳುವಳಿಯಾಗಿ ಗುರುತಿಸಿಕೊಂಡಿತು. ಸಣ್ಣ ಮತ್ತು ಅತಿಸಣ್ಣ ರೈತರು ಭೂರಹಿತ ಕೃಷಿ ಕಾರ್ಮಿಕರು ದುರ್ಬಲ ವರ್ಗದ ಕೈಮಗ್ಗ ನೇಕಾರರು ಮೀನುಗಾರರು ಕುಶಲಕರ್ಮಿಗಳು ಇತ್ಯಾದಿ ವರ್ಗಗಳ ಕೋಟ್ಯಂತರ ಜನರ ಒತ್ತಾಸೆ ಮತ್ತು ಆಕಾಂಕ್ಷೆಗಳೇ ಎರಡೂ ಚಳುವಳಿಗಳಲ್ಲಿ ಪ್ರಮುಖವಾಗಿ ಅಡಕವಾಗಿದ್ದ ಅಂಶಗಳಾಗಿದ್ದವು. ಬಡಜನರನ್ನು ಹಾಗೂ ಆರ್ಥಿಕ ಶೋಷಣೆಗೆ ಒಳಗಾದ ಶೋಷಿತರನ್ನು ಸಹಕಾರ ಸಂಘಗಳ ಅಡಿಯಲ್ಲಿ ತರಲು ಅನೇಕ ಪ್ರಯತ್ನಗಳು ನಡೆದವು. ಈ ಬಗ್ಗೆ ದೇಶದಾದ್ಯಂತ ಸಹಕಾರ ಚಳವಳಿ ವಿವಿಧ ಕ್ಷೇತ್ರಗಳಲ್ಲಿ ವ್ಯಾಪಿಸಿಕೊಂಡಿತು. ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಆರ್ಥಿಕ ಸ್ವಾತಂತ್ರ್ಯಕ್ಕೂ ಸಹಕಾರ ಚಳವಳಿ ನಾಂದಿಯಾಯಿತು.

ಸಹಕಾರಿ ಸಂಸ್ಥೆಗಳು ಪ್ರಜಾಸತ್ತಾತ್ಮಕ ತಳಹದಿ ಮೇಲೆ ಸ್ಥಾಪಿಸಲಾದ ಸಂಸ್ಥೆಗಳಾಗಿದ್ದು ಅವುಗಳು ಸದಸ್ಯರುಗಳ ನಿಯಂತ್ರಣಕ್ಕೆ ಒಳಪಟ್ಟಿದೆ ಹೊರತು ಸರಕಾರಿ ಸಂಸ್ಥೆಗಳಾಗಬಾರದೆಂದು ಅನೇಕ ಸಹಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಸದಸ್ಯರು ಸಂಸ್ಥೆಯ ಕಾರ್ಯನೀತಿಯನ್ನು ರೂಪಿಸುವಲ್ಲಿ ಮತ್ತು ತೀರ್ಮಾನಗಳನ್ನು ಕೈಗೊಳ್ಳುವಲ್ಲಿ ಭಾಗವಹಿಸುತ್ತಾರೆ. ಈ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಸದಸ್ಯರಿಗೆ ಜವಾಬ್ದಾರರಾಗಿರುತ್ತಾರೆ.

ದೇಶ ಸ್ವಾತಂತ್ರ್ಯ ಪಡೆದ ಮೇಲೆ ನಮ್ಮನ್ನು ನಾವೇ ಆಳಿಸಿಕೊಳ್ಳಲು ಸಂಸದೀಯ ಪ್ರಜಾಸತ್ತಾತ್ಮಕ ಪದ್ಧತಿಯನ್ನು ಅನುಸರಿಸಿ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಈ ದೇಶದ ಆಡಳಿತವನ್ನು ನಡೆಸುತ್ತಾ ಬಂದಿದ್ದಾರೆ. ಈ ಕಳೆದ 66 ವರ್ಷಗಳ ಅವಧಿಯಲ್ಲಿ ದೇಶದ ಪ್ರಜಾಪ್ರಭುತ್ವ ಸರಕಾರಗಳು ದೇಶವನ್ನು ಯಾವ ರೀತಿ ಮುನ್ನಡೆಸಿವೆ ಎನ್ನುವ ವಿಚಾರ ಎಲ್ಲ ಪ್ರಜೆಗಳಿಗೂ ಗೊತ್ತು. ಅದರಂತೆ ಸಹಕಾರಿ ಸಂಘಗಳ ಆಡಳಿತ ಪ್ರಜಾಸತ್ತಾತ್ಮಕವಾಗಿರಬೇಕು. ಸರ್ಕಾರದ ಅಥವಾ ಹೊರ ಏಜೆನ್ಸಿಗಳ ಹತೋಟಿ ಚಳವಳಿಯ ಮೇಲೆ ಇರಬಾರದು ಎಂದು ಸಹಕಾರಿಗಳ ಧ್ಯೇಯವಾಗಿತ್ತು.

**ಸ್ವಾಯತ್ತತೆ :**

ಸಹಕಾರಿ ಸಂಸ್ಥೆಗಳು ಸ್ವ ಸಹಾಯಕ್ಕಾಗಿ ಸ್ಥಾಪಿತವಾದ ಸ್ವಾಯತ್ತ ಸಂಸ್ಥೆಗಳು. ಅವುಗಳು ಸದಸ್ಯರಿಂದ ಸದಸ್ಯರಿಗಾಗಿ ಸದಸ್ಯರುಗಳ ನಿಯಂತ್ರಣಕ್ಕೆ ಒಳಪಟ್ಟಿರುತ್ತವೆ. ಕೆಲವು ದೇಶಗಳಲ್ಲಿ ಸಹಕಾರಿ ಇಲಾಖೆ ಇಲ್ಲದೇ ಸಹಕಾರಿ ಆಂದೋಲನ ಉತ್ತಮವಾಗಿ ನಡೆಯುತ್ತಿರುವುದು ಉಲ್ಲೇಖನೀಯ. ಆದರೆ ನಮ್ಮ ದೇಶದಲ್ಲಿ ಸರ್ಕಾರದಿಂದಲೇ ಸ್ಥಾಪಿತಗೊಂಡ ಸಹಕಾರ ಚಳುವಳಿ ತನ್ನ ಕಾಲ ಮೇಲೆ ನಿಲ್ಲಲು ಪ್ರಯತ್ನಿಸುತ್ತಿದ್ದರೂ ಸಹ ಅನೇಕ ಸಲ ರಾಜಕೀಯ ಮತೀಯ ಕಾರಣಗಳಿಂದ ಸಂಘಗಳು ತಮ್ಮ ಅಸ್ಥಿತ್ವವನ್ನು ಕಳೆದುಕೊಳ್ಳುತ್ತವೆ. ಅಲ್ಲದೇ ಮೂಲಭೂತವಾಗಿ ಸಹಕಾರಿ ಸಂಘಗಳು ಬಂದಿದ್ದು ಗ್ರಾಮೀಣ ಪತ್ತಿನ ವ್ಯವಸ್ಥೆಗೆ ಒಂದು ಸುವರ್ಣ ಮಾಧ್ಯಮವಾಗಿ. ಆದರೆ ಇಂದು ಗ್ರಾಮೀಣ ಪ್ರದೇಶಗಳಲ್ಲಿ ಪತ್ತಿನ ಸಂಘಗಳು ಅಪೇಕ್ಷಿಸಿದ ಮಟ್ಟದಲ್ಲಿ ಸಾಧನೆಯನ್ನು ಮಾಡಿಲ್ಲ. ಗ್ರಾಮೀಣ ರೈತರ ಆಶೋತ್ತರಗಳನ್ನು ಈಡೇರಿಸುವಲ್ಲಿ ಸಂಪೂರ್ಣ ಯಶಸ್ಸು ಕಂಡಿಲ್ಲ. ಈ ಬಗ್ಗೆ 2004 ರಲ್ಲಿ ಭಾರತ ಸರ್ಕಾರದಿಂದ ರಚಿತವಾದ ಪ್ರೊ. ಎ.ವೈದ್ಯನಾಥನ್ ಕಾರ್ಯಪಡೆ ಒಂದು ಮೈಲುಗಲ್ಲು. ಈ ಕಾರ್ಯಪಡೆಯೂ ಸಹ ಸಹಕಾರಿ ಗ್ರಾಮೀಣ ಕೃಷಿ ವ್ಯವಸ್ಥೆಗೆ ಹೊಸ ರೂಪ ಕೊಡಲು ಹಾಗೂ ಸ್ವಾಯತ್ತತೆ ತರಲು ಅನೇಕ ದೂರಗಾಮಿ ಶಿಫಾರಸ್ಸು ಮಾಡಿದೆ.

ಈ ವಿಷಯದಲ್ಲಿ ರಾಷ್ಟ್ರೀಯ ಹಿರಿಯ ಸಹಕಾರಿಗಳಾದ ಶ್ರೀ ಬಿ.ಎಸ್. ವಿಶ್ವನಾಥನ್‌ರವರು ಹೇಳಿದ ಈ ಕೆಳಗಿನ ವಿಚಾರಗಳನ್ನು ಸಹಕಾರಿಗಳು ಗಂಭೀರವಾಗಿ ಪರಿಗಣಿಸುವುದು ಸೂಕ್ತವಾಗಿದೆ.

1) ಸಹಕಾರಿ ಸಂಸ್ಥೆಗಳು ಸೇವಾ ಸಂಸ್ಥೆಗಳು ಎಂಬ ಭಾವನೆಯು ಹೋಗಿ ಅವೂ ಸಹ ಒಂದು ವ್ಯವಹಾರಿಕ ಸಂಸ್ಥೆಗಳು ಎಂಬ ಕಲ್ಪನೆ ಮೂಡಿಬರಬೇಕು.

2) ಆಡಳಿತ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆಯಾಗಿ ಸಹಕಾರ ಸಂಸ್ಥೆಗಳಲ್ಲಿ ನಂಬಿಕೆ ವಿಶ್ವಾಸದ ತಳಹದಿಯ ಮೇಲೆ ಆಡಳಿತ ವ್ಯವಸ್ಥೆ ರೂಪುಗೊಳ್ಳಬೇಕು.

3) ಸಂಘದ ವ್ಯವಹಾರದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಸದಸ್ಯರು ಮಾತ್ರ ಸಂಘದಲ್ಲಿ ಒಳಗೊಂಡಿರಬೇಕು.

4) ಸರ್ಕಾರ ಅಥವಾ ಯಾವುದೇ ಬಾಹ್ಯ ಮೂಲಗಳ ಹತೋಟಿಯಿಂದ ಚಳವಳಿಯು ಮುಕ್ತವಾಗಿರಬೇಕು. ಮತ್ತು ಸ್ವಾವಲಂಬಿಯಾಗಬೇಕು.

5) ಸದಸ್ಯರಿಗೆ ನಿರಂತರವಾಗಿ ಶಿಕ್ಷಣ ತರಬೇತಿ ಅನಿವಾರ್ಯ ಮತ್ತು ಅವಶ್ಯ.

6) ಸಂಘಗಳ ಸಂಖ್ಯೆ ಕಡಿಮೆಯಿದ್ದರೂ ವ್ಯವಹಾರ ಗುಣಾತ್ಮಕವಾಗಿರಬೇಕು.

7) ಸಹಕಾರಿ ಇಲಾಖೆ ನಿಯಂತ್ರಣದ ಜೊತೆಗೆ ಗೆಳೆಯ ತತ್ವಜ್ಞಾನಿ ಮತ್ತು ಮಾರ್ಗದರ್ಶಕವಾಗಿ ಕಾರ್ಯ ನಿರ್ವಹಿಸಬೇಕು.

8) ಸಹಕಾರಿ ತತ್ವ ಮತ್ತು ಆಚರಣೆ ಬಗ್ಗೆ ವ್ಯಾಪಕ ಜಾಗ್ರತೆ ಮೂಡಿಸಬೇಕು.

ಈ ಮೇಲ್ಕಂಡ ಎಂಟು ಸೂತ್ರಗಳು ಸಹಕಾರಿ ಚಳವಳಿಯನ್ನು ಜನತೆಯ

ಜನಸಮುದಾಯದ ಚಳವಳಿಯನ್ನಾಗಿ ಮಾಡುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

### ವಿನಾ ದೈನ್ಯೇನ ಜೀವನಂ

ಈ ವಾಕ್ಯವು ಸನಾತನ ಭಾರತೀಯರು ಭಗವಂತನಲ್ಲಿ ಬೇಡಿಕೊಳ್ಳುವ ಪ್ರಾರ್ಥನೆ. ಮನುಷ್ಯನ ದೈನ್ಯತೆಯು ಜೀವಂತ ನರಕದ ಸರಿಸಮಾನವಾಗಿರುವುದು. ಇದರಿಂದ ಬಿಡುಗಡೆ ಹೊಂದಲು ಪ್ರತಿಯೊಬ್ಬನೂ ಯೋಚಿಸುತ್ತಾನೆ. ಮೊದಲನೆಯದಾಗಿ ಆರ್ಥಿಕ ದುರ್ಬಲತೆ ಮತ್ತು ಆರೋಗ್ಯ ದುರ್ಬಲತೆಯನ್ನು ಹೋಗಲಾಡಿಸಲು ಸಹಕಾರ ಚಳುವಳಿ ಒಂದು ದಿವ್ಯೌಷಧ. ಪ್ರತಿಯೊಬ್ಬನೂ ಆರ್ಥಿಕವಾಗಿ ಬಲಗೊಳ್ಳುವುದು ಸಹಕಾರಿ ಆಂದೋಲನದ ಮುಖ್ಯ ಉದ್ದೇಶ. ಈ ದಿಸೆಯಲ್ಲಿ ಸಹಕಾರಿಗಳು ಚಿಂತನೆ ಮಾಡುವುದು ಅವಶ್ಯಕ. ಎರಡನೆಯದಾಗಿ ಮನುಷ್ಯನಿಗೆ ಆರೋಗ್ಯ ಭಾಗ್ಯ ಮಹತ್ವದ್ದಾಗಿರುತ್ತದೆ. ಆರೋಗ್ಯವಿಲ್ಲದೇ ಮನುಷ್ಯನು ಏನನ್ನೂ ಸಾಧಿಸಲಾರನು. ಈ ದಿಸೆಯಲ್ಲಿ ಸಹಕಾರಿ ಸಂಸ್ಥೆಗಳು ಸದಸ್ಯರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಸದಸ್ಯರು ಸದೃಢವಾಗುವಂತೆ ನೋಡಿಕೊಳ್ಳಬೇಕು. ತಮ್ಮ ಸದಸ್ಯರ ಆರ್ಥಿಕ ಸದೃಢತೆಯ ಜೊತೆಗೆ ಸದೃಢವಾದ ಆರೋಗ್ಯದ ಬಗೆಗೂ ಸಂಘಗಳು ಚಿಂತನೆ ಮಾಡಬೇಕು. ಸ್ವಯಂ ನಿಯಂತ್ರಣದ ಕಡೆಗೆ ಆದ್ಯತೆ ನೀಡಬೇಕು.

### ಪರಿಸಮಾಪ್ತಿ

ಒಟ್ಟಾರೆ ಸಹಕಾರಿ ಸಂಸ್ಥೆಗಳು ಜನತಾ ಚಳವಳಿಯಾಗಿ ಸಂಪೂರ್ಣ ಸ್ವಾಯತ್ತತೆ ಸ್ವಾವಲಂಬನೆ ಮತ್ತು ಸ್ವಾಭಿಮಾನ ಈ ಮೂರು ಪ್ರಮುಖ ಅಂಶಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಸಹಕಾರಿ ಸಂಸ್ಥೆಗಳು ಸದಸ್ಯರುಗಳ ಕಾಮಧೇನು ಕಲ್ಪವೃಕ್ಷವಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಚಳವಳಿಯ ಉದ್ದೇಶ ಸಂಪೂರ್ಣವಾಗಿ ಸಫಲತೆ ಹೊಂದುತ್ತದೆ. ಈ ಬಗ್ಗೆ ಸಹಕಾರಿಗಳು ಹಾಗೂ ಸಹಕಾರಿ ಚಳವಳಿಯಲ್ಲಿ ನಿಷ್ಠೆಯುಳ್ಳ ಶಾಸಕರು, ಸಂಸದರು ಗಮನ ಹರಿಸುವುದು ಅಗತ್ಯ.

**॥ ಸಹಕಾರಂ ಗೆಲ್ಗೆ ಸಹಕಾರಂ ಬಾಳ್ಗೆ ॥**

---

....39ನೇ ಪುಟದಿಂದ

ಅಂತಹ ಸ್ಥಿತಿಯನ್ನು ರೈತ ಒಂದೇ ಬೆಳೆ ಬೆಳೆದು ಜೀವನ ನಡೆಸುತ್ತೇನೆ ಎಂದರೆ ಸಾಧ್ಯವಿಲ್ಲದ ಮಾತು. ಆದ್ದರಿಂದಲೇ ನಾನು ಮಿಶ್ರ ಬೆಳೆ ಪದ್ಧತಿಗೆ ಒತ್ತು ನೀಡುವುದಕ್ಕೆ ಯೋಚಿಸಿದೆ. ನಮ್ಮ 10 ಎಕರೆ ಜಮೀನಿನಲ್ಲಿ, 2100 ಶ್ರೀಗಂಧ, 1500 ದಾಳಿಂಬೆ, 90 ಮಾವು, 300 ನಿಂಬೆ, 800 ಸೀಬೆ, 150 ನೇರಳೆ, 150 ಬೆಟ್ಟದ ನೆಲ್ಲಿಕಾಯಿ, 150 ನುಗ್ಗೆ, 100 ಕರಿಬೇವು, 100 ಮಲ್ಲಿಗೆ, 100 ತೆಂಗು, 450 ಸೀತಾಫಲದ ಮರಗಳಿವೆ. ಶ್ರೀಗಂಧ ಮುಖ್ಯ ಬೆಳೆಯಾಗಿದ್ದರೂ ಇದು.

ಪರಾವಲಂಬಿಯಾದ್ದರಿಂದ ಬೇರೆ ಮರಗಳ ಆಧಾರದ ಮೇಲೆ ಅದು ಬೆಳೆಯುತ್ತದೆ. ಆದ್ದರಿಂದಲೇ ಬೇರೆ ಮರಗಳನ್ನೂ ಬೆಳೆಸಿದ್ದೇನೆ. ಇದರೊಟ್ಟಿಗೆ ಕುರಿಸಾಕಾಣಿಕೆ, ಜೇನು ಸಾಕಾಣಿಕೆ, ಕೋಳಿ ಸಾಕಾಣಿಕೆ, ಹೈನುಗಾರಿಕೆಯನ್ನೂ ಮಾಡುತ್ತಾರೆ.

### ಶ್ರೀಮತಿ ಉಮಾದೇವಿ

ಮಹಿಳೆಯರಿಗೂ ಸಮಾನ ನ್ಯಾಯ ಹಾಗೂ ಸಮಾನವಾದ ಮೀಸಲಾತಿ ಸಿಗಬೇಕೆಂಬ ಕಾನೂನು ನಮ್ಮ ದೇಶದಲ್ಲಿ ಈಗಾಗಲೇ ಜಾರಿಯಲ್ಲಿದೆ. ಆದ್ರೆ ಅದೆಷ್ಟೋ ಮಹಿಳೆಯರು ಇವತ್ತಿನ ದಿನದಲ್ಲಿ ಮದುವೆಯಾದ ನಂತರ ಸಮಾಜದ ಮುಖ್ಯವಾಹಿನಿಗೆ ಬರುವುದಕ್ಕೆ ಹೆದರುತ್ತಾರೆ. ಆದ್ರೆ ಇಲ್ಲೊಬ್ಬ ದಿಟ್ಟ ಮಹಿಳೆ ನಾವು ಸಮಾಜದಲ್ಲಿ ಯಾರಿಗೇನೂ ಕಮ್ಮಿಯಿಲ್ಲ ಎಂಬಂತೆ ಬದುಕುತ್ತಿದ್ದಾರೆ. ಈ ಮಹಿಳೆ ಕೃಷಿಗೂ ಸೈ, ಉಳುಮೆಗೂ ಸೈ, ಹೋರಾಟಕ್ಕೂ ಸೈ ಅಲ್ಲದೆ ಮಹಿಳೆಯರಿಗೆ ಸಾಮಾಜಿಕ ನ್ಯಾಯ ಕೊಡಿಸೊಕ್ಕೂ ಸೈ ಎಂಬಂತೆ ಕೆಲಸ ಮಾಡ್ತಿದ್ದಾರೆ. ದೊಡ್ಡಬಳ್ಳಾಪುರ ತಾಲೂಕಿನ ಆಲಹಳ್ಳಿ ಗ್ರಾಮದ ನಿವಾಸಿಯಾದ ಈಕೆ ಪುರುಷರಿಗಿಂತಲೂ ಕಮ್ಮಿಯಿಲ್ಲ ಎಂಬಂತೆ ಕೃಷಿಯನ್ನ ಮಾಡುತ್ತಿದ್ದಾರೆ. ಕೃಷಿಯೊಂದೆ ಅಲ್ಲದೆ ಬೆಳೆದ ಬೆಳೆಗೆ ನ್ಯಾಯಬೆಲೆ ಸಿಗಬೇಕೆಂದು ಸರ್ಕಾರದ ವಿರುದ್ಧ ನಿರಂತರ ಹೋರಾಟವನ್ನ ಮಾಡುತ್ತಿದ್ದಾರೆ ಉಮಾದೇವಿ. ಓದಿರೋದು ಕೇವಲ 10ನೇ ತರಗತಿ ಮಾತ್ರ. 18 ವರ್ಷಗಳ ಹಿಂದೆ ತಾವು ವಾಸವಿದ್ದ ಗ್ರಾಮದಲ್ಲಿ ಚನ್ನೆಗೌಡ ಎಂಬುವವರನ್ನ ಪ್ರೀತಿಸಿ ಮದುವೆಯಾಗಿದ್ದಾರೆ.

ತಾವೇ ಸ್ವತಃ ಬ್ಯಾಂಕಿಗೆ ತೆರಳಿ ಸಾಲಮಾಡಿ, ಬೋರ್ ವೆಲ್ ಕೊರೆಸಿ, ಟ್ರ್ಯಾಕ್ಟರ್ ತಂದಿದ್ದಾರೆ. ತಾವೇ ಟ್ರ್ಯಾಕ್ಟರ್ ಓಡಿಸಿ ಉಳುಮೆ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, ಬೆಳೆದ ತರಕಾರಿಗಳನ್ನ ಟ್ರಾಕ್ಟರ್‌ಗೆ ತುಂಬಿಕೊಂಡು ಮಾರ್ಕೆಟ್‌ಗೂ ಹೋಗ್ತಾರೆ. ಕಳೆದ ಒಂದು ವಾರದ ಹಿಂದೆ ದೊಡ್ಡಬಳ್ಳಾಪುರದಲ್ಲಿ ಬೆಳೆದಿದ್ದ ಸೊಪ್ಪನ್ನ ಮಾರುಕಟ್ಟೆಗೆ ತೆಗೆದುಕೊಂಡು ಹೋಗಿದ್ದರು. ಅಲ್ಲಿ ದಲ್ಲಾಳಿಗಳ ಮೋಸದಿಂದ ರೈತರಿಗೆ ಬೆಲೆಯಲ್ಲಿ ಆಗುತ್ತಿರುವ ಮೋಸವನ್ನ ಖಂಡಿಸಿ ರಸ್ತೆಯಲ್ಲೆ ಹೋರಾಟವನ್ನ ಮಾಡಿದ್ರು. ಅಲ್ಲದೆ ರೈತರರಿಗೆ ಆಗುತ್ತಿರುವ ಅನ್ಯಾಯವನ್ನ ಸರ್ಕಾರದ ಗಮನಕ್ಕೆ ತರುವ ನಿಟ್ಟಿನಲ್ಲಿ ಟ್ರಾಕ್ಟರ್ ಹಾಕಿಕೊಂಡು ವಿಧಾನಸೌಧ ಚಲೋ ಹೋರಾಟವನ್ನ ಸಹ ಮಾಡಿದ್ದಾರೆ. ಇನ್ನೂ ರೈತರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಉಮಾದೇವಿ ನಿರಂತರ ಹೋರಾಟವನ್ನ ಮಾಡಿಕೊಂಡು ಬಂದಿದ್ದಾರೆ.

ಶಾಶ್ವತ ನೀರಾವರಿ ಹೋರಾಟ ಟ್ರಾಕ್ಟರ್ ಯಾತ್ರೆಯಲ್ಲಿ ರೈತರ ಪರ ಟ್ರಾಕ್ಟರ್ ಓಡಿಸಿಕೊಂಡು ಹೋರಾಟದಲ್ಲಿ ಭಾಗವಹಸಿದ್ದ ಏಕೈಕ ಮಹಿಳೆ. ಕೃಷಿ ಕ್ಷೇತ್ರ ಎಂದೊಡನೆ ಮೂಗು ಮುರಿಯುವ ಈ ಕಾಲದಲ್ಲಿ ಭೂತಾಯಿಯನ್ನೇ ನಂಬಿ, ಅನ್ನದಾತರಿಗಾಗಿ ನಿರಂತರ ಹೋರಾಟ ನಡೆಸುತ್ತಿರುವ ಉಮಾದೇವಿ ಮಹಿಳೆಯರಿಗೆ ಆದರ್ಶವೇ ಸರಿ.

# RBI NEWS - AUGUST 2019

K. Vittal Shetty, Banking consultant, Kohimavittal@Hotmail.com, Mobile : 9845699904

**Aug 07, 2019: -** Third Bi-monthly Monetary Policy Statement, 2019-20 Resolution of the Monetary Policy Committee (MPC) Reserve Bank of India

On the basis of an assessment of the current and evolving macroeconomic situation, the Monetary Policy Committee (MPC) at its meeting today decided to:

• reduce the policy repo rate under the liquidity adjustment facility (LAF) by 35 basis points (bps) from 5.75 per cent to 5.40 per cent with immediate effect.

Consequently, the reverse repo rate under the LAF stands revised to 5.15 per cent, and the marginal standing facility (MSF) rate and the Bank Rate to 5.65 per cent.

• The MPC also decided to maintain the accommodative stance of monetary policy.

These decisions are in consonance with the objective of achieving the medium-term target for consumer price index (CPI) inflation of 4 per cent within a band of +/- 2 per cent, while supporting growth.

**The next meeting of the MPC is scheduled during October 1, 3 and 4, 2019.**

| Policy Rates. Effective from August 07, 2019 | % |
|---|---|
| Policy Repo Rate | 5.40% |
| Reverse Repo Rate | 5.15% |
| Marginal Standing Facility Rate | 5.65% |
| BANK RATE | 5.65% |
| RESERVE RATIOS | |
| Cash Reserve Ratio. (CRR) | 4.00% |
| Statutory Reserve Ratio. (SLR). Effective from July 06,2019 | 18.75% |

**Aug 28, 2019**

**Scheduled Banks' Statement of Position in India as on Friday, August 16, 2019**

(Amount in Billions of ₹)

| | | SCHEDULED COMMERCIAL BANKS | | | ALL SCHEDULED BANKS | | |
|---|---|---|---|---|---|---|---|
| | | 17-Aug-18 | 02-AUG-2019 * | 16-AUG-2019 * | 17-Aug-18 | 02-AUG-2019 * | 16-AUG-2019 * |
| I | a) Deposit | 115111.68 | 127445.8 | 126801.99 | 118111.04 | 130856.55 | 130223.61 |
| | i) Demand | 11799 | 13240.47 | 13159.24 | 12090.01 | 13540.98 | 13458.84 |
| | ii) Time | 103312.68 | 114205.33 | 113642.64 | 106021.03 | 117315.57 | 116764.68 |
| II | INVESTMENTS | 35091.6 | 35570.62 | 35601.58 | 36031.8 | 36512.64 | 36543.16 |
| III | BANK CREDIT | 86731.63 | 97290.02 | 96829.66 | 89286.73 | 100127.84 | 99660.28 |

**IMPORTANT NEWS.**

**1). August 2, 2019: -** Financial Inclusion - Access to Banking Services - Basic Savings Bank Deposit Account (BSBDA)

Refer RBI circulars UBD.BPD.Cir.No.5/13.01.000/2012-13 dated August 17, 2012 and RPCD.CO.RRB.RCB.BC. No.24/07.38.01/2012-13 dated August 22, 2012 on the captioned subject.

The Basic Savings Bank Deposit (BSBD) Account was designed as a savings account which would offer certain minimum facilities, free of charge, to the holders of such accounts. In the interest of better customer service, it has been decided to make certain changes in the facilities associated with the account. Banks are now advised to offer the

following basic minimum facilities in the BSBD Account, free of charge, without any requirement of minimum balance.

(i) Deposit of cash at the bank branch as well as ATMs/CDMs

(ii) Receipt/ credit of money through any electronic channel or by means of deposit /collection of cheques drawn by Central/State Government agencies and departments

(iii) No limit on number and value of deposits that can be made in a month

(iv) Minimum of four withdrawals in a month, including ATM withdrawal

(v) ATM Card or ATM-cum-Debit Card

**The BSBD Account shall be considered a normal banking service available to all.**

Banks are free to provide additional value-added services, including issue of cheque book, beyond the above minimum facilities, which may/may not be priced (in a non-discriminatory manner) subject to disclosure. The availment of such additional services shall be at the option of the customers. However, while offering such additional services, banks shall not require the customer to maintain a minimum balance. Offering such additional services will not make it a non-BSBD Account, so long as the prescribed minimum services are provided free of charge.

The holders of BSBD Account will not be eligible for opening any other savings bank deposit account in that bank. If a customer has any existing savings bank deposit account in that bank, he/she will be required to close it within 30 days from the date of opening a BSBD Account. Further, before opening a BSBD account, the bank should obtain a declaration from the customer that he/she is not having a BSBD account in any other bank.

The instructions issued on free transactions available for normal savings bank account in own-bank/other bank ATMs vide circulars DPSS. CO.PD.No.316/02.10.002/2014-2015 dated August 14, 2014 and DPSS. CO.PD. No.659/02.10.002/2014-2015 dated October 10, 2014 are not applicable to BSBD accounts. The minimum free withdrawals available to the BSBD Account holders can be made at all ATMs (own-bank/other bank ATMs).

8. These instructions will come into force with effect from September 1, 2019. Banks are advised to frame Board approved policy / operational guidelines in this regard.

**2).Aug 07, 2019: -** Statement on Developmental and Regulatory Policies.

I. Financial Markets

II. Payment and Settlement Systems

Round-the-Clock Availability of National Electronic Funds Transfer System

Currently, the National Electronic Funds Transfer (NEFT) payment system operated by the Reserve Bank as a retail payment system is available for customers from 8.00 am to 7.00 pm on all working days of the week (except 2nd and 4th Saturdays of the month). As mentioned in the Payment System Vision 2021 document, the Reserve Bank will make available the NEFT system on a 24x7 basis from December 2019. This is expected to revolutionise the retail payments system of the country.

**'On-tap' Authorisation for Retail Payment Systems**

As announced in the Statement on Developmental and Regulatory Policies of June 6, 2018, the Reserve Bank published a policy paper on January 21, 2019 for public consultation on minimising concentration risk in retail payment systems from a financial stability perspective. Comments/feedback received from a wide array of individuals, public and private entities, institutions and industry associations suggested the need to encourage more players to participate in and promote pan-India payment platforms. Accordingly, in order to benefit from diversification of risk as also to encourage innovation and competition, it has been decided to offer 'on tap' authorisation to entities desirous to function/operate/provide platforms for

i. Bharat Bill Payment Operating Unit (BBPOU);

ii. Trade Receivables Discounting System (TReDS); and

iii. White Label ATMs (WLAs).

**Instructions to this effect will be issued by the end of September 2019.**

Credit to the Priority Sector – Permitting banks to on-lend through NBFCs

With a view to further increasing the credit flow to certain priority sectors which contribute significantly to the economic growth in terms of export and employment, and recognizing the role played by NBFCs in providing credit to these sectors, it has been decided to allow, subject to certain conditions, bank lending to registered NBFCs (other

than MFIs) for on-lending to Agriculture (investment credit) up to ₹10.0 lakhs; Micro and Small Enterprises up to ₹ 20.0 lakh and housing up to ₹ 20.0 lakh per borrower (up from ₹10.0 lakh at present) to be classified as priority sector lending.

Detailed guidelines on the above measures will be issued by the end of August 2019.

**3). August 14, 2019 : -** Usage of ATMs – Free ATM transactions – Clarifications

Refer RBI circulars DPSS.CO.PD.No.316/02.10.002/2014-2015 dated August 14, 2014 and DPSS.CO.PD.No. 659/02.10.002/2014 -2015 dated October 10, 2014 on the subject.

It has come to our notice that transactions that have failed due to technical reasons, non-availability of currency in ATMs, etc., are also included in the number of free ATM transactions.

It is hereby clarified that transactions which fail on account of technical reasons like hardware, software, communication issues; non-availability of currency notes in the ATM; and other declines ascribable directly / wholly to the bank / service provider; invalid PIN / validations; etc., shall not be counted as valid ATM transactions for the customer. Consequently, no charges therefor shall be levied.

Non-cash withdrawal transactions (such as balance enquiry, cheque book request, payment of taxes, funds transfer, etc.), which constitute 'on-us' transactions (i.e., when a card is used at an ATM of the bank which has issued the card) shall also not be part of the number of free ATM transactions.

**4). August 21, 2019: -** Real Time Gross Settlement (RTGS) System – Increase in operating hours.

RTGS system is available for customer transactions from 8:00 am to 6:00 pm and for inter-bank transactions from 8:00 am to 7:45 pm. In order to increase the availability of the RTGS system, it has been decided to extend the operating hours of RTGS and commence operations for customers and banks from 7:00 am.

**The RTGS time window with effect from August 26, 2019 will, therefore, be as under:**

| Sr. No. | Event | Time |
|---|---|---|
| 1. | Open for Business | 07:00 hours |
| 2. | Customer transactions (Initial Cut-off) | 18:00 hours |
| 3. | Inter-bank transactions (Final Cut-off) | 19:45 hours |
| 4. | IDL Reversal | 19:45 hours - 20:00 hours |
| 5. | End of Day | 20:00 hours |

**5). Aug 07, 2019: -** RBI issued Directions to The Vaish Co-operative Commercial Bank Ltd., New Delhi,

**6). Aug 14, 2019: -** RBI had placed the Shivam Sahakari Bank Ltd., Ichalkaranji, Dist : Kolhapur, Maharashtra

**7). Aug 16, 2019: -** RBI Directions to The Mapusa Urban Co-operative Bank of Goa Ltd,

**8). Aug 16, 2019: -** RBI had issued directions to Dr. Shivajirao Patil Nilangekar Co-operative Bank Ltd., Nilanga,

**9). Aug 20, 2019: -** RBI had placed the Adoor Co-operative Urban Bank Ltd., Adoor, Kerala

**10). Aug 30, 2019: -** Rupee Co-operative Bank Ltd., Pune, Maharashtra

**Source: www.rbi.org.in**

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಫೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ–585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010